
ಇನ್‌ಫೋಸಿಸ್ ಫೌಂಡೇಶನ್ ದತ್ತಿ ಪ್ರಕಟಣೆ

ವೈಜ್ಞಾನಿಕ ವಿಶೇಷತೆಗಳು

ಡಾ. ವೆಂಕಟಯ್ಯ ಅಪ್ಪಗೆರೆ



ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

BVP-1211-27/2/17

1176-(5)

ಇನ್‌ಫೋಸಿಸ್ ಫೌಂಡೇಶನ್ ದತ್ತಿ ಪ್ರಕಟಣೆ

ವೈಜ್ಞಾನಿಕ ವಿಶೇಷತೆಗಳು

ಡಾ. ವೆಂಕಟಯ್ಯ ಅಪ್ಪಗೆರೆ

ಶುಭವಾಗಲಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

VAIJNANIKA VISHESHATEGALU
by : Dr. Venkataiah Appagere
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 55+v Price : Rs. 25=00 ; 2004

ಪ್ರಥಮ ಮುದ್ರಣ : ೨೦೦೪
ಪ್ರತಿಗಳು : ೧೦೦೦
ಬೆಲೆ : ಇಪ್ಪತ್ತೈದು ರೂಪಾಯಿಗಳು

ಇನ್‌ಫೋಸಿಸ್ ಫೌಂಡೇಶನ್ ದತ್ತಿ ಪ್ರಕಟಣೆ

ಅಧ್ಯಕ್ಷರು

ಧರ್ಮದರ್ಶಿ ಹರಿಕೃಷ್ಣ ಪುನರೂರು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೯ ವರ್ಷಗಳ ದೀರ್ಘಕಾಲದ ಇತಿಹಾಸ ಹೊಂದಿರುವ ಪರಿಷತ್ತು ಅನೇಕ ಸಾಹಿತ್ಯ ಕೃತಿಗಳ ಪ್ರಕಟಣಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ಕ್ಕೂ ಹೆಚ್ಚು ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಈ ದಿಕ್ಕಿನಲ್ಲಿ ಅನೇಕ ದಾನಿಗಳು ಉತ್ತಮ ವೈಚಾರಿಕ ಕೃತಿಗಳ ಪ್ರಕಟಣೆಗಾಗಿ ಪರಿಷತ್ತಿನಲ್ಲಿ ದತ್ತಿಗಳನ್ನು ಸ್ಥಾಪಿಸಿ, ಆ ದತ್ತಿಯ ಮೂಲದಿಂದ ಬರುವ ಬಡ್ಡಿಯ ಹಣದಿಂದ ಪ್ರತಿವರ್ಷವೂ ಒಂದೊಂದು ಅತ್ಯುಪಯುಕ್ತ ಗ್ರಂಥವೊಂದನ್ನು ಪ್ರಕಟಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ಪ್ರಸ್ತುತ ಡಾ. ವೆಂಕಟಯ್ಯ ಅಪ್ಪಗೆರೆ ಅವರು ಸಿದ್ಧಪಡಿಸಿರುವ 'ವೈಜ್ಞಾನಿಕ ವಿಶೇಷತೆಗಳು' ಎಂಬ ಈ ಕೃತಿಯು **'ಇನ್‌ಫೋಸಿಸ್ ಫೌಂಡೇಶನ್ ದತ್ತಿನಿಧಿ'** ನೆರವಿನಿಂದ ಪ್ರಕಟವಾಗಿದೆ. ದತ್ತಿ ದಾನಿಗಳಾದ ಇನ್‌ಫೋಸಿಸ್ ಫೌಂಡೇಶನ್ ಧರ್ಮದರ್ಶಿಗಳಾದ ಶ್ರೀಮತಿ ಸುಧಾಮೂರ್ತಿ ಅವರಿಗೂ ಮತ್ತು ಪುಸ್ತಕ ರಚನೆಮಾಡಿಕೊಟ್ಟ ಲೇಖಕರಾದ ಡಾ.ವೆಂಕಟಯ್ಯ ಅಪ್ಪಗೆರೆ ಅವರಿಗೂ ನನ್ನ ಕೃತಜ್ಞತೆಗಳು. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೂ ಪ್ರೀತಿ ಪೂರ್ವಕ ವಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

ಲೇಖಕರ ನುಡಿ

ನನ್ನ ಮೊದಲ ವೈಚಾರಿಕ ಕೃತಿ 'ಚಾರ್ವಾಕ' ಪ್ರಕಟಣೆಗೊಂಡದ್ದು ೧೯೯೨ರಲ್ಲಿ ವೈಚಾರಿಕ ವಲಯುದಲ್ಲಿ ಅದಕ್ಕೆ ದೊರೆತ ಅಭೂತಪೂರ್ವ ಮನ್ನಣೆಯಿಂದ ಪ್ರೋತ್ಸಾಹಗೊಂಡು ೧೯೯೮ರಲ್ಲಿ 'ಸಾಮಾನ್ಯ ಘಟಣೆಗಳ ವೈಜ್ಞಾನಿಕ ವಿಶ್ಲೇಷಣೆ' ಎಂಬ ವೈಚಾರಿಕ ಕೃತಿಯನ್ನು ರಾಜ್ಯದಲ್ಲೇ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಾದ ನವಕರ್ನಾಟಕ ಪಬ್ಲಿಕೇಷನ್ ರವರ ಮೂಲಕ ಹೊರತಂದೆ. ಈಗ ಅದು ನಾಲ್ಕನೇ ಮುದ್ರಣ ಕಂಡಿದೆ. ಈ ಕೃತಿಗಳ ನಂತರವು ಸಹ ನಾನು ಅನೇಕ ವೈಜ್ಞಾನಿಕ ಲೇಖನಗಳನ್ನು ಬರೆದಿರುವೆ. ಅವುಗಳು ರಾಜ್ಯದ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಮುಖವಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ 'ವಿಜ್ಞಾನ ಸಂಗಾತಿ'ಯಲ್ಲಿ ಪ್ರಕಟಗೊಂಡಿವೆ. ಆ ಬಿಡಿ ಲೇಖನಗಳ ಸಂಕಲನ ರೂಪವೇ ಈ 'ವೈಜ್ಞಾನಿಕ ವಿಶೇಷತೆಗಳು'.

ಇದು ಜಾಗತಿಕ ಮಟ್ಟದಲ್ಲಿ ಅತ್ಯಂತ ಪ್ರತಿಷ್ಠಿತ ಸಂಸ್ಥೆಯಾದ 'ಇನ್‌ಫೋಸಿಸ್'ನವರ ಪ್ರತಿಷ್ಠಾನದ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟಣೆಗೊಳ್ಳುತ್ತಿದೆ. ಇನ್‌ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಶ್ರೀಮತಿ ಸುಧಾ ಮೂರ್ತಿ ಯವರಿಗೂ, ಕನ್ನಡ ಸಾಹಿತ್ಯ ಪರಿಷತ್ತಿನ ಈಗಿನ ಅಧ್ಯಕ್ಷರಾದ ಶ್ರೀ ಹರಿಕೃಷ್ಣ ಪುನರೂರು ಅವರಿಗೂ ನನ್ನ ನಮನಗಳನ್ನು ಈ ಮೂಲಕ ಅರ್ಪಿಸುತ್ತೇನೆ. ಜೊತೆಗೆ ಈ ಕೃತಿಯನ್ನು ಪ್ರಕಟಣೆಗೆ ಆಯ್ಕೆ ಮಾಡಿದ ಪರಿಷತ್ತಿನ ಆಯ್ಕೆ ಸಮಿತಿಯವರಿಗೂ, ಪರಿಷತ್ತಿನ ಸದಸ್ಯರಿಗೆಲ್ಲಾ ನನ್ನ ಕೃತಜ್ಞತೆಗಳನ್ನು ಸಲ್ಲಿಸಿದ್ದೇನೆ.

ನನ್ನಲ್ಲಿ ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವವನ್ನು ಬಿತ್ತಿದ ಖ್ಯಾತ ಶಿಕ್ಷಣ ತಜ್ಞ, ವಿಚಾರವಾದಿ ಡಾ. ಎಚ್. ನರಸಿಂಹಯ್ಯ ನವರಿಗೆ ಮತ್ತು ನನ್ನ ಸಾಹಿತ್ಯ ಅಭಿರುಚಿಗೆ ನೀರೆರೆದು ಪೋಷಿಸಿದ ಬಾಲ್ಯಗೆಳೆಯ ಹಾಗೂ ಹಾಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತಿತ ಅಧ್ಯಕ್ಷ ಶ್ರೀ ಸು.ತ. ರಾಮೇಗೌಡರಿಗೆ ನಾನು ಚಿರಋಣಿಯಾಗಿದ್ದೇನೆ. ನಾನು ದಾನಿ ಸದಸ್ಯನಾಗಿರುವ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಪದಾಧಿಕಾರಿಗಳಿಗೆ ಮತ್ತು ನನ್ನ ಹುಟ್ಟೂರಿನ ಗೆಳೆಯ, ಸಹಪಾಠಿಗಳಿಗೆಲ್ಲರಿಗೂ ನನ್ನ ನೆನಹುಗಳನ್ನು ಸಲ್ಲಿಸುತ್ತೇನೆ.

ಮೊದಲಿಂದಲೂ ನನ್ನ ವೈಚಾರಿಕತೆಯನ್ನು ಬೆಂಬಲಿಸುತ್ತಾ ಬಂದಿರುವ ಡಾ. ಚನ್ನಣ್ಣ ವಾಲೀಕಾರ, ಡಾ. ಸಿದ್ಧಲಿಂಗಯ್ಯ, ಡಾ.ಬಾನಂದೂರು ಕೆಂಪಯ್ಯ, ಮೈಸೂರಿನ ಡಾ. ಕೆ. ಎಸ್. ಭಗವಾನ್ ಹಾಗೂ ಪ್ರಖ್ಯಾತ ಮನಃಶಾಸ್ತ್ರ ತಜ್ಞ ಡಾ. ಬಿ. ಕೃಷ್ಣಮೂರ್ತಿ ಅವರನ್ನು ಇಲ್ಲಿ ಮುಖ್ಯವಾಗಿ ನೆನಪಿಸಿಕೊಳ್ಳುವುದು ನನ್ನ ಆದ್ಯ ಕರ್ತವ್ಯ. ಬಳ್ಳಾರಿಯ 'ಸಂಸ್ಕೃತಿ ಪ್ರಕಾಶನ'ದ ಗೆಳೆಯ ಶ್ರೀ ಸಿ. ಮಂಜುನಾಥ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ಈ ಕೃತಿಯ ಅಭ್ಯಾಸದಿಂದ ವಾಚಕ ಮಹಾಶಯ ವರ್ಗದಲ್ಲಿ ವೈಜ್ಞಾನಿಕ ಮನೋಭಾವ ವೃದ್ಧಿಸುತ್ತದೆ ಎಂಬುದು ನನ್ನ ಆಶಯ ಅದು ಕೃತಿಯ ಸಾರ್ಥಕತೆಯೂ ಹೌದು.

ಡಾ. ವೆಂಕಟಯ್ಯ ಅಪ್ಪಗೆರೆ

ಪರಿವಿಡಿ

ದೀರ್ಘಾಯುಷ್ಯ~~~~~~~~~~~~~~~~~~~~~~~~~~~~

ವಿಜ್ಞಾನ ಮತ್ತು ತಂತ್ರಜ್ಞಾನ ಮಾನವ ಜೀವನದಲ್ಲಿ ಹಾಸುಹೊಕ್ಕಾಗಿದ್ದು, ನಿಸರ್ಗ ನೀಡಿರುವ ಕೊಡುಗೆಗಳಿಗಿಂತಲೂ ಹೆಚ್ಚಿನ ಕೊಡುಗೆಗಳನ್ನು ಮಾನವ ಬದುಕಿಗೆ ಇವು ನೀಡಿವೆ. ಅವುಗಳ ಫಲಶೃತಿಯಾದ ವಿದ್ಯುಚ್ಛಕ್ತಿ, ಪರಮಾಣು ತಂತ್ರಜ್ಞಾನ, ಕಂಪ್ಯೂಟರ್, ಯಂತ್ರ ಮಾನವ (ರೋಬೋಟ್); ನೀರಾವರಿ ಹಾಗೂ ಕೃಷಿ ಸಂಶೋಧನೆ, ಕೈಗಾರಿಕೆ, ಸಾರಿಗೆ ಸೌಲಭ್ಯ, ಬಾಹ್ಯಾಕಾಶ ಹಾಗೂ ಸಾಗರತಳ ಪ್ರಯೋಗಗಳು, ವೈದ್ಯಕೀಯ ಸೌಲಭ್ಯಗಳು, ಎಲೆಕ್ಟ್ರಾನಿಕ್ ಮುಂತಾದ ವೈಜ್ಞಾನಿಕ ಉಪಕರಣಗಳು ಮಾನವನ ಸಮಯವನ್ನು ಉಳಿಸಿ ಸಂಕಷ್ಟಗಳನ್ನು ಪರಿಹರಿಸಿ ಬದುಕನ್ನು ಸಾರ್ಥಕಗೊಳಿಸಿವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಮಾನವನ ಹುಟ್ಟಿನ 'ಆಪರೇಶನ್' ನಿಂದ ಹಿಡಿದು ಸಾವಿನ 'ಕ್ರಿಮೇಶನ್' ವರೆಗೂ ವಿಜ್ಞಾನ ಮಾನವನಿಗೆ ಅನಿವಾರ್ಯವಾಗಿದೆ. ಮುಂಜಾನೆ ಎದ್ದು ವಿದ್ಯುದ್ದೀಪದ 'ಬಟನ್' ಒತ್ತಿ ಆಹಾರಧಾನ್ಯವನ್ನು ಮೆಶಿನ್‌ನಲ್ಲಿ ಬೀಸಿ ಪ್ರಾರಂಭವಾಗುವ ದಿನಚರಿ ರಾತ್ರಿ ಮಲಗುವವರೆಗೂ ವಿಜ್ಞಾನ ಮಾನವನಿಗೆ ಬೇಕೆಬೇಕು. ಬೇರೆ ಇನ್ನಾವುದೆ ಮಾಧ್ಯಮ ವಿಜ್ಞಾನದಷ್ಟು ಫಲಶೃತಿಗಳನ್ನು ಪ್ರಧಾನಮಾಡಿಲ್ಲ. ದೇವಾಲಯ ಕೊಡಲಾರದ್ದನ್ನು ಪ್ರಯೋಗಾಲಯ ನೀಡಿದೆ. ಜ್ಯೋತಿಷ್ಯ, ಪಾರಮಾರ್ಥಿಕತೆ, ಪವಾಡ, ಮಾಂತ್ರಿಕತೆ, ಭಕ್ತಿ ಪೂಜಾಮಾರ್ಗಗಳು ಇನ್ನಿತರ ಯಾವುದೇ ಮಾಧ್ಯಮ ನೀಡಲಾರದಷ್ಟು ಕೊಡುಗೆಗಳನ್ನು ವಿಜ್ಞಾನ ನೀಡಿದೆ, ನೀಡುತ್ತಾ ಬಂದಿದೆ.

ಆದಾಗ್ಯೂ, ವಿಜ್ಞಾನ ಎಷ್ಟು ಮುಂದುವರೆದಿದ್ದರೂ ಸಾವನ್ನು ಜಯಿಸುವಲ್ಲಿ ಸೋತಿದೆ ಎನ್ನುವವರಿದ್ದಾರೆ, ಇದನ್ನು ಸಧ್ಯಕ್ಕೆ ಒಪ್ಪಬೇಕಾಗಿದೆ, ಇದು ವಿಜ್ಞಾನದ ಮಿತಿ. ಸಧ್ಯದ ಭವಿಷ್ಯತ್ತಿನಲ್ಲಿ ಈ ಮಿತಿಗಳನ್ನು ಮೀರಿ ವಿಸ್ಮಯಕಾರಿ ಸಾಧನೆಗೈಯ್ಯುವ ಹಂತದಲ್ಲಿ ವಿಜ್ಞಾನ ದಾಪುಗಾಲು ಹಾಕುತ್ತಿದೆ.

ಅಂತಹ ಉದ್ದೇಶಿತ ವಿಸ್ಮಯ 'ದೀರ್ಘಾಯುಷ್ಯ'ದ ಸಾಧನೆಯ ಬಗ್ಗೆ ಇಲ್ಲಿ ಪ್ರಸ್ತಾಪಿಸೋಣ.

ಹಾಲು ಕೆಡದಂತೆ, ಮಾಡಿಟ್ಟ ಅಡುಗೆ ಹಳಸದಂತೆ, ಮಾಂಸ-ತರಕಾರಿ, ಹಣ್ಣುಗಳು ಹಾಳಾಗದಂತೆ ಕಾಪಾಡಲು ಯಾಂತ್ರಿಕ ಶೀತಲೀಕರಣ ಸಾಧನವಾದ 'ರೆಫ್ರಿಜರೇಟರ್' (ಫ್ರಿಡ್ಜ್)ನ್ನು ಬಳಸುತ್ತೇವೆ. ಅಂದರೆ ಆ ಪದಾರ್ಥಗಳ ಆಯುಷ್ಯವನ್ನು ೨-೩ ದಿನಗಳವರೆಗೆ ಮುಂದೂಡುತ್ತವೆ. ಇದೇ ತಂತ್ರಜ್ಞಾನವನ್ನು ಮುಂದುವರೆಸಿ ಮನುಷ್ಯನೊಬ್ಬನನನ್ನು 'ಕೋಮಾ' ಸ್ಥಿತಿಗೆ ತಂದು ಅತಿ ಶೈತೀಕರಣ ಯಂತ್ರದಲ್ಲಿ ಆತನನ್ನು ಒಳಪಡಿಸಿ, ಹೊಕ್ಕಳು(ನಾಭಿ) ಮೂಲಕ

ಆತನ ಕೋಮಾ ದೇಹಕ್ಕೆ ಹೊರಗಡೆಯಿಂದ ನಳಿಕೆಗಳ ಸಂಪರ್ಕದಲ್ಲಿ ಪೋಷ್ಟಿಕಾಂಶಗಳನ್ನು ಆಗಾಗ್ಗೆ ಒದಗಿಸುತ್ತಿರಬೇಕು. ಇದು ಉದ್ದೇಶಿತ ವರ್ಷಗಳವರೆಗೆ ಸತತವಾಗಿ ಜರುಗುತ್ತಿರಬೇಕು. ಅಂತಹ ಶೈತೀಕರಣ ಯಂತ್ರವನ್ನು ಜಾಗರೂಕತೆಯಿಂದ ನೋಡಿಕೊಳ್ಳುತ್ತಿರಬೇಕು. ದೇಹದ ರಕ್ತಚಲನೆ ಮತ್ತು ಹೃದಯ ಬಡಿತಗಳನ್ನು ಹೊರಗಡೆಯಿಂದ ನಿಗಾವಣೆ (Monitoring) ಮಾಡುತ್ತಿರಬೇಕು. ಈ ರೀತಿಯಾಗಿ ೨೦-೩೦ ವರ್ಷಗಳಷ್ಟು ಶೈತ್ಯಾಗಾರದಲ್ಲಿ ಮನುಷ್ಯನನ್ನು ''ಕೋಮಾ' ಸ್ಥಿತಿಯಲ್ಲಿ ಸಂರಕ್ಷಿಸಿ ಹೊರತೆಗೆದಾಗ ಆತ ಮೊದಲಿನಂತೆಯೇ ಹೊರಬರುತ್ತಾನೆ. ಆತನ (ವಯಸ್ಸು) ಆಯಷ್ಯ ೨೦-೩೦ ವರ್ಷಗಳನ್ನು ಉಳಿಸಿಕೊಂಡಿರುತ್ತದೆ. ಆತ ಶೈತ್ಯಾಗಾರಕ್ಕೆ ಒಳಪಟ್ಟ ಸಮಯದಲ್ಲಿದ್ದ ಸ್ಥಿತಿಯಲ್ಲಿಯೇ ಹೊರಬರುತ್ತಾನೆ.

ಉದಾಹರಣೆ ಮೂವತ್ತು ವರ್ಷದ ಯುವಕ ಈ ಪ್ರಯೋಗಕ್ಕೆ ಒಳಪಟ್ಟು ಮೂವತ್ತು ವರ್ಷಗಳ ನಂತರವೂ ಮೂವತ್ತು ವರ್ಷದವನಾಗಿಯೇ ಹೊರಬರುತ್ತಾನೆ. ಆತನ ವಯಸ್ಸು ಆಗ ೬೦ ವರ್ಷಗಳಾಗಿರುವುದಿಲ್ಲ, ಹೊರಬಂದ ದಿನದಿಂದ ಆತನ ವಯಸ್ಸು ಗಣಿತವಾಗುತ್ತದೆ.

ಆದರೆ, ಇದು ಕೆಲವು ಸಾಮಾಜಿಕ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. ಆತನ ಪತ್ನಿ ಮುದುಕಿಯಾಗಿರುತ್ತಾಳೆ. ಮಗ ಮತ್ತು ಮಗಳು ಈತನಿಗಿಂತ ಹಿರಿಯರಾಗಿರುತ್ತಾರೆ. ಪತ್ನಿ ಜೊತೆ ಹೊರಟರೆ ಮಗನೆಂದೂ, ಮಕ್ಕಳ ಜೊತೆಗೆ ಹೊರಟರೆ ತಮ್ಮನೆಂದೂ ಗುರುತಿಸುತ್ತಾರೆ. ಬೌದ್ಧಿಕವಾಗಿ ಹೆಂಡತಿ ಮಕ್ಕಳು ಇವನಿಗಿಂತ ಪ್ರಬುದ್ಧರಾಗಿರುತ್ತಾರೆ. ಅನುಭವ ಪಕ್ವವಾಗಿರುತ್ತದೆ. ವಯಸ್ಸು, ದೇಹ ಮತ್ತು ಮನಸ್ಸುಗಳಿಂದ ಅವರು ಇವನಿಗಿಂತ ಹಿರಿಯರಾಗಿ ಸ್ಥಾನಮಾನಗಳಲ್ಲಿ ಅದಲು ಬದಲಾಗುವ ಸಂಭವವಿದೆ.

ಇದು ನಮ್ಮ ಪುರಾಣದ ಯಯಾತಿ ಚಕ್ರವರ್ತಿಯ ನೆನಪನ್ನು ತರುವುದಲ್ಲದೆ ಹಿಮ ಮಾನವರು ೫೦೦ ವರ್ಷಗಳಷ್ಟು ಬದುಕುತ್ತಾರೆಂಬ ನಂಬಿಕೆ ಇದೆ. ಹಿಮಾಲಯ ಪರ್ವತದಲ್ಲಿ ಈಗಲೂ ಅಂತಹ ಮಾನವರಿದ್ದಾರೆಂದು ಪ್ರತೀತಿ. ಹಿಮಬೀಳುವ ಚಳಿರಾಷ್ಟ್ರಗಳ ಜನರು ದೀರ್ಘಾಯುಷಿಗಳಾಗಿರುತ್ತಾರೆ. ಉದಾಹರಣೆಯೆಂದರೆ, ರಷ್ಯಾದವರು ಪ್ರಪಂಚದಲ್ಲಿಯೇ ದೀರ್ಘಾಯುಷಿಗಳು, ಅವರಲ್ಲಿ ಶತಾಯುಷಿಗಳು ಅಧಿಕ. ಇದಕ್ಕೆಲ್ಲಾ ಕಾರಣ ಅಲ್ಲಿಯ ಶೀತಲ ವಾತಾವರಣ.

ಗಮನಿಸಿ! ಇದು ಇನ್ನೂ ವೈಜ್ಞಾನಿಕ ಕಥೆ (Science Fiction) ಯಾಗಿಯೇ, ಉಳಿದಿದೆ. ಪ್ರಯೋಗ ಮುಂದುವರೆಯುತ್ತಿದೆ. ವಿಜ್ಞಾನ ಸಮೂಹ ಇದರ ಸಾಧಕತೆಯನ್ನು ಒಂದೆರಡು ದಶಕಗಳಲ್ಲಿಯೇ ಕಾಣುವ ವಿಶ್ವಾಸವನ್ನಿರಿಸಿಕೊಂಡಿದ್ದಾರೆ.

★

ಗತ ಹಂಪಿ ವೈಭವದ ನೈಜ ವೀಕ್ಷಣೆ ~~~~~~~~~~~~~~

ಕನ್ನಡದ ಹೆಸರಾಂತ ವಿದ್ವಾಂಸರಾದ ಶ್ರೀ ಪು.ತಿ. ನರಸಿಂಹಾಚಾರ್ಯ (ಪು.ತಿ.ನ)ರು ಒಂದು ಕಡೆ ಹೇಳಿದ ಮಾತು ನೆನಪಾಗುತ್ತದೆ. ಇಂದಿನ ಬಾಳು ನಾಳಿಗೆ ಚರಿತ್ರೆ. ನಾಡಿದ್ದಿಗೆ ಪುರಾಣ, ಗಾಂಧೀಜಿಯವರ ಹೋರಾಟದ ಬಾಳು ಇಂದಿನ ಪೀಳಿಗೆಗೆ ಐತಿಹಾಸಿಕವಾಗಿ ಕಾಣುತ್ತಿರುವುದು, ಮುಂದಿನ ಪೀಳಿಗೆಗೆ ಪೌರಾಣಿಕವಾಗಿ ಪರಿಣಮಿಸುತ್ತಿದೆ. ಇತಿಹಾಸ ಕಂಡ ಅಂದಿನ ರಾಜಕುಮಾರ ಸಿದ್ಧಾರ್ಥ ಬುದ್ಧ(ಜ್ಞಾನಿ)ನಾಗಿ ಪರಿಣಮಿಸಿದ್ದು, ಈಗಾಗಲೇ ಇಂದಿನ ಜನಮಾನಸದಲ್ಲಿ ಭಗವಾನ್ ಬುದ್ಧನಾಗಿ ಪುರಾಣಕ್ಕೆ ಸೇರ್ಪಡೆಯಾಗಿರುವುದು ಪು.ತಿ.ನ ರವರ ಮಾತನ್ನು ಸಮರ್ಥಿಸುತ್ತದೆ. ಇದು ಮಾನವನ ಮನೋದೌರ್ಬಲ್ಯದ ಒಂದು ಲಕ್ಷಣ. ಗತಿಸಿದ ಘಟನೆಗಳನ್ನು ಇಲ್ಲ ವೈಭವೀಕರಿಸುವುದು, ಇಲ್ಲವೆ ದೈವೀಕರಿಸುವುದು. ಇದು ಇತಿಹಾಸವನ್ನು ತಿರುಚುವ ಕಾಲಘಟ್ಟದ ಪ್ರಕ್ರಿಯೆ. ಇದು ಇತಿಹಾಸದ ಸ್ಥಿತಿಯೂ ಹೌದು, ಮಿತಿಯೂ ಹೌದು.

ಆದರೆ ವಿಜ್ಞಾನದ ಸಂಗತಿಗಳು ಹಾಗಲ್ಲ. ಒಮ್ಮೆ ವೈಜ್ಞಾನಿಕವಾಗಿ ಆಧರಿಸಿ ಅಂಗೀಕರಿಸಿದ್ದು ಯಾವುದೇ ಕಾಲಮಾನಗಳಲ್ಲೂ ಮಾನ್ಯವಾಗುತ್ತವೆ. ಅನುಷ್ಠಾನಗೊಳ್ಳುತ್ತವೆ. ಅಂದರೆ ಯಾವುದೇ ವ್ಯಕ್ತಿ ಯಾವುದೇ ಸ್ಥಳದಲ್ಲಿ, ಯಾವುದೇ ಸಮಯದಲ್ಲಿ ಎಷ್ಟೆಷ್ಟು ಬಾರಿ ಪ್ರಮಾಣಿಸಿದರೂ ಒಂದೇ ಫಲಿತಾಂಶ ಬರುವುದಕ್ಕೆ ವಿಜ್ಞಾನದ ಅಂಗೀಕಾರ ಅಥವಾ ವಿಜ್ಞಾನದ ಸಿದ್ಧಾಂತವಾಗುತ್ತದೆ. ಇಲ್ಲವಾದರೆ ಅದು ವಿಜ್ಞಾನದ ಕಲ್ಪನೆಯಾಗಿಯೇ ಉಳಿದಿರುತ್ತದೆ. ಅಂತಹ ವಿಜ್ಞಾನ ವಿಸ್ಮಯದ ಆವಿಷ್ಕಾರಕ್ಕಾಗಿ ಅವಿಶ್ರಾಂತ ಪ್ರಯೋಗಗಳು ಜರುಗುತ್ತಲೇ ಇರುತ್ತವೆ. ಇಂತಹ ಪ್ರಯತ್ನಗಳಲ್ಲಿ ವಿಜ್ಞಾನಿಗಳು ಬಹಳಷ್ಟು ಯಶಸ್ಸಾದುದನ್ನು ಸಾಧಿಸಿದ್ದಾರೆ.

ಅಂತಹ ವಿಜ್ಞಾನ ವಿಸ್ಮಯವೊಂದು ಇತಿಹಾಸವನ್ನು ಹೇಗೆ ವರ್ತಮಾನವಾಗಿ ನೋಡಬಹುದು ಎಂಬ ಆವಿಷ್ಕಾರದೊಂದಿಗೆ ಆಧುನಿಕ ವಿಜ್ಞಾನಕ್ಕೆ ಅನುವು ಮಾಡಿಕೊಡುತ್ತಿದೆ.

'ಟ್ರಾಯ್ ಆಫ್ ವಾರ್'-ನ ಎಲಿಪ್ರಟ್ ಪ್ರಕರಣ, ಅರೇಬಿಯನ್ ನೈಟ್ಸ್‌ನ ಸಾಹಸ ಕಥೆಗಳು, ಡ್ರಾಗನ್‌ನ ಭಯಾನಕಗಳು, ರಾಮಾಯಣ, ಮಹಾಭಾರತ, ಕುರುಕ್ಷೇತ್ರ ಯುದ್ಧ ಇತ್ಯಾದಿಗಳು ಈಗಾಗಲೇ ಪುರಾಣದ ಪರಿಧಿಯೊಳಗೆ ಸೇರಿ ಹೋಗಿರುವುದರಿಂದ. ಇತಿಹಾಸದಲ್ಲಿ ದಾಖಲಾಗಿರುವ ಅಲೆಕ್ಸಾಂಡರನ ವಿಶ್ವ ಪರ್ಯಟನೆ, ನೆಪೋಲಿಯನ್ ಬೋನಾಪಾರ್ಟ್‌ನ ಚಕ್ರಾಧಿಪತ್ಯ, ಹಿಟ್ಲರ್‌ನ ಅಂತಿಮ ದಿನಗಳು, ಅಶೋಕ ಚಕ್ರವರ್ತಿಯ ಸಾರ್ವಭೌಮತ್ವ, ಅಕ್ಬರ್ ದೊರೆಯ ಆಡಳಿತ ವೈಖರಿ, ಹಂಪಿಯ ವಿಖ್ಯಾತ ವೈಭವಗಳನ್ನು ಕಣ್ಣಾರೆ ನೋಡಿ, ಇತಿಹಾಸವನ್ನು ವಾಸ್ತವವಾಗಿ ಕಾಣಬಹುದೇ? ಆಶ್ಚರ್ಯವಲ್ಲವೆ? ಭವಿಷ್ಯತ್ತಿನಲ್ಲಿ ವಿಜ್ಞಾನ ಇದನ್ನು ಸಾಧಿಸಲಿದೆ ಹೇಗೆ?

ದೂರದ ಕೆರೆಯ ಬದಿಯಲ್ಲಿ ಅಗಸನೊಬ್ಬ ಬಟ್ಟೆಯನ್ನು ಎತ್ತಿ ಒಗೆಯುತ್ತಿರುವುದನ್ನು ನೀವು ಕಾಣುವಿರಿ. ನೀವು ಗಮನಿಸಿದರೆ, ಮೇಲಿಂದ ಎತ್ತಿ ಕಲ್ಲಿನ ಮೇಲೆ ಬಾರಿಸಿದ ಶಬ್ದ, ದೂರದಲ್ಲಿ ನಿಂತ ನಿಮಗೆ ಅಗಸನ ಕೈಯಿಂದ ಮೇಲೆ ಬಂದಾಗ ಕೇಳಿಸುತ್ತದೆ. ಅದು ಕಲ್ಲಿನ ಮೇಲೆ ತಾಕಿದ ತಕ್ಷಣ ಕೇಳಿಸದು ಅದು ಏಕೆ?

ಕಾರಣ ಶಬ್ದದ ವೇಗ ಬೆಳಕಿನ ವೇಗಕ್ಕಿಂತ ಕಡಿಮೆ. ದೂರದಲ್ಲಿ ನಿಂತ ನಿಮಗೆ ಕಂಡ ದೃಶ್ಯ ಬೆಳಕಿನ ಅತಿ ವೇಗದಲ್ಲಿ ಗೋಚರಿಸಿ, ಕಡಿಮೆ ವೇಗದ ಶಬ್ದ ನಂತರ ಕೇಳಿಸುತ್ತದೆ. ಅಂದರೆ ಯಾವುದೇ ದೃಶ್ಯವಾಗಲೀ, ಶ್ರವಣವಾಗಲಿ, ಘಟಿಸಿದ ಕಾಲದ ನಂತರವೇ ನಮ್ಮ ಅನುಭವಕ್ಕೆ ಬರುವುದು. ನಾವು ಯಾವುದೇ ದೃಶ್ಯವನ್ನು ನೋಡಲಿ ಅಥವಾ ಶಬ್ದವನ್ನು ಆಲಿಸಲಿ, ಅದು ತನ್ನ ಅಸ್ತಿತ್ವದ ಕಾಲದ ಅತ್ಯಂತ ನಿಕೃಷ್ಟ ದಶಮಾಂಶದ ಹಿಂದೆ ಘಟಿಸಿದ್ದು, ಎನ್ನುವುದನ್ನು ತಿಳಿಯಬೇಕು. ನೀನು ಇನ್ನೊಬ್ಬನನ್ನು ನೋಡುತ್ತಿದ್ದೇನೆ ಎಂದರೆ ಆತನ ದೇಹದ ಮೇಲೆ ಬಿದ್ದ ಬೆಳಕು ಪ್ರತಿಫಲನ ಹೊಂದಿ ನಂತರ ಚಲಿಸಿ, ನಿಮ್ಮ ಕಣ್ಣಿನ ಅಕ್ಷಿಪಟಲದ ಪರದೆಯ ಮೇಲೆ ಮೂಡಿದಾಗ ಆತನನ್ನು ನೀವು ನೋಡುತ್ತೀರಿ. ಅಂದರೆ ಆತನ ನೈಜ ದೃಶ್ಯವನ್ನು ಕನಿಷ್ಠಾತೀತ ಕನಿಷ್ಠ ಕ್ಷಣಗಳ ನಂತರ (Fraction of Fraction of Secondly) ನೋಡಿರುತ್ತೀರಿ. ದೂರದಲ್ಲಿ ಚಲಿಸುವ ರೈಲು, ಅತ್ಯಂತ ಎತ್ತರದಲ್ಲಿ ಹಾರುತ್ತಿರುವ ವಿಮಾನ, ಚಲಿಸುವ ಮೋಡ ಇತ್ಯಾದಿಗಳು ಅವುಗಳ ನೈಜ ವೇಗಕ್ಕಿಂತಲೂ ಕಡಿಮೆ ವೇಗದಲ್ಲಿ ಚಲಿಸುತ್ತಿರುವಂತೆ ಕಾಣುವುದು ಈ ಬೆಳಕಿನ ವೇಗದ ಮಾಧ್ಯಮದಿಂದ. ಅದೇ ರೈಲನ್ನು ನೀವು ಹೇಗಾದರೂ ಮಾಡಿ ಆ ಅತಿ ದೂರದ ಅಂತರವನ್ನು ಕ್ರಮಿಸಿ, ತತ್‌ಕ್ಷಣದಲ್ಲಿ ಧಾವಿಸಿ ಬಂದು ಹತ್ತಿರದಲ್ಲಿ ನೋಡಿದರೆ ನಿಮಗೆ ಪರಮಾಶ್ಚರ್ಯವಾಗುವ ಅದರ ಬಿರುಸಿನ ವೇಗದ ನೈಜ ಅನುಭವವಾಗುತ್ತದೆ.

ಬೆಳಕಿನ ವೇಗ ಒಂದು ಸೆಕೆಂಡಿಗೆ ೨,೩೬,೦೦೦ ಮೈಲಿಗಳು, ಅಂದರೆ ೩ ಲಕ್ಷ ಕಿ.ಮೀಗಳು. ಲಕ್ಷಾಂತರ ಮೈಲಿ, ದೂರದಲ್ಲಿರುವ ಸೂರ್ಯನ ಕಿರಣವೊಂದು ಭೂಮಿಯನ್ನು ಸೇರಲು ಸುಮಾರು ೫ ೧/೨ ಸೆಕೆಂಡುಗಳು ಬೇಕು. ಅಂದರೆ ನಾವು ಸೂರ್ಯನನ್ನು ಅದರ ನೈಜ ಸ್ಥಿತಿಯ ೫ ೧/೨ ಸೆಕೆಂಡುಗಳ ನಂತರ ನೋಡಲು ಸಾಧ್ಯ. ಅದೇ ರೀತಿ ಕೋಟ್ಯಾಂತರ ಜ್ಯೋತಿರ್ವರ್ಷ (Light year the distance travelled by light in a few at the rate of 3,02,000 K.M. per Second) ಗಳ ಅಂತರದಲ್ಲಿರುವ ನಕ್ಷತ್ರ ನೀಹಾರಿಕೆ (Stars & Nebule) ಗಳು ನೂರಾರು ವರ್ಷಗಳ ಹಿಂದಿನ ಅಸ್ತಿತ್ವದ ಆಕಾಶ ಕಾಯದ ಗೋಚರವೆನ್ನುವುದನ್ನು ಮರೆಯಬೇಡಿ. ಅಂದರೆ ಆ ಆಕಾಶ ಕಾಯದ ಬೆಳಕಿನ ಕಿರಣಗಳು ಆ ಕೋಟ್ಯಾಂತರ ಮೈಲಿ ದೂರವನ್ನು ಕ್ರಮಿಸಿ ಬಂದ ನಂತರ ನಮ್ಮ ಅಕ್ಷಿಪಟಲದ ಮೇಲಾಗಲಿ, ನಮ್ಮ ದೂರದರ್ಶಕ (Telescope) ಗಳಲ್ಲಾಗಲೀ, ಅಥವಾ ಕ್ಯಾಮೆರಾದ ಕಣ್ಣುಗಳಲ್ಲಿ ಕಾಣಿಸಿ ಕೊಳ್ಳುತ್ತದೆ. ಅಂದರೆ ಆ ಬೆಳಕಿನ ವೇಗಕ್ಕಿಂತಲೂ ಮುಂಚಿತವಾಗಿ ನಾವು ಆ ದೂರವನ್ನು ಕ್ರಮಿಸಿ ಅದೇ ದೃಶ್ಯವನ್ನು ನೋಡಿದಾಗ ನೂರಾರು ವರ್ಷಗಳ ಹಿಂದಿನ ವ್ಯೂಹ ಕ್ರಿಯೆಯ ವಿದ್ಯಮಾನಗಳನ್ನು (Celestial activities) ನಾವು ನೋಡಬಹುದು, ಕ್ಯಾಮೆರಾ ತೆಗೆದುಕೊಂಡು ಹೋದರೆ, ಆ ನೂರಾರು ವರ್ಷಗಳ ಹಿಂದಿನ ಘಟನೆಗಳನ್ನು ಈಗ

ಸೆರೆಹಿಡಿದುಕೊಂಡು ಬರಬಹುದು. ಆದನ್ನೇ ನೀವು ತಿರುಗು ಮುರುಗಾಗಿ ಯೋಚಿಸಿ, ಸುಮಾರು ೫೦೦, ೬೦೦ ವರ್ಷಗಳ ಹಿಂದಿನ ಘಟನೆಗಳ ಪ್ರತಿಫಲನದ ಬೆಳಕಿನ ಕಿರಣಗಳು ಇನ್ನೂ ಈ ಅಖಂಡ ವಿಶ್ವದ ಅಗಣಿತ ದೂರದಲ್ಲಿ ಚಲಿಸುತ್ತಲಿದ್ದು, ಅವು ಹಲವು ಕೋಟಿ ಜ್ಯೋತಿರ್ವರ್ಷಗಳ ಅಂತರದಲ್ಲಿರುವ ಕೆಲವು ನಕ್ಷತ್ರಗಳನ್ನು ಇದುವರೆವಿಗೂ ತಲುಪಿಯೇ ಇಲ್ಲ. ಮನುಷ್ಯನೇನಾದರೂ, ಈ ಬೆಳಕಿನ ಕಿರಣಗಳ ವೇಗಕ್ಕಿಂತಲೂ ಮೊದಲೇ ಅಂತಹ ನಕ್ಷತ್ರಗಳನ್ನು ಕ್ಯಾಮರಾ ಸಹಿತ ತಲುಪಿ ಆ ಬೆಳಕಿನ ಕಿರಣಗಳು ಬಂದ ನಂತರ ಸೆರೆಹಿಡಿದರೆ ನಿಮಗೆ ಭೂಮಿಯ ಮೇಲೆ ಜರುಗಿದ ನೂರಾರು ವರ್ಷಗಳ ಹಿಂದಿನ ಘಟನೆಗಳನ್ನು ನೈಜವಾಗಿ ಪರದೆಯ ಮೇಲೆ ನೋಡಿ ಆನಂದಿಸಬಹುದು. ಇತಿಹಾಸವನ್ನು ತಿದ್ದಿಕೊಳ್ಳಬಹುದು. ಅಯೋಧ್ಯೆಯ ಬಾಬರಿ ಮಸೀದಿ ಹಗರಣದ ವಿವಾದವನ್ನು ಬಗೆಹರಿಸಿಕೊಳ್ಳಬಹುದು. ಅಕ್ಬರ್‌ನ ಆಡಳಿತವನ್ನು ಕಣ್ಣಾರೆ ಕಾಣಬಹುದು. ಹೂತು ಹೋಗಿರುವ ಹಂಪೆಯ ಗತವೈಭವವನ್ನು (ಕ್ರಿ. ಶ. ೧೩೩೬-೧೫೬೫) ನೈಜವಾಗಿ ವೀಕ್ಷಿಸಬಹುದು. ಇದು ಸಾಧ್ಯವೇ?

ಒಂದು ಕಾಲಕ್ಕೆ ದೂರವಾಣಿ, ಆಕಾಶವಾಣಿ, ದೂರದರ್ಶನಗಳೂ ಅಸಂಭವವಾಗಿಯೇ ಕಂಡವು. ಆದರೆ ಈಗ ಸಂಭವವಾಗಿವೆ. ನೀವು ದೂರದ ವ್ಯಕ್ತಿಗೆ STD, ISD ಮಾಡಬೇಕಾಗಿ ಬಂದಾಗ ಆ STD ಬೂತ್ (ಪೆಟ್ಟಿಗೆ) ನಲ್ಲಿ ಹೋಗಿ ಸಂಬಂಧಪಟ್ಟ ಸಂಖ್ಯೆಗಳನ್ನು ತಿರುಗಿಸಿ ಹೇಗೆ ದೂರದ ಬಿಂದುವಿನಲ್ಲಿ ಸಂಪರ್ಕ ಕಲ್ಪಿಸಿಕೊಳ್ಳುವರೋ ಹಾಗೆಯೇ ಪ್ರತಿಬಿಂಬ ಉಡಾವಣೆ ಪೆಟ್ಟಿಗೆ (Image Projector Box) ಯಲ್ಲಿ ಸಂಬಂಧಪಟ್ಟ ವ್ಯಕ್ತಿ ಅಳವಡಿತ (Subjected) ನಾಗಿ, ಸಂಬಂಧಪಟ್ಟ ನಕ್ಷತ್ರದ ಸಂಖ್ಯೆ, ಚಾರಿತ್ರಿಕ ಕಾಲಾವಧಿಯ ಸಂಕೇತ (Chronological order symbols) ಮತ್ತು ಪ್ರಾದೇಶಿಕ ಸಂಜ್ಞೆ (Code of place) ಗಳ ಗುಂಡಿಗಳನ್ನು ಒತ್ತುವುದರಿಂದ ನೀವು ಅರೆಕ್ಷಣದಲ್ಲಿ ಪ್ರತಿಬಿಂಬ ರೂಪದಲ್ಲಿ ನಿಗದಿತ ನಕ್ಷತ್ರದಲ್ಲಿ ನಿಗದಿತ ವೇಳೆಯಲ್ಲಿ ನಿಮ್ಮ ಕ್ಯಾಮರಾ ಸಹಿತ ಹಾಜರಾಗುತ್ತೀರ. ಅದೇ ವೇಳೆಗೆ ನಿಮಗೆ ಅಗತ್ಯವಾದ ನೂರಾರು ವರ್ಷಗಳ ಸಂಬಂಧಿತ ದೃಶ್ಯಾವಳಿಗಳನ್ನು ಹೊತ್ತು ತಂದ ಕಿರಣಗಳು ಅಲ್ಲಿಗೆ ಹೋಗಿ ತಲುಪಿ, ಕ್ಯಾಮರಾದಲ್ಲಿ ಸೆರೆಹಿಡಿಯಲ್ಪಡುತ್ತವೆ. ತದನಂತರ ತತ್‌ಕ್ಷಣದಲ್ಲಿ ಭೂಮಿಯ ಆ ಪೆಟ್ಟಿಗೆಗೆ ವಾಪಸಾಗಿ, ನಿಮ್ಮ ನಿಸ್ತೇಜ ದೇಹವನ್ನು ಹೊಕ್ಕಿ ವಾಸ್ತವ ಜಗತ್ತಿಗಿಳಿಯಬಹುದು. ಇಲ್ಲವೇ ನಿಮ್ಮ ಭೌತಿಕ ದೇಹದ ಸಮೇತವೇ, ಉಡ್ಡಾಯನ ಮಾಡುವ ಅದ್ವಿತೀಯ ವಿಜ್ಞಾನದ ಆವಿಷ್ಕಾರವಾಗುವುದರಲ್ಲಿ ಸಂಶಯವಿಲ್ಲ ಅಥವಾ ಕ್ಯಾಮರಾ ಒಂದನ್ನೇ ಕಳಿಸಿ ವಾಪಸ್ಸು ಬರುವಂತೆಯೇ ಮಾಡಿಕೊಳ್ಳಬಹುದು. ಆ ವೇಳೆಗೆ ನಮ್ಮ ಸಮಕಾಲೀನ ಪೀಳಿಗೆ ಇರಲಾರದು. ಮುಂದಿನ ಪೀಳಿಗೆಗೆ ಇದು ಲಭ್ಯವೆನ್ನುವುದನ್ನು ತಳ್ಳಿ ಹಾಕಲಾಗದು. ಆಗ ಇತಿಹಾಸ ಕ್ಷೇತ್ರವನ್ನು ಸಮಗ್ರವಾಗಿ ವಿಜ್ಞಾನ ತನ್ನದಾಗಿಸಿಕೊಳ್ಳುವುದು. ವಿಜ್ಞಾನ ವ್ಯಾಪ್ತಿಯ ವೈಶಾಲ್ಯತೆಗೆ ಮತ್ತೇನು ನಿದರ್ಶನಬೇಕು.

★

ಹಳಿಬಿಟ್ಟು ಎತ್ತರದಲ್ಲಿ ಚಲಿಸುವ ರೈಲು ~~~~~~~~~~~~~~

೧೭೬೯ರ ಸುಮಾರಿನಲ್ಲಿ, ಸ್ಕಾಟ್‌ಲ್ಯಾಂಡ್ ದೇಶದಲ್ಲಿ ನಡೆದ ಘಟನೆಯೊಂದು ರೈಲಿನ (ಉಗಿಬಂಡಿ) ಆವಿಷ್ಕಾರಕ್ಕೆ ನಾಂದಿಯಾಯಿತು.

ಜೇಮ್ಸ್‌ವಾಟ್ ಎಂಬ ಬಾಲಕ, ಕಡು ಬಡಕುಟುಂಬದಲ್ಲಿ ಜನಿಸಿದ್ದನು. ಕಷ್ಟಪಟ್ಟು ಹಳ್ಳಿಯ ಶಾಲೆಯೊಂದರಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದನು. ಎಳೆ ಪ್ರಾಯದಲ್ಲೇ ಏನಾದರೂ ಹೊಸದಾಗಿ ಆಲೋಚಿಸುವ, ಪ್ರಶ್ನಿಸುವ ಮತ್ತು ಪರಿಶೀಲಿಸುವ ಸೃಜನಶೀಲತೆಯನ್ನು ಬೆಳೆಸಿಕೊಂಡಿದ್ದನು.

ಒಮ್ಮೆ ಆತನ ಅಜ್ಜಿ ಒಲೆಯ ಮೇಲೆ ಅಕ್ಕಿ ಬೇಯಲಿಕ್ಕಿಟ್ಟು, ಅದು ಉಕ್ಕಿ ಬಂದಾಗ ಪಾತ್ರೆಯ ಮುಚ್ಚಳ ತೆಗೆಯಲು ಜೇಮ್ಸ್‌ವಾಟ್‌ಗೆ ಹೇಳಿ ಕಟ್ಟಿಗೆ ಆರಿಸಿ ತರಲು ಹೊರನಡೆದಳು. ಜೇಮ್ಸ್ ವಾಟ್‌ನು ಪುಸ್ತಕವನ್ನು ಮುಂದಿರಿಸಿಕೊಂಡು ಓದುತ್ತಾ ಒಲೆಯ ಮುಂದೆ ಕುಳಿತಿದ್ದನು. ಓದುವಾಗ ಆತನ ಗಮನ ಉರಿಯುವ ಒಲೆಯ ಮೇಲಿನ ಪಾತ್ರೆಯ ಮೇಲೆಯೇ ನಿಗಾವಹಿಸುತ್ತಿತ್ತು. ಹೀಗಿರುವಾಗ ಸ್ವಲ್ಪ ಹೊತ್ತಿನ ನಂತರ ಆತನಿಗೊಂದು ಆಶ್ಚರ್ಯ ಕಾದಿತ್ತು. ಪಾತ್ರೆಯೊಳಗಿನ ಕಾದ ನೀರಿನ ಆವಿಯ ಮೇಲ್ಮುಖ ಒತ್ತಡದಿಂದ ಮುಚ್ಚಿದ್ದ ಮುಚ್ಚಳ ಮೇಲೇರಿ ಕೆಳಗಿಳಿಯುತ್ತಿತ್ತು. ಒಂದು ಹಂತದಲ್ಲಿ ಆವಿ ಹೆಚ್ಚಾಗಿ ಮುಚ್ಚಳವನ್ನು ಎತ್ತಿ ಹಾಕಿ ಬೀಳಿಸಿತು. ಆ ಹುಡುಗ ಬಹಳ ಹೊತ್ತು ಗಮನಿಸಿದ ನಂತರ ಒಲೆಯ ಉರಿಯನ್ನು ಹೆಚ್ಚು ಕಡಿಮೆ ಮಾಡಿ ಹೊಂದಾಣಿಸುವ ಮೂಲಕ ಪಾತ್ರೆಯ ಮೇಲಿನ ಮುಚ್ಚಳ ಮೇಲಕ್ಕೇರಿ ಕೆಳಗಿಳಿಸುವ ಪ್ರಯೋಗಮಾಡಿ ಯಶಸ್ವಿಯಾದ. ಅದರಿಂದ ಆತ ಕಂಡುಕೊಂಡ ಸಂಗತಿಯೆಂದರೆ ಹಬೆಯ ಶಕ್ತಿಯಿಂದ ವಸ್ತುಗಳನ್ನು ಚಲಿಸುವಂತೆ ಮಾಡಬಹುದು. ಆ ಬಾಲಕನ ಶೀಘ್ರಮತಿಗೆ ಒಳಗಾದ ಈ ಕುತೂಹಲವೇ ಮುಂದೆ ಹಬೆಯಂತ್ರ (ಹಬೆಯಿಂದ ಚಲಿಸುವ ಯಂತ್ರ) ವೊಂದನ್ನು ರೂಪಿಸಲು ಕಾರಣವಾಯಿತು.

ಬಾಲಕ ಸಂಶೋಧಿಸಿದ ಸಿದ್ಧಾಂತದ ಆಧಾರದ ಮೇಲೆ ಮುಂದೆ ಬ್ರಿಟಿಷ್ ದೇಶದ ತಂತ್ರಜ್ಞ ೧೮೨೫ರಲ್ಲಿ ಸ್ಟೀಫನ್‌ಸನ್, ರೈಲ್ವೆ ಎಂಜಿನ್ ಸಿದ್ಧಪಡಿಸಿ ಯಶಸ್ವಿಯಾದನು. ಅದನ್ನು ಫಿಸ್‌ಪ್ಲೇಟ್‌ಗಳಿಂದ ಜೋಡಿಸಿ ಅಳವಡಿಸಿದ ರೈಲ್ಸ್ (ಸಮಾನಾಂತರ ಸಾಲಿನ ಕಬ್ಬಿಣದ ಹಳಿಗಳು) ಗಳ ಮೇಲೆ ಹರಿಯಲು ಬಿಟ್ಟು, ಆ ಯಶಸ್ವಿಪ್ರಯೋಗದಿಂದ ಅದು 'ರೈಲು' ಆಗಿ, ಮುಂದಿನ ದಿನಗಳಲ್ಲಿ ಪ್ರಯಾಣಿಕರ ಮತ್ತು ಸರಕು ಸಾಗಾಣಿಕೆಯ ಬೋಗಿಗಳನ್ನು ಜೋಡಿಸಿದಾಗ 'ಟ್ರೈನ್' ಆಗಿ ಪರಿವರ್ತಿತಗೊಂಡಿತು. ಆದರೂ ಮೂಲ ಹೆಸರಾದ 'ರೈಲು' ಇಂದಿಗೂ ಜನಪ್ರಿಯ. ಈ ರೈಲಿನ ಆವಿಷ್ಕಾರದೊಂದಿಗೆ ಸಾರಿಗೆ ವ್ಯವಸ್ಥೆಯಲ್ಲಿ ಅದ್ಭುತ

ಕ್ರಾಂತಿಯೊಂದು ಜರುಗಿ, ವಿಶ್ವದ ವಿವಿಧ ರಾಷ್ಟ್ರಗಳ ಜನ ಸಂಪರ್ಕ, ಸಂಸ್ಕೃತಿ - ಸಂಗಮಕ್ಕೆ ನಾಂದಿಯಾಯಿತು. ವಿಜ್ಞಾನ ಮತ್ತು ತಂತ್ರಜ್ಞಾನ (Science & Technology) ದ ಅದ್ವಿತೀಯ ಫಲಕೃತಿಗಳಲ್ಲಿ ಒಂದಾದ ಈ ರೈಲು ಮನುಕುಲದ ಸಮಯ ಮತ್ತು ಶ್ರಮವನ್ನು ಕಾಪಾಡಿತು. ೧೮ನೇ ಶತಮಾನದಿಂದ ೨೦ನೇ ಶತಮಾನದುದ್ದಕ್ಕೂ ರೈಲ್ಸ್‌ನ ಮೇಲೆ ಚಲಿಸಿದ ಈ ರೈಲು ೨೧ನೇ ಶತಮಾನದಿಂದಾಚೆಗೆ ರೈಲನ್ನು (ಹಳಿಯನ್ನು) ಬಿಟ್ಟು ಸುಮಾರು ೩-೪ ಅಡಿ ಎತ್ತರದಲ್ಲಿ ಅಂದರೆ ಗಾಳಿಯಲ್ಲಿ ಅತಿ ವೇಗದಿಂದ ಚಲಿಸುತ್ತದೆ ಎಂದರೆ ನೀವು ನಂಬುತ್ತೀರಾ.

೨೦೦೦ನೇ ವರ್ಷದ ಕೊಡುಗೆಯಾಗಿ ಸಾರಿಗೆ ಮಾಧ್ಯಮದ ಈ 'ಅದ್ಭುತ' ಅಯಸ್ಕಾಂತ ರೈಲು ಬರಲಿದೆ. ಈ ಸಮಕಾಲೀನ ಪೀಳಿಗೆಯೂ ಸಹ ಅಯಸ್ಕಾಂತ ರೈಲಿನಲ್ಲಿ ಪ್ರಯಾಣ ಮಾಡುವ ಅದೃಷ್ಟ ಹೊಂದುತ್ತಾರೆ. ಈ ಅಯಸ್ಕಾಂತ ರೈಲಿಗೆ ಅತೀವಾಹಕತ್ವ (Super Conductivity) ತಂತ್ರಜ್ಞಾನ ಬಳಸಿರುವುದರಿಂದ ಇದನ್ನು ಸೂಪರ್ ಕಂಡೆಕ್ಟಿವಿಟಿ ಟ್ರೈನ್ ಎಂತಲೂ ಕರೆಯುವರು. ಈಗಾಗಲೇ ಪ್ರಾಯೋಗಿಕ ಹಂತದಲ್ಲಿರುವ ಈ ರೈಲು ೨೧ನೇ ಶತಮಾನದ ಪಾದಾರ್ಪಣೆಯೊಂದಿಗೆ ಜಗತ್ತಿನಾದ್ಯಂತ ಬಿಡುಗಡೆ ಹೊಂದಲಿದೆ. ಇದು ಶಬ್ದ ರಹಿತ, ವೇಗದ ಹಾಗೂ ಪರಿಸರಮಾಲಿನ್ಯವಿಲ್ಲದ (ಅಂದರೆ ಹೊಗೆ ಉಗುಳದ) ಅಯಸ್ಕಾಂತದಿಂದ ಮಾಡಿದ, ಸೂಪರ್ ಕಂಡೆಕ್ಟಿವಿಟಿ ತಂತ್ರಜ್ಞಾನದಿಂದ ರೂಪಿಸಿದ ರೈಲಾಗಿರುತ್ತದೆ. ಅಂದರೆ ಈ ಟ್ರೈನ್‌ನ ಆಗಮನದಿಂದ 'ರೈಲು ಉಗಿಬಂಡಿ' ಎಂಬ ಶಬ್ದಗಳು ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತವೆ, ಅಲ್ಲವೆ?

ಈ ಟ್ರೈನು ಅತಿವೇಗದಲ್ಲಿ ಅಂದರೆ ಪ್ರಾರಂಭಹಂತದಲ್ಲೇ ಪ್ರತಿ ಗಂಟೆಗೆ ೩೦೦ ಕಿ. ಮೀ. ನಂತರದ ದಿನಗಳಲ್ಲಿ ೫೦೦ ಕಿ. ಮೀ. ಗೂ ಹೆಚ್ಚಿನ ವೇಗದಲ್ಲಿ ಚಲಿಸುವಾಗ ಹಳಿಯ ಎರಡೂ ಕಡೆ ಎತ್ತರದ ಗೋಡೆಗಳನ್ನು ನಿರ್ಮಿಸಿರಬೇಕು. ಯಾವುದೇ ಪ್ರಾಣಿ, ಪಕ್ಷಿ, ಮನುಷ್ಯರು, ವಾಹನಗಳು ಮಧ್ಯೆ ಬರಬಾರದು. ಸುರಂಗ ಮಾರ್ಗ (Tunnel Klays) ಗಳ ಮಾದರಿಯಲ್ಲಿ ಈ ಮಾರ್ಗಗಳು ನಿರ್ಮಿತವಾಗಿರುತ್ತವೆ. ದೂರದ ಎರಡು ನಿಲ್ದಾಣಗಳ ಮಧ್ಯೆ ಅತಿ ವೇಗದಲ್ಲಿ ಹಳಿಯ ಮೇಲೆ ಗಾಳಿಯಲ್ಲಿ ಚಲಿಸುವ ಈ ರೈಲು, ಹಿಂದಿನ ನಿಲ್ದಾಣ ಬಿಡುವಾಗ ಹಳಿಯ ಮೇಲೆ ನಿಂತಿರುತ್ತದೆ. ಆ ನಿಲ್ದಾಣ ಬಿಡುವಾಗ ಇದೇ ಟ್ರೈನ್ ಹಳಿಯಿಂದ ಮೇಲೆ ಸಮಾನ ಎತ್ತರದಲ್ಲಿ ಎದ್ದು ನಿಲ್ಲುವುದು. ನಂತರ ವೇಗವಾಗಿ ಚಲಿಸುವುದು. ಮುಂದಿನ ನಿಲ್ದಾಣದಲ್ಲಿ ನಿಲ್ಲಬೇಕಾದಾಗ ವೇಗ ತಗ್ಗಿಸಿ ನಿಧಾನವಾಗಿ ಹಳಿಯ ಮೇಲೆ ಬಂದು ನಿಲ್ಲುವುದು. ಪ್ರಯಾಣಿಕರಿಗೆ ಯಾವುದೇ ಕುಲುಕಾಟ, ಘರ್ಷಣೆಯ ಬವಣೆ ತಟ್ಟದ ಹಾಗೆ ಸಮರ್ಪಕ 'ಷಾಕ್ ಅಬ್ಸಾರ್ಬರ್' ಗಳ ವ್ಯವಸ್ಥೆಯಿರುತ್ತದೆ.

ಅಂದರೆ ಎರಡು ನಿಲ್ದಾಣಗಳ ಮಧ್ಯೆ ಹಳಿಗಳ ವ್ಯವಸ್ಥೆ ಬೇಡವೆ?

ಖಂಡಿತ ಆ ವ್ಯವಸ್ಥೆ ಇರಬೇಕು. ಆ ಹಳಿಗಳೇ ಆಯಸ್ಕಾಂತ ಬಲ (Magnetic Power) ವಿರುವಂತೆ ಮಾಡುತ್ತಾರೆ ಮತ್ತು ಅತೀ ವಾಹಕತ್ವ ತಂತ್ರಜ್ಞಾನದಿಂದ ಆ ಹಳಿಗಳಿಗೆ ಬೃಹತ್ ಅಯಸ್ಕಾಂತ ಶಕ್ತಿಯನ್ನು ಒದಗಿಸಲಾಗುವುದು. ಆ ಅಯಸ್ಕಾಂತದ ಬಲದ ಪುನಶ್ಚೇತನ (Rechargeable) ವನ್ನು ಭೂಮಿಯಲ್ಲಿ ಅಗಾಧವಾದ ಅಯಸ್ಕಾಂತ ಕ್ಷೇತ್ರದ ಮೂಲದಿಂದ (Source of Magnetic Field) ಮುಫತ್ತಾಗಿ ಪಡೆದು ಸದಾ ಕಾಂತ ಶಕ್ತಿ ಬರಿತವಾಗಿರುತ್ತದೆ. ಹಾಗೆಯೇ ಟ್ರೈನ್‌ನ ಅಡಿಯಲ್ಲಿರುವ ಅಯಸ್ಕಾಂತ ಚಕ್ರಗಳಿಗೂ ಸೂಪರ್ ಕಂಡಕ್ಟಿವಿಟಿ ತಂತ್ರಜ್ಞಾನ ಬಳಸಿ, ಅವು ಅತೀತವಾದ ಅಯಸ್ಕಾಂತ ಶಕ್ತಿ ಹೊಂದಿರುವಂತೆ ವಿಶೇಷ ವ್ಯವಸ್ಥೆಗೊಳಿಸಲಾಗುತ್ತದೆ. ಮತ್ತು ಅತಿ ವಿದ್ಯುತ್ ವಾಹಕತ್ವಕ್ಕೆ ಅವು ಒಳಪಟ್ಟಿರುತ್ತವೆ.

ಕಾಂತತ್ವದ ಆಧಾರದಂತೆ ಸಮಾನ ಧ್ರುವ ಬಿಂದುಗಳು ವಿಕರ್ಷಿಸಿ, ವಿಜಾತಿ ಬಿಂದುಗಳು ಆಕರ್ಷಿಸುವ ಸಿದ್ಧಾಂತವನ್ನೇ ಈ ಅಯಸ್ಕಾಂತ ರೈಲಿನ ಚಲನೆಯಲ್ಲಿ ಅಳವಡಿಸಲಾಗಿದೆ. ಹಳಿಯ ಕಾಂತಕ್ಷೇತ್ರವು ರೈಲಿನ ಚಕ್ರಗಳ ಕಾಂತಕ್ಷೇತ್ರಕ್ಕೆ ಸಮಾನ ಧ್ರುವವಾಗುವಂತೆ ಮಾಡಿ, ಅದರ ಆಗಾಧ ನಿರಾಕರಣೆ (Repulsion) ಯಿಂದ ಟ್ರೈನ್ ಚಲಿಸುವಂತೆ ತಂತ್ರಗಾರಿಕೆಯನ್ನು ಉಪಯೋಗಿಸಲಾಗಿದೆ. ಚಕ್ರಗಳಿಗೆ ಒಳಪಡಿಸುವ ಸೂಪರ್ ಕಂಡೆಕ್ಟಿವಿಟಿ ವಿದ್ಯುತ್ ಪ್ರವಾಹದ ಸಂಪರ್ಕ ತಪ್ಪಿಸಿ ಕಾಂತ ಕ್ಷೇತ್ರವನ್ನು ಕಡಿದುಗೊಳಿಸಿ ಇಡೀ ಲೋಹದ ಟ್ರೈನ್ ಹಳಿಯ ಕಾಂತಕ್ಷೇತ್ರದಲ್ಲಿ ಪ್ರೇರಿತ ಚುಂಬನಕ್ಕೆ ಒಳಗಾಗಿ (ವಿರುದ್ಧ ಧ್ರುವಗಳ ಸಮ್ಮಿಳಿತದಿಂದ) ಹಳಿಯ ಮೇಲೆ ಬಂದು ನಿಲ್ಲುವುದು. ಚಾಲನೆ ನೀಡುವಾಗ ಪುನಃ ವಿದ್ಯುತ್ ಪ್ರವಾಹವನ್ನು ಹರಿಸುವುದು. ಈ ರೀತಿಯ ರೈಲನ್ನು ಹಳಿಯ ಕೆಳಗೆ ತಲೆಕೆಳಕಾಗಿಯೂ ಓಡಿಸಬಹುದು. ದೊಡ್ಡ ದೊಡ್ಡ ಸೇತುವೆ ಕೆಳಗೆ ಈ ರೀತಿಯ ರೈಲನ್ನು ಈಗಾಗಲೇ ಓಡಿಸುತ್ತಿದ್ದಾರೆ. ಹಳಿ ಬಿಟ್ಟು ತಲೆಕೆಳಗಾಗಿ ಗಾಳಿಯಲ್ಲಿ ಓಡಿಸುವುದು ವಿಜ್ಞಾನಕ್ಕೆ ದುಸ್ಸಾಧ್ಯವಾಗುವುದಿಲ್ಲ. ವಿಜ್ಞಾನ-ತಂತ್ರಜ್ಞರ ಈ ಪ್ರಚಂಡ ಸಾಧನೆ ಶ್ಲಾಘನೀಯವಲ್ಲವೇ?

★

ಸುಳ್ಳು ಪತ್ತೆ ಹಚ್ಚುವ ಯಂತ್ರ ~~~~~~~~~~~~~~~~~~~~

'ಹತ್ತು ಸುಳ್ಳು ಹೇಳಿಯಾದರೂ ಒಂದು ಮದುವೆ ಮಾಡು' ಎಂಬುದು ನಾಣ್ಣುಡಿ. ಇನ್ನೊಂದು ಲೋಕರೂಢಿಯೆಂದರೆ ಹತ್ತು ಜನರಿಗೆ ಒಳ್ಳೆಯದಾಗುವುದಾದರೆ ಒಬ್ಬನಲ್ಲಿ ಒಂದು ಸುಳ್ಳು ಹೇಳಿದರೆ ತಪ್ಪಿಲ್ಲ.

ಇಡೀ ಜೀವಮಾನದಲ್ಲಿ ಸುಳ್ಳನ್ನು ಹೇಳದ, 'ಯುದ್ಧದಲ್ಲಿ ಎಂದೂ ಭಾಗವಹಿಸದೆ ಯುಧಿಷ್ಠಿರ ನೆಂಬ ಖ್ಯಾತನಾಮಗೊಂಡ ಧರ್ಮರಾಯನನ್ನೇ ಲೋಕಕಲ್ಯಾಣಾರ್ಥ ಸುಳ್ಳು ಹೇಳಿಸಿದ ಕೃಷ್ಣ ಆ ದ್ವಾಪರಯುಗದಲ್ಲಿ' ಕುರುಕ್ಷೇತ್ರ ಯುದ್ಧದಲ್ಲಿ ಸತ್ತಿದ್ದ ಆನೆಯೊಂದನ್ನು ಧರ್ಮರಾಜನಿಗೆ ತೋರಿಸಿ, ಇದರ ಹೆಸರು ಅಶ್ವತ್ಥಾಮನೆಂದು, ಈ ಆನೆ ಸತ್ತಿರುವ ಸತ್ಯವನ್ನು ಯುದ್ಧಭೂಮಿಯಲ್ಲಿ ಎಂದು ಚಲಿಸದ (ಯುಧಿಷ್ಠಿರ) ಧರ್ಮರಾಯನನ್ನು ಯುದ್ಧ ಭೂಮಿಗೆ ಬರುವಂತೆ ಪ್ರೇರೇಪಿಸಿ ಆತನಿಂದ 'ಅಶ್ವತ್ಥಾಮ ಹತಾಃ ಕುಂಜರಃ' ಎಂದೂ ಸಾರಿದ. 'ಕುಂಜರಃ' ಎನ್ನುವ ಶಬ್ದ ಉಚ್ಚರಿಸುವಾಗ ಕೃಷ್ಣ ತನ್ನ ಪಾಂಚಜನ್ಯ (ಶಂಖ) ವನ್ನು ಊದಿ ದ್ರೋಣಾಚಾರ್ಯನಿಗೆ 'ಅಶ್ವತ್ಥಾಮ ಹತಃ' ಎಂದಷ್ಟೇ ಕೇಳಿಸುವಂತೆ ಮಾಡಿ ದ್ರೋಣರ ವಧೆಗೈಯುವಂತೆ ಮಾಡಿದ ರೋಚಕ ಕಥಾನಕ ಮಹಾಭಾರತದಲ್ಲಿ ಉಲ್ಲೇಖಿತವಾಗಿದೆ.

ಅದರಂತೆ ಚಂದ್ರಗುಪ್ತನ ಕಾಲದಲ್ಲಿ ಜರುಗಿದ ಘಟನೆಯೊಂದು ಇತಿಹಾಸದಲ್ಲಿ ದಾಖಲಾಗಿದೆ. ನವನಂದರ ರಾಜನ ಮುಖ್ಯಮಂತ್ರಿ ಅಮಾತ್ಯ ರಾಕ್ಷಸ ನವನಂದನರ ಪತನದ ನಂತರ ತಲೆತಪ್ಪಿಸಿಕೊಳ್ಳುತ್ತಾನೆ. ಆಗ ತನ್ನ ಕುಟುಂಬ ಪರಿವಾರವನ್ನು ತನ್ನ ಪ್ರಾಣಮಿತ್ರನಾದ ಚಂದನದಾಸ ಶೆಟ್ಟಿ ಎಂಬುವನ ಮನೆಯಲ್ಲಿ ಗುಪ್ತವಾಗಿ ಆಶ್ರಯದಲ್ಲಿರಿಸಿ, ತಾನು ರಾಜ್ಯದ ಗಡಿತೊರೆದು ಹೊರಟುಹೋಗಿರುತ್ತಾನೆ. ಚಂದ್ರಗುಪ್ತನ ಮಂತ್ರಿ ಚಾಣಕ್ಯನಿಗೂ ಅಮಾತ್ಯ ರಾಕ್ಷಸನಿಗೂ ಮೊದಲಿನಿಂದಲೂ ಬದ್ಧದ್ವೇಷ. ಚಾಣಕ್ಯನ ಸೈನಿಕರು ಅಮಾತ್ಯ ರಾಕ್ಷಸನನ್ನು ಸೆರೆಹಿಡಿಯಲು ಇಡೀ ನಗರವನ್ನು ಆಮೂಲಾಗ್ರವಾಗಿ ಶೋಧಿಸುತ್ತಾರೆ. ಆಗ ಆತ ತಲೆಮರೆಸಿಕೊಂಡಿದ್ದು, ಆತನ ಕುಟುಂಬದವರು ನಗರದಲ್ಲಿರುವ ಚಂದನದಾಸ ಶೆಟ್ಟಿಯ ಮನೆಯಲ್ಲಿ ಆಶ್ರಯಿಸಿರುವ ವಿಷಯ ಗೊತ್ತಾಗುತ್ತದೆ. ಆದರೆ ಸೈನಿಕರು ಎಷ್ಟೇ ಪೀಡಿಸಿದರು ಚಂದನದಾಸ ಸುಳ್ಳು ಹೇಳಿ ಕುಟುಂಬದವರನ್ನು ಅತ್ಯಂತ ಗೌಪ್ಯ ಸ್ಥಳದಲ್ಲಿಟ್ಟು ಅವರ ಪ್ರಾಣವನ್ನು ಕಾಪಾಡುತ್ತಾನೆ. ಸಿಟ್ಟಿಗೆದ್ದ ಸೈನಿಕರು ಆತನನ್ನೇ ಸೆರೆಹಿಡಿದು ಚಾಣಕ್ಯನ ಮುಂದೆ ನಿಲ್ಲಿಸುತ್ತಾರೆ. ಚಾಣಕ್ಯ ಚಂದನದಾಸನಿಗೆ ಆ ಕುಟುಂಬದವರನ್ನು ಒಪ್ಪಿಸದಿದ್ದರೆ ಮರಣ ದಂಡನೆಗೆ ಒಳಗಾಗಬೇಕೆಂದು ಹೆದರಿಸುತ್ತಾರೆ. ಅಂತಹ ಸಂದಿಗ್ಧದಲ್ಲೂ ಪ್ರಾಣ ಭೀತಿ ವ್ಯಕ್ತಪಡಿಸದೆ ಪುನಃ ಸುಳ್ಳು ಹೇಳಿ ಆ ಕುಟುಂಬದವರನ್ನು ರಕ್ಷಿಸುತ್ತಾನೆ. ಕೊನೆಗೆ ತಾನೇ

ಮರಣದಂಡನೆಗೆ ಈಡಾಗುತ್ತಾನೆ. ಇನ್ನೊಬ್ಬರ ಪ್ರಾಣರಕ್ಷಣೆಗೆ ತನ್ನ ಪ್ರಾಣವನ್ನೇ ಬಲಿ ಕೊಟ್ಟ ಚಂದನದಾಸನನ್ನು ಆಚಂದ್ರಾರ್ಕವಾಗಿ ಚರಿತ್ರೆ ಪ್ರಶಂಸಿಸಿದೆ.

ಈ ರೀತಿ ಒಬ್ಬನ ಪ್ರಾಣರಕ್ಷಣೆಗಾಗಿ ಸುಳ್ಳು ಹೇಳಬೇಕಾಗುತ್ತದೆ. ರಾಜಕಾರಣಿಗಳು ಸುಳ್ಳು ಆಶ್ವಾಸನೆ ನೀಡಿ ಅಧಿಕಾರ ಗಳಿಸಬೇಕಾಗುತ್ತದೆ. ತನ್ನ ಮಾಲನ್ನು ಮಾರಲು ವ್ಯಾಪಾರಿ ಸುಳ್ಳು ಹೇಳುತ್ತಾನೆ. ಆದರೆ ಆ ಸುಳ್ಳಿನ ಪರಿಣಾಮದ ಮೇಲೆ ಆ ಸುಳ್ಳಿನವನ ಅಪರಾಧವನ್ನು ಪರಿಗಣಿಸಬೇಕಾಗುತ್ತದೆ. ಎರಡು ದೇಶಗಳ ಮಧ್ಯೆ ಉಂಟಾಗಬಹುದಾದ ಯುದ್ಧ ತಪ್ಪಿಸಲು ರಾಜತಾಂತ್ರಿಕನೊಬ್ಬ ಸುಳ್ಳು ಹೇಳುವುದು ಸಹ್ಯ. ಆದರೆ ಎರಡು ಕೋಮುಗಳ ದಳ್ಳುರಿಗೆ ಕಾರಣವಾಗುವ ಮಸೀದಿ-ಮಂದಿರಗಳ ಬಗ್ಗೆ ಸುಳ್ಳು ಹೇಳಿ ನರಮೇಧಯಾಗವಾಗುವುದು ಅತ್ಯಂತ ಕ್ರೂರ ಅಪರಾಧ. ಸುಳ್ಳು ಹೇಳಿ ಮೋಸ ಮಾಡುವುದು, ದೋಚುವುದು, ಅಪಹರಿಸುವುದು, ಕೊಲೆಗೈಯ್ಯುವುದು, ನಷ್ಟ ಉಂಟುಮಾಡುವುದು ಇವೆಲ್ಲಾ ಅಪಾಯ. ಸುಳ್ಳು ಹೇಳಿ ಪಾಪ ಕಾರ್ಯ ಮುಚ್ಚಿಹಾಕುವುದು, ಅಪರಾಧವನ್ನು ಇನ್ನೊಬ್ಬ ನಿರಪರಾಧಿ ಮೇಲೆ ಹೊರಿಸುವುದು ಇತ್ಯಾದಿಗಳು ಶಿಕ್ಷಾರ್ಹ ಅಪರಾಧಗಳಾಗುತ್ತವೆ. ಹಾಗಾದರೆ ಸುಳ್ಳು ಹೇಳದ ವ್ಯಕ್ತಿ ಈ ಪ್ರಸಕ್ತ ಜಗತ್ತಿನಲ್ಲಿ ಎಲ್ಲಾದರೂ ಸಿಗಬಹುದೆ?

'ವಿಶ್ವಗುರು' ಎಂದೇ ಖ್ಯಾತರಾದ ದಿ. ಜಿಡ್ಡು ಕೃಷ್ಣಮೂರ್ತಿಯವರು ಹೇಳಿದ ದೃಷ್ಟಾಂತ ಇಲ್ಲಿ ಉಲ್ಲೇಖನಾರ್ಹವಾಗುತ್ತದೆ.

ಮಾಯಾದರ್ಪಣವೊಂದು ಸೃಷ್ಟಿಯಾಗಿದೆ. ಅದರ ಮುಂದೆ ಯಾವುದೇ ವ್ಯಕ್ತಿ ನಿಂತುಕೊಂಡರೂ ಆತ ಇದುವರೆವಿಗೂ ಸುಳ್ಳು ಹೇಳಿರುವ ದೃಶ್ಯಗಳು, ಇತರರಿಗೆ ಮೋಸಮಾಡಿರುವ ಸಂದರ್ಭಗಳೆಲ್ಲಾ ಆ ದರ್ಪಣದಲ್ಲಿ ಬಂದು ಹೋಗುತ್ತದೆ. ಆದರೆ ಆ ಕನ್ನಡಿ ಮುಂದೆ ನಿಲ್ಲಲು ಒಬ್ಬರೂ ಮುಂದೆ ಬರುವುದಿಲ್ಲ. ದೇವಮಾನವರೆನ್ನುವವರನ್ನೂ, ಸಾಧು-ಬಾಬಾಗಳನ್ನು ಕೇಳಿಕೊಂಡರೂ ಆ ಕನ್ನಡಿ ಮುಂದೆ ನಿಲ್ಲಲು ಯಾರು ಬರಲೊಲ್ಲರು. ಇದುವರೆಗೂ ಆ ಕನ್ನಡಿ ಮುಂದೆ ನಿಂತ ಸಾಹಸಿಗಳು ಒಬ್ಬರೂ ಇಲ್ಲದಿರುವುದು ವಿಷಾದನೀಯವೆನ್ನುತ್ತಾರೆ.

ಆದರೆ ಅಂತಹ ಕನ್ನಡಿ ಈಗ ಇಲ್ಲ. ಬದಲಿಗೆ ಒಂದು ಯಂತ್ರವನ್ನು ಕಂಡುಹಿಡಿಯಬೇಕಾಯಿತು. ಯಾವುದೇ ಸುಳ್ಳು ಹೇಳಿದರೆ ಅದನ್ನು ಪತ್ತೆ ಹಚ್ಚಬಲ್ಲ ಯಂತ್ರವನ್ನು ೧೯೨೧ರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ವೈದ್ಯಕೀಯ ಶಾಸ್ತ್ರದ ವಿದ್ಯಾರ್ಥಿಯೊಬ್ಬ ಈ ಯಂತ್ರವನ್ನು ಕಂಡುಹಿಡಿದು ಜಗತ್ತಿನ ವಿಸ್ಮಯಕ್ಕೆ ಕಾರಣನಾದ. ಈ ಯಂತ್ರಕ್ಕೆ ಪೋಲಿಗ್ರಾಫ್ (Polygraph) ಅಥವಾ ಲೈ-ಡಿಟೆಕ್ಟರ್ ಎಂದು ನಾಮಕರಣ ಮಾಡಿದ.

ವೈದ್ಯಕೀಯ ಶಾಸ್ತ್ರದ ಹಿನ್ನೆಲೆಯಲ್ಲಿ ಸಂಶೋಧಿಸಿದ ಈ ಯಂತ್ರವನ್ನು ಯಾವ ವ್ಯಕ್ತಿಗೆ ಅಳವಡಿಸುತ್ತೇವೆಯೋ ಆ ವ್ಯಕ್ತಿಯ ಜೈವಿಕ ಕ್ರಿಯೆಗಳನ್ನು ವಿಶ್ಲೇಷಿಸಿ ಆತನ ಸುಳ್ಳನ್ನು ಪತ್ತೆ

ಹಚ್ಚುತ್ತದೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಸುಳ್ಳುಹೇಳಿದರೆ ಅವನ ಶರೀರದಲ್ಲಿ ಹಲವಾರು ಬದಲಾವಣೆಗಳನ್ನು ಕಾಣಬಹುದು. ಅವುಗಳಲ್ಲಿ ಹೃದಯದ ಬಡಿತ ಮಾಮೂಲಿ ಬಡಿತಕ್ಕಿಂತ ಹೆಚ್ಚಾಗುತ್ತದೆ. ಭಯದಿಂದ ಮೈಯ್ಯಲ್ಲಿ ಬೆವರು ಕಾಣುವುದು. ಇಂತಹವುಗಳನ್ನು ಈ ಲೈ- ಡಿಟೆಕ್ಟರ ಕಂಡು ಹಿಡಿದು ವಿವರಗಳನ್ನು ನೀಡುತ್ತದೆ.

ಈ ಯಂತ್ರವನ್ನು ವ್ಯಕ್ತಿಯ ಕೆಲವು ದೇಹಭಾಗಗಳಿಗೆ ಜೋಡಿಸಿ, ತನಿಖಾಧಿಕಾರಿ ಆ ವ್ಯಕ್ತಿಗೆ ಸಂಬಂಧಪಟ್ಟ ಹಲವು ಪ್ರಶ್ನೆಗಳನ್ನು ಕೇಳುತ್ತಾ ಹೋಗುತ್ತಾನೆ. ಈ ಪ್ರಶ್ನೆಗಳನ್ನೆಲ್ಲಾ ಯಂತ್ರವು ದಾಖಲಿಸುತ್ತಾ ಹೋಗುತ್ತದೆ. ಜೊತೆಗೆ ವ್ಯಕ್ತಿಯ ಉತ್ತರಗಳನ್ನೂ ದಾಖಲಿಸಿ ಕೆಲವು ವಿಶ್ಲೇಷಣೆ ವಿವರಗಳೊಂದಿಗೆ ವ್ಯಕ್ತಿಯ ಹೇಳಿಕೆ ಎಷ್ಟು ಸತ್ಯ- ಅಸತ್ಯವೆಂಬುದನ್ನು ಪರಿಷ್ಕರಿಸುತ್ತದೆ.

ನಮ್ಮ ದೇಶದಲ್ಲಿ ಅಪರಾಧ ತನಿಖಾ ಸಂಸ್ಥೆ (CORE) ಮತ್ತು ಅದರ ಅಂಗ ಸಂಸ್ಥೆ RAW (Research Analysis Wing)ಗಳು ಈ ಯಂತ್ರವನ್ನು ಬಳಕೆ ಮಾಡುತ್ತಿವೆ. ಅಂತರಾಷ್ಟ್ರೀಯ ಅಪರಾಧ ತನಿಖೆ ಸಂಸ್ಥೆಗಳಾದ ಇಂಟರ್‌ಪೋಲ್ ಇತ್ಯಾದಿಗಳು ವ್ಯಕ್ತಿಯ ಪೂರ್ವಾಪರ (Bio-Data) ಆಧರಿಸಿ ಈ ಯಂತ್ರವನ್ನು ಬಳಸುತ್ತಾರೆ. ಕಾರಣ ವೃತ್ತಿ ನಿರತ ಸುಳ್ಳುಗಾರ (Professional Lier) ನಾದರೆ ಸ್ವಲ್ಪವೂ ವಿಚಲಿಸದೆ ಶರೀರ ಕಂಪನ, ಬೆವರು ಇತ್ಯಾದಿ ಸೂಚನೆಗಳನ್ನು ನೀಡದಂತೆ ವಂಚಿಸಬಹುದು. ಆದರೆ ಆತನ ಹೃದಯ ಬಡಿತವನ್ನು ನಿಯಂತ್ರಿಸಲಾರ. ಕೇವಲ ಆ ಒಂದು ಅಂಶದಿಂದ ಪರಿಶೀಲಿಸಬೇಕಾಗುತ್ತದೆ. ಆದರೆ ಅದು ನೂರಕ್ಕೆ ನೂರರಷ್ಟು ನಿಖರವಾಗಿರುವುದಿಲ್ಲ. ಕೇವಲ ಶೇಕಡ ೪೦ ರಷ್ಟು ನಂಬಲರ್ಹವಾಗಿರುತ್ತದೆ. ಜೊತೆಗೆ ಪ್ರಶ್ನೆ ಹಾಕುವ ತನಿಖಾಧಿಕಾರಿಯ ಜಾಣ್ಮೆ ಹಾಗೂ ಕೌಶಲ್ಯವನ್ನೂ ಈ ಯಂತ್ರದ ವಿಶ್ಲೇಷಣೆ ಅವಲಂಬಿಸಿರುತ್ತದೆ. ಕೆಲವು ವ್ಯಕ್ತಿಗಳು ತಮಗೆ ಅರಿವಿಲ್ಲದೆ ಸುಳ್ಳು ಹೇಳುತ್ತಾರೆ. ಇನ್ನು ಕೆಲವರು ಅಮಾಯಕತೆಯಿಂದ ಮುಗ್ಧರಾಗಿ ಸುಳ್ಳು ಹೇಳುತ್ತಾರೆ. ಅವರಿಗೆ ಈ ಯಂತ್ರ ಪರಿಣಾಮಕಾರಿಯಾಗದು. ಈ ಕಾರಣಗಳಿಂದ ಈ ಯಂತ್ರದ ಫಲಿತಾಂಶ (Inference) ವನ್ನು ಇದುವರೆಗೆ ನ್ಯಾಯಾಲಯಗಳು ಸಾಕ್ಷ್ಯವಾಗಿ ಅಂಗೀಕರಿಸುತ್ತಿಲ್ಲ. ಆದರೆ ಜಗತ್ತಿನ ಬಹುತೇಕ ದೇಶಗಳಲ್ಲಿ ಪೋಲಿಸ್, ಅಪರಾಧ ತನಿಖಾ ಸಂಸ್ಥೆಗಳು ಅಪರಾಧ ಶೋಧನೆಗಾಗಿ ಈ ಯಂತ್ರವನ್ನು ಬಳಸುತ್ತಿದ್ದಾರೆ. ಹಾಗೂ ಈ ಯಂತ್ರದ ನಿಖರತೆಯನ್ನು ಹೆಚ್ಚಿಸುವ ದಿಶೆಯಲ್ಲಿ ಕೆಲವು ಮಾರ್ಪಾಟುಗಳನ್ನು ಅಳವಡಿಸುತ್ತಿದ್ದಾರೆ. ಮುಂದಿನ ಶತಮಾನದ ಆದಿಯಲ್ಲಿ ಶೇಖಡ ೮೦ ರಷ್ಟು ನಿಖರವಾದ ಯಂತ್ರ ಸಿದ್ಧವಾಗಿರುತ್ತದೆ. ಅಂದರೆ ಈಗಿನ ಸುಳ್ಳಿನ ಪ್ರಮಾಣದ ಶೇಕಡ೮೦ ರಷ್ಟು ನಿಯಂತ್ರಿತಗೊಳ್ಳುತ್ತವೆ. ಅಂದರೆ ೨೧ನೇ ಶತಮಾನದ ಪೀಳಿಗೆ ಸುಳ್ಳುರಹಿತ ಪೀಳಿಗೆಯಾಗುವುದನ್ನು ನಾವು ಕಾದುನೋಡಬೇಕಾಗಿದೆ.

★

ಪೈಲೆಟ್ ರಹಿತ ಪ್ಲೇನ್ ~~~~~~~~~~~~~~~~~~~~

ಕವಿವಾಣಿಯೊಂದು ' ಆಗಸದ ಎತ್ತರಕ್ಕೆ ಏರಿ ಹಾರಾಡಿದ ಮಾನವ, ಸಾಗರದ ತಳಕ್ಕೆ ಇಳಿದು ಹುಡುಕಾಡಿದ ಮಾನವ, ಸಹಮಾನವರ ಹತ್ತಿರ ಹತ್ತಿರ ಬರಲಾಗಲಿಲ್ಲ' ಎಂದು ವಿಷಾದಿಸುತ್ತದೆ. ಬೃಹತ್ ಗಾಳಿಪಟಗಳನ್ನು ಹಾರಾಡಿಸುವ ಹವ್ಯಾಸವಿದ್ದ ಮತ್ತು ಸದಾ ಆ ಕಾಯಕದಲ್ಲೇ ನಿರತರಾಗಿದ್ದವರು ರೈಟ್ ಸಹೋದರರು. ಇವರು ಅಮೆರಿಕದವರು. ೧೯೦೩ ರಲ್ಲಿ ಈ ಉತ್ಸಾಹಿ ಸಹೋದರ ತರುಣರು ಗಾಳಿಪಟಗಳನ್ನು ಗಾಳಿ ಹೆಚ್ಚಾಗಿ ಬೀಸದಿರುವ ಸಂದರ್ಭದಲ್ಲೂ ಎತ್ತರಕ್ಕೆ ಹಾರಿಸಬೇಕೆಂಬ ಉತ್ಕಟತೆಯಿಂದ ಪಟದ ಮಧ್ಯೆ ಯಂತ್ರವನ್ನು ಅಳವಡಿಸಿ ಯಶಸ್ವಿಯಾದರು. ಜೊತೆಗೆ ಅದೇ ವರ್ಷ ಪ್ರಯೋಗವನ್ನು ಮುಂದುವರಿಸಿ ಪಟದ ಆಕಾರವನ್ನು ಎತ್ತರಕ್ಕೆ ಬದಲಾಗಿ ಉದ್ದನೆಯ ವಿನ್ಯಾಸಗೊಳಿಸಿ ಯಂತ್ರದ ಮುಂದೆ ಒಂದು ಚಿಕ್ಕ ಆಸನವನ್ನಿರಿಸಿ ಚಾಲಕನೊಡನೆ ಕೆಲವು ಗಜಗಳ ದೂರ ಹಾರಿಸಿ ಯಶಸ್ವಿಯಾದರು. ಅವರು ಆಯ್ಕೆ ಮಾಡಿಕೊಂಡಿದ್ದು ಆಗ ತಾನೇ ಉಳುಮೆಮಾಡಿದ್ದ ವಿಶಾಲವಾದ ಹೊಲ. ಪ್ರಯೋಗ ಸಮಯದಲ್ಲಿ ಗಾಳಿಪಟ ಮುರಿದು, ಯಂತ್ರದ ಸಮೇತ ಚಾಲಕಬಿದ್ದು ಪೆಟ್ಟು ಮಾಡಿಕೊಂಡರೂ ಸಹ ಸಹೋದರರಿಬ್ಬರೂ ಪ್ರಯತ್ನ ಬಿಡದೆ ಕೊನೆಗೆ ಇಬ್ಬರೂ ಎರಡು ಯಂತ್ರಗಳನ್ನು ಜೋಡಿಸಿ ಆಸೀನಬದ್ಧರಾಗಿ ಜೊತೆಯಲ್ಲಿ ಚಾಲನೆ ಮಾಡಿದರು. ಈ ಸಾಹಸ ಸಹೋದರರ ಪೂರ್ಣ ಹೆಸರು, ಒರೈಲಿ ರೈಟ್ (Oruille Wright) ಮತ್ತು ವಿಲ್ಬರ್ ರೈಟ್ (Wilbur Wright).

ಈ ಸಹೋದರರು ತಮ್ಮ ಜೀವಿತ ಕಾಲದಲ್ಲಿ ತಾವೇ ಆವಿಷ್ಕರಿಸಿದ ಈ ಯಂತ್ರ ಪಟ ಪಕ್ಷಿಯಾಕಾರದ ವಿನ್ಯಾಸ ನೀಡಿ, ಬಾಲದ ಭಾಗದಲ್ಲಿ ತಿರುಗುವ ಗಾಳಿಯಂತ್ರವನ್ನು ಮತ್ತು ಸ್ವಲ್ಪ ದೂರ ತುಸು ಎತ್ತರದಲ್ಲಿ ಹಾರಾಡಿ ನೆಲಕ್ಕೆ ಬಿದ್ದಾಗ ಪೆಟ್ಟಾಗದಿರಲೆಂಬ ಕಾರಣಕ್ಕೆ ತಳ ಮಧ್ಯಭಾಗದಲ್ಲಿ ಟೈರ್ ನಂತಹ ಚಕ್ರಗಳನ್ನು ಜೋಡಿಸಿದರು. ದಿಕ್ಕನ್ನು ಬದಲಿಸಲು ಮತ್ತು ವೇಗವನ್ನು ಹೆಚ್ಚಿಸಲು 'ಸ್ಟೇರಿಂಗ್' ಮತ್ತು 'ಗೇರ್' ವ್ಯವಸ್ಥೆಯನ್ನು ತದನಂತರ ಅಳವಡಿಸಿ ಪರಿಕ್ಷಾರ್ಥವಾಗಿ ಒಂದೆರಡು ಮೈಲಿ ಅಗಲದ ಸರೋವರದ ಈ ದಡದಿಂದ ಆ ದಡಕ್ಕೆ ಯಶಸ್ವಿ ಹಾರಿಸಿ ಜಗತ್ ಚಕಿತಗೊಳಿಸಿದರು.

ಜಲಕ್ರೀಡೆಯಂತೆ ವಾಯುಕ್ರೀಡೆಗೆ ಪ್ರಾರಂಭದಲ್ಲಿ ಈ ವಿಮಾನ ಬಳಕೆಯಾದರೂ, ತದನಂತರದಲ್ಲಿ ಸಾರಿಗೆಯಾನವಾಗಿ ವ್ಯಾಪಕ ಬಳಕೆಯಾಯಿತು. ಅಷ್ಟೇ ಕ್ಷಿಪ್ರದಲ್ಲಿ ಯುದ್ಧಗಳಲ್ಲಿ ಈ ವಾಯು ನೌಕೆಗಳನ್ನು ಬಳಸಿಕೊಳ್ಳಲಾಯಿತು. ಮೊದಲಿಗೆ ೧೯೧೫ ರ ಜನವರಿ ೧೧೦ ರಂದು ಜರ್ಮನಿಯ ಸಮರ ವಿಮಾನಗಳು ಬ್ರಿಟನ್ನಿನ ಪೂರ್ವಕರಾವಳಿ

ಪಟ್ಟಣಗಳ ಮೇಲೆ ಬಾಂಬಿನ ಮಳೆಗರೆದವು. ಯುದ್ಧದಲ್ಲಿ ಬಾಂಬ್ ಹಾಕುವುದಕ್ಕೆ ವಿಮಾನ ಬಳಕೆಯಾಗಿದ್ದು ಇಲ್ಲಿಂದಲೇ. ೧೯೧೪ ರಿಂದ ೧೯೧೮ರ ವರೆಗೆ ಜರುಗಿದ ಜಾಗತಿಕ ಮಹಾಯುದ್ಧ ಹಾಗೂ ಅದಕ್ಕಿಂತ ಭೀಕರವಾದ ೧೯೩೯ ರಿಂದ ೧೯೪೫ರ ವರೆಗೆ ಜರುಗಿದ ಎರಡನೇ ವಿಶ್ವಸಮರದಲ್ಲಿ ಈ ವಾಯು ನೌಕೆಗಳನ್ನು ಮಾನವ ವಿನಾಶ ಸಾಧನಗಳಾಗಿ ಬಳಸಿಕೊಂಡಿರುವುದು ಇತ್ತೀಚಿನ ಇತಿಹಾಸ.

ಮುಂದಿನ ಒಂದೆರಡು ದಶಕಗಳಲ್ಲಿಯೇ ಈ ವಾಯು ನೌಕೆಯ ಅನೇಕ ಆಕಾರ ವಿಮಾನಗಳು ವಿನ್ಯಾಸಗೊಂಡವು. ಪ್ರಯಾಣದ ಜಂಬೋಜೆಟ್, ಬೋಯಿಂಗ್, ವಾಯುದೂತ್, ಏರ್‌ಬಸ್, ಯುದ್ಧ ನೌಕೆಗಳಾಗಿ ಹಾಕ್, ಮಿಸೈಲ್‌ಗಳು, ಹೆಲಿಕಾಪ್ಟರ್‌ಗಳು ಕ್ಷಿಪಣಿಗಳು; ದಿ ವ್ಯೋಮ ನೌಕೆಗಳಾಗಿ ರಾಕೆಟ್‌ಗಳು, ಉಡ್ಡಯನ ವಾಹನಗಳು ಇತ್ಯಾದಿ ರೂಪುಗೊಂಡವು. ಎಲ್ಲಕ್ಕಿಂತಲೂ ಮುಖ್ಯವಾಗಿ ಪ್ರಯಾಣದ ವಾಯುವಿಮಾನಗಳಲ್ಲಿ ದೇಶೀಯ, ಅಂತರಾಷ್ಟ್ರೀಯ ವಿಮಾನಗಳು ಮತ್ತು ಅದಕ್ಕೆ ಸಂಬಂಧಪಟ್ಟ ವಾಯುಮಾರ್ಗಗಳು ವಿಮಾನ ನಿಲ್ದಾಣಗಳು ಮತ್ತು ನಿಯಂತ್ರಣ ತಾಣಗಳು ಪ್ರಪಂಚದಾದ್ಯಂತ ನಿರ್ಮಾಣ ಗೊಂಡವು. ಈ ರೀತಿ ಸಂಪರ್ಕ ಮತ್ತು ಸಾರಿಗೆ ಮಾಧ್ಯಮದಲ್ಲಿ ಅಗಣಿತ ಕ್ರಾಂತಿಯಾಗಿರುವುದು ಸರ್ವವಿಧಿತ.

ಹೀಗಿದ್ದೂ ವಾಯು ಪ್ರಯಾಣ ಸಂಪೂರ್ಣ ಸುರಕ್ಷಿತವಲ್ಲ. ಪ್ರತಿ ವರ್ಷ ಜಗತ್ತಿನಾದ್ಯಂತ ಅನೇಕ ಕಡೆ ವಿಮಾನ ಅಪಘಾತಗಳು ಸಂಭವಿಸಿ ಸಾವಿರಾರು ಸಾವು ನೋವುಗಳುಂಟಾಗುತ್ತಿವೆ. ಯಂತ್ರದ ದೋಷ, ಚಾಲನೆಯಲ್ಲಿನ ಲೋಪ, ಚಾಲಕ (ಪೈಲಟ್) ವರ್ಗದ ತಪ್ಪು ನಿರ್ಧಾರ, ಪ್ರತೀಕೂಲ ಹವಾಮಾನ ಇತ್ಯಾದಿಗಳು ಅಪಘಾತಗಳಿಗೆ ಕಾರಣಗಳು.

ಇಪ್ಪತ್ತನೆಯ ಶತಮಾನದ ಅಂತ್ಯದವರೆಗೂ ಪೈಲಟ್ (ಚಾಲಕ) ಇಲ್ಲದೆ ಪ್ಲೇನ್‌ಗಳನ್ನು ನಡೆಸುವುದು, ಕುಚೋದ್ಯದ ಮಾತಾಗಿತ್ತು. ಫ್ಯಾಂಟಸಿ ಲೋಕದ ರಂಜನೀಯ ಕಥೆಗಳಾಗಿತ್ತು.

ಆದರೆ ಇದು ಇಂದು ಸಾಧ್ಯವಾಗಿದೆ. ಒಂದು ಕಾಲಕ್ಕೆ ನಿರ್ವಾಹಕ (Conductors) ಇಲ್ಲದ ಪ್ರಯಾಣಿಕರ ಬಸ್ಸ್‌ಗಳನ್ನು ನಡೆಸುವುದು ನಮಗೆಲ್ಲಾ ಆಶ್ಚರ್ಯವಾಗಿತ್ತು. ಆದರೆ ಈಗ ಎಲ್ಲಾ ತಡೆರಹಿತ ಬಸ್ಸ್‌ಗಳಲ್ಲಿ ನಿರ್ವಾಹಕ ಇರುವುದೇ ಇಲ್ಲ. ಯುದ್ಧ ಕ್ಷಿಪಣಿಗಳು ಮತ್ತು ವ್ಯೋಮ ನೌಕೆಗಳನ್ನು ಚಾಲಕ ರಹಿತನಾಗಿ ಕಳಿಸಿರುವುದನ್ನು ನೋಡಿದ್ದೇವೆ. ವ್ಯೋಮ ನೌಕೆ ನಮ್ಮ ಭೂ ಕಕ್ಷೆಯನ್ನು ದಾಟಿ, ೧೯೬೯ ರ ಜೂನ್-೨೧ ರಂದು ನಮ್ಮ ಉಪಗ್ರಹ ಚಂದ್ರನ ಮೇಲೆ ಇಳಿಯಿತು. ಅದರಲ್ಲಿದ್ದ ಗಗನಯಾನಿ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಪಾದಾರ್ಪಣೆ ಮಾಡಿದ ಮೊದಲ ಮಾನವ. ೧೯೮೪ರಲ್ಲಿ ಗಗನಯಾನಿ ಶ್ರೀ ರಾಕೇಶ್ ಶರ್ಮ ಅಂತರಿಕ್ಷಯಾನ ಕೈಗೊಂಡ ಮೊದಲ ಭಾರತೀಯ. ೧೯೯೭ ರ ನವೆಂಬರ್ ೧೯ ರಲ್ಲಿ ಹೊರಟು ೧೬ ದಿನಗಳ ಅಂತರಿಕ್ಷಯಾನ ಕೈಗೊಂಡು ಯಶಸ್ವಿಯಾಗಿ ಹಿಂತಿರುಗಿದ ಪ್ರಥಮ ಭಾರತೀಯ ಮಹಿಳೆ, ಹರ್‍ಯಾಣ ರಾಜ್ಯದ ಕಲ್ಪನಾ ಚಾವ್ಲಾ.

ಆದರೆ ವಾಯು ಪ್ರಯಾಣಿಕರ ಪ್ಲೇನ್‌ನಲ್ಲಿ ಪೈಲೆಟ್ ಇಲ್ಲದೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅತಿ ಸುರಕ್ಷಿತವಾಗಿ ಮತ್ತು ನಿಗದಿತ ವೇಳೆಯಲ್ಲಿ ಯಾವುದೇ ಅಪಘಾತವಿಲ್ಲದೆ ಗುರಿಮುಟ್ಟಿ ಪ್ರಯಾಣಿಕರ ಪ್ರವಾಸಕ್ಕೆ ಅನುವುಮಾಡಿಕೊಟ್ಟಿದೆ. ಮಾನವ ಸಹಿತ ಕಳಿಸುವ ವಿಮಾನಗಳು ಆಕಸ್ಮಾತ್ ಅಪಘಾತಕ್ಕೆ ಈಡಾಗಬಹುದು. ಆದರೆ ಪೈಲೆಟ್ ರಹಿತ ಪ್ಲೇನ್ (ವಿಮಾನ) ಯಾವುದೇ ಅಪಾಯಕ್ಕೆ ಆಸ್ಪದ ಕೊಡುವುದಿಲ್ಲ. ತನ್ನ ಮೂಲ ನೆಲೆ (Head Quarters base) ಯಲ್ಲಿ ಅಳವಡಿಸಿ ನಿಯಂತ್ರಣಯಂತ್ರದ ಸಂದೇಶದ ಮೇರೆಗೆ ಪ್ಲೇನ್ ಕಾರ್ಯನಿರ್ವಹಿಸುತ್ತದೆ. ಇಡೀ ಯಂತ್ರ ಜಾಲವನ್ನು ಕಂಪ್ಯೂಟರ್‌ಗೆ ಅಳವಡಿಸಿ, ಆ ಕಂಪ್ಯೂಟರ್ ನಿಯಂತ್ರಣವನ್ನು ಮೂಲ ನೆಲೆ ಅಥವಾ ನಿಯಂತ್ರಣ ನೆಲೆ (Controlling base) ಯಿಂದ ನಿರಂತರವಾಗಿ ನಿಗಾವಣೆ (Monitoring) ಮಾಡುತ್ತಾ, ನಿಖರವಾದ ಸಂದೇಶಗಳನ್ನು ಕಳಿಸಿ ಇಡೀ ವೈಮಾನಿಕ ಯಂತ್ರವು ಸಂದೇಶದ ಅನುಗುಣವಾಗಿ ಕಾರ್ಯನಿರ್ವಹಿಸುತ್ತದೆ. ವಿಮಾನವು ಟೇಕ್-ಆಫ್ ತೆಗೆದುಕೊಳ್ಳುವುದರಿಂದ ಮೊದಲ್ಗೊಂಡು ಎಷ್ಟು ಎತ್ತರಕ್ಕೆ ಹಾರಬೇಕು, ಎಲ್ಲಿ ತಿರುಗಬೇಕು, ಯಾವ ವೇಗದಲ್ಲಿ ಚಲಿಸಬೇಕು, ವಿಶೇಷಪರಿಸ್ಥಿತಿಯಲ್ಲಿ ಯಾವ ರೀತಿ ನಿರ್ಧಾರತೆಗೆದುಕೊಳ್ಳಬೇಕು. ಪ್ರತೀಕೂಲ ವಾತಾವರಣದಲ್ಲಿ ಎಲ್ಲಿ ಇಳಿಯಬೇಕು. ಎಂಬೆಲ್ಲಾ ಚಾಲನೆ- ನಿಯಂತ್ರಣಗಳು ನಿಯಂತ್ರಣಾ ನೆಲೆಯಿಂದ ನಿರ್ವಹಿಸಲಾಗುವುದು. ಒಟ್ಟಿನಲ್ಲಿ ಇಡೀ ವಿಮಾನದಲ್ಲಿ ಚಾಲಕವರ್ಗ (Crew)ವೇ ಇರುವುದಿಲ್ಲ. ಕೇವಲ ಪ್ರಯಾಣಿಕರು, ಗಗನ ಸಖಿಯರು ಮತ್ತು ಇತರೆ ಪರಿಚಾರಕರಿರುತ್ತಾರೆ. ಚಾಲಕ ಸಿಬ್ಬಂದಿಯ ನರಪಿಳ್ಳೆಯೂ ಇರುವುದಿಲ್ಲ. ಆದಾಗ್ಯೂ ವಿಮಾನದ ಚಾಲನೆಯಲ್ಲಿ ಕರಾರುವಾಕ್ಕುತನ, ವೇಳಾಪಾಲನೆ, ಸೂಕ್ತ ನಿರ್ಧಾರಗಳು, ವಾಯುಮಾರ್ಗದ ನಿಖರತೆ ಮತ್ತು ಸೇರುವ ಸ್ಥಳಗಳ ನಿರ್ದಿಷ್ಟ ನಿಲ್ದಾಣದಲ್ಲಿ ನಿಲ್ಲುವಿಕೆ, ಎಲ್ಲವೂ ನಿಯಂತ್ರಣಾ ನೆಲೆಯಿಂದ ಆಯಾ ವಿಮಾನದಲ್ಲಿ ಜೋಡಿಸಿರುವ ಕಂಪ್ಯೂಟರ್ ಮೂಲಕ ಎಲ್ಲವನ್ನೂ ನಿಭಾಯಿಸಲಾಗುವುದು. ದಟ್ಟ ಮಂಜು ಕವಿದ ವಾತಾವರಣ ಅಥವಾ ಇತರೆ ಪ್ರತೀಕೂಲ ವಾತಾವರಣವಿದ್ದಲ್ಲಿ ತತ್‌ಕ್ಷಣ ಸುರಕ್ಷಿತ ಸ್ಥಳದಲ್ಲಿ ವಿಮಾನ ಕೆಳಗಿಳಿದು ಬಿಡುವುದು. ಇದು ಕಂಪ್ಯೂಟರ್‌ನ ದೃಶ್ಯ ವೀಕ್ಷಣಾಧಾರದ ಮೇಲೆ ವಿಶ್ಲೇಷಿಸಿ ನಿಯಂತ್ರಣ ನೆಲೆಗೆ ಕ್ಷಣಮಾತ್ರದಲ್ಲಿ ಸಂದೇಶ ಕಳಿಸಿ, ದೂರಸಂವೇದಿ ಯಂತ್ರದ ಮೂಲಕ (Radar) ಇಳಿಯುತ್ತಿರುವ ಸ್ಥಳ ಕಂದರ, ಬೆಟ್ಟ ಅಥವಾ ಜಲಾಶಯವಿದ್ದಲ್ಲಿ ಅವನ್ನು ದಾಟಿ, ಸುರಕ್ಷಿತ ಸ್ಥಳದಲ್ಲಿಯೇ ಬಂದು ನಿಲ್ಲುವುದು. ಇದು ಕರಾರುವಾಕಾಗಿ ಜರುಗಿ, ಮನುಷ್ಯ ಚಾಲಕನ ನಿರ್ಧಾರಕ್ಕಿಂತಲೂ ನಿಖರತೆ ಸಾಧಿಸುವುದು. ಪ್ರಯಾಣಿಕರಿಗೆ ಈ ಬಗ್ಗೆ ಎಲ್ಲಾ ಸೂಚನೆ ಮಾಹಿತಿಯನ್ನು ನಿಯಂತ್ರಣ ನೆಲೆಯ ಮೂಲಕ ರವಾನಿಸಿ ವಿಮಾನದಲ್ಲಿ ಅಳವಡಿಸಿರುವ ವಿಶೇಷಧ್ವನಿವರ್ಧಕಗಳ ಮೂಲಕ ಘೋಷಿಸಲಾಗುವುದು. ಅನತಿ ದೂರದಲ್ಲಿರುವ ವಿಮಾನ ವಾಹನಕ್ಕೆ ಸಂಪರ್ಕ ತಾಣದಿಂದ ಸಿಗ್ನಲ್ ತರಂಗಗಳನ್ನು ರವಾನಿಸಿ ಅವುಗಳನ್ನು ವಿಮಾನದಲ್ಲಿ

ಅಳವಡಿಸಿರುವ ಪರಿವರ್ತನಾ ಸಾಧನ(Modulator) ಗಳ ಮೂಲಕ ಶಬ್ದ ತರಂಗಗಳಾಗಿ ಪರಿವರ್ತಿಸಲಾಗುವುದು. ಇದರಿಂದ ಅಪಾಯ- ಅಪಘಾತಗಳ ಸಂಭವ ತುಲನಾತ್ಮಕವಾಗಿ ಅತ್ಯಂತ ಕಡಿಮೆಯಾಗುವುದು. ಈಗಾಗಲೇ ಇಂತಹ ಪೈಲಟ್ ರಹಿತ ವಿಮಾನಗಳನ್ನು ವಿವಿಧ ಪ್ರದೇಶಗಳ ನಿಲ್ದಾಣಗಳನ್ನು ಒಳಗೊಂಡಂತೆ ಪ್ರಯಾಣಿಸಿ ಯಶಸ್ವಿಯಾಗಿದ್ದಾರೆ. ಮುಂದಿನ ಕೆಲವು ವರ್ಷಗಳಲ್ಲಿ ಇಂತಹ ಪೈಲೆಟ್ ರಹಿತ ಪ್ಲೇನ್‌ಗಳು ಎಲ್ಲೆಡೆ ಹಾರಾಡಲಿವೆ. ಆಗ ಪ್ಲೇನ್‌ನ ಸಂಬಂಧಿತ 'ಕಾಕ್‌ಪಿಟ್', ಕ್ರಿವ್(Crew) ಎಂಬ ಶಬ್ದಗಳು ವೈಮಾನಿಕ ನಿಘಂಟಿನಿಂದ ಪದಚ್ಯುತಿಗೊಳ್ಳುವುವು. ಪೈಲೆಟ್ ರಹಿತ ಪ್ಲೇನ್‌ಗಳು ಮುಂದಿನ ಪೀಳಿಗೆಗೆ ಸಾಮಾನ್ಯ ವಿಷಯವಾದರೂ, ಇಂದಿನ ಪೀಳಿಗೆಗೆ ಇದು ಅಸಾಮಾನ್ಯ ವಿದ್ಯಮಾನವಾಗಿ ಕಾಣುವುದು.

ಈ ಮೇಲಿನ ವೈಮಾನಿಕ ವಿಸ್ಮಯವು ಸದ್ಯದಲ್ಲೇ ವಿಜ್ಞಾನದ ಸಾಮಾನ್ಯ ವಿಷಯವಾಗುವುದನ್ನು ನಾವೆಲ್ಲಾ ನಿರೀಕ್ಷಿಸೋಣ ಮತ್ತು ಅಂತಹ ವಿಮಾನಗಳಲ್ಲಿ ಸಂಚರಿಸುವ ಅವಕಾಶಕ್ಕೆ ಎದುರು ನೋಡೋಣ.

★

ಸ್ಫುರದ್ರೂಪಿ ಸಂತಾನ ~~~~~~~~~~~~~~~~~~~~~~~~

ಆಧುನಿಕ ಮಾನವರನ್ನು ಹಲವಾರು ಬಾಹಿಕ ವೈವಿಧ್ಯತೆಗಳಿಂದ ಕೆಲವು ಗುಂಪುಗಳನ್ನಾಗಿ ವಿಂಗಡಿಸಬಹುದು. ಗಣನೀಯವಾದ ಬಾಹಿಕ ವ್ಯತ್ಯಾಸಗಳೆಂದರೆ, ಚರ್ಮ ಹಾಗೂ ಅದರ ಬಣ್ಣ; ಕೂದಲು; ಕಣ್ಣು; ಮೂಗಿನ ಆಕಾರ; ತುಟಿಯ ಗಾತ್ರ; ದೇಹದ ಆಕಾರ ಮತ್ತು ವಿನ್ಯಾಸ. ಇವುಗಳಿಂದ ಭೂಮಿಯ ಮಾನವರನ್ನು ಮಾನವ ವಿಜ್ಞಾನಿಗಳು (Anthropologists) 'ತಳಿಗಳು' ಅಥವಾ ' ಜನಾಂಗ' ಗಳೆಂದು ವಿಂಗಡಿಸಿದ್ದಾರೆ(Stocks; Races). ಈ ರೀತಿಯ ಜನಾಂಗೀಯ ವಿಂಗಡನೆ, ಮಾನವ ಇತಿಹಾಸವನ್ನು ಅಧ್ಯಯಿಸಲಾಗಿ, ಭೌಗೋಳಿಕ ಪ್ರತ್ಯೇಕತೆಯಿಂದ ಸಾಧ್ಯವಾಗಿರಲಿಲ್ಲ. ಭೂ ಪರ್ಯಟನೆಯ ನಂತರ ಈ ಮನುಕುಲದ ಅಧ್ಯಯನ ಸಾಧ್ಯವಾಯಿತು.

ಸಾಮಾನ್ಯವಾಗಿ ಈ ಮಾನವ ಜನಾಂಗಗಳನ್ನು ಐದು ಗುಂಪುಗಳಾಗಿ ವಿಂಗಡಿಸಿಲಾಗಿದೆ; ಕಕೇಶಿಯನ್, ಮಂಗೋಲಿಯನ್, ಕಾಂಗೋಲಿಯನ್, ಕಾಪೋಲಿಯನ್ ಮತ್ತು ಆಸ್ಟ್ರೇಲಿಯನ್.

ಕಕೇಶಿಯನ್‌ರು ರೂಪು ದೇಹಧಾರ್ಢ್ಯ, ಬಣ್ಣ ಮತ್ತು ಎತ್ತರಗಳಲ್ಲಿ ಸ್ಫುರದ್ರೂಪಿಗಳು. ಮಂಗೋಲಿಯನ್‌ರವರು ಬಣ್ಣದಲ್ಲಿ ಗೌರವ ವರ್ಣದವರಾದರೂ ಕುಳ್ಳ ಆಕೃತಿಯ ಗಿಡ್ಡ ಮೂಗಿನ ಕಿರಿದಾದ ಕಣ್ಣಿನ ಜನಾಂಗ, ಕಾಂಗೋಲಿಯನ್ (ಕಾಂಗೈಡ್ಸ್) ಅವರು ನೀಗ್ರೋ ಮತ್ತು ಪಿಗ್ಮಿ ಜನಾಂಗದವರು. ಕಪೋಲಿಯನ್ (Capoids) ರವರು ನಾಚಿಕೆ ಸ್ವಭಾವದ ಆಫ್ರಿಕ ಖಂಡದ ಗುಡ್ಡಗಾಡಿನವರು. ಆಸ್ಟ್ರೇಲಿಯನ್‌ರವರು ಹೆಸರೇ ಸೂಚಿಸುವಂತೆ ಆಸ್ಟ್ರೇಲಿಯದವರು, ಕಕೇಶಿಯನ್ ಜನಾಂಗದವರು ಯೂರೋಪ್; ಇಂಡಿಯ ಮತ್ತು ಅಮೇರಿಕಾದ ಕೆಲವು ಭಾಗಗಳಲ್ಲಿ ಕಾಣಸಿಗುವರು, ಚೈನಾ, ಜಪಾನ್, ಮಂಗೋಲಿಯಾ, ಮಲೇಷಿಯ, ಕೊರಿಯ, ಇಂಡೋನೇಷಿಯ ಮುಂತಾದ ಕಡೆ ವಿಸ್ತರಿಸಿದ್ದಾರೆ.

ಇದಲ್ಲದೆ ನಾಜಿಗಳು, ಯೆಹೂದಿ(Jesus) ಆರ್ಯರು, ಪರ್ಶಿಯಾ, ಅರೇಬಿಯನ್, ಆ್ಯಂಗ್ಲೊ ಸ್ಯಾಕ್ಸನ್ ಇತ್ಯಾದಿ ಉಪ- ಜನಾಂಗಗಳ ವಿಂಗಡನೆಯೂ ಆಗಿದೆ. ಅದರಲ್ಲೂ ವಿಶ್ವ ಸಮರದ ಅವಧಿಯಲ್ಲಿ ಈ ಜನಾಂಗೀಯ ಧೋರಣೆಯ ಅತಿರೇಕಗಳು ಪ್ರಮುಖ ಪಾತ್ರ ವಹಿಸಿದವು. ಹಿಟ್ಲರನ ಆಡಳಿತದಲ್ಲಿ ಜರ್ಮನಿಯ 'ಜನಾಂಗ ಪರಿಶುದ್ಧತೆ'ಯ ಬಗ್ಗೆ ಇತಿಹಾಸದಲ್ಲಿ ನಾವೆಲ್ಲಾ ಓದಿದ್ದೇವೆ. ಆತ ಯಹೂದಿಯರಿಗೆ ನೀಡಿದ ಸಾಮೂಹಿಕ ಶಿಕ್ಷೆ, ಹಿಂಸೆ ಮತ್ತು ಅವರನ್ನು ನಾಜಿಗಳಾಗಿ ಪರಿವರ್ತಿಸಲು ಅವರಿಗೆ ವಿಶೇಷ ಅನಿಲವನ್ನು ಒತ್ತೆಯಾಳಾಗಿದ್ದ ಯಹೂದಿಗಳ ಕಣ್ಣುಗಳಿಗೆ ಬಿಟ್ಟು ಅವರನ್ನು ನೀಲಿಕಣ್ಣುಗಳ ನಾಜಿಗಳಂತೆ ಪರಿವರ್ತಿಸುವ ಹುಚ್ಚು ಹಂಬಲವನ್ನು ಪ್ರದರ್ಶಿಸಿದ. ಕಕೇಶಿಯನ್‌ರವರಲ್ಲೇ ಪೂರ್ವ

ಯೂರೋಪಿನವರು ಆ್ಯಂಗ್ಲೋ-ಸ್ಯಾಕ್ಸನ್ ರಿಗಿಂತ ಕೀಳು ತಳಿಯವರೆಂಬ ಭೇದ ೧೯೩೦ರ ದಶಕದಲ್ಲಿ ಅಮೆರಿಕಾ ಮತ್ತು ಯುರೋಪಿನ ಕೆಲವೆಡೆ ಅಂದೋಲನವಾಗಿ ವ್ಯಾಪಿಸಿತು. ಭಾರತದಲ್ಲಿ ಆರ್ಯ-ಡ್ರಾವಿಡ; ಸಿಲೋನ್‌ನಲ್ಲಿ ತಮಿಳು ಸಿಂಹಳಿಯರೆಂಬ ಜನಾಂಗೀಯ ಘರ್ಷಣೆಗಳು ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತವೆ. ಅದಕ್ಕೆಲ್ಲಾ ಕಾರಣ, ಮಾನವರಲ್ಲಿನ ಬಾಹಿಕ ರೂಪು-ರೇಷೆಗಳ ವ್ಯತ್ಯಾಸ. ಕೆಲವೊಮ್ಮೆ ಆಂತರಿಕ ವ್ಯತ್ಯಾಸಗಳಾದ ವಂಶವಾಹಿ (ಜೀನ್) ಮತ್ತು ರಕ್ತದ ಗುಂಪಿನ ಆಧಾರದ ಮೇಲೆ ವಿಂಗಡನೆಯಾಗಿದೆ.

ಇಡಿ ಭೂಖಂಡದಲ್ಲಿ ಸುಂದರ ಕಾಯದ, ಎತ್ತರ ನಿಲುವಿನ ಸದ್ಗುಣ ಸಂತಾನವನ್ನು ನಾವು ಕಾಣಲಾಗಿದೆ?

ಯಾವುದೇ ಜನಾಂಗದಲ್ಲಿರುವ ಕೆಲವು ಅನುವಂಶಿಕ ಬಾಹಿಕ ಮತ್ತು ಆಂತರಿಕ ನ್ಯೂನತೆಗಳನ್ನು ಸರಿಪಡಿಸಿ ಇಡೀ ಪ್ರಪಂಚದಲ್ಲಿ ಸುಂದರ ತಳಿಗಳನ್ನು ಸೃಷ್ಟಿಸಲಾಗಿದೆ?

ಈಗಾಗಲೇ ನೀವು ತದ್ರೂಪಿ ತಳಿಗಳ ಸಂಬಂಧಿತ 'ಕ್ಲೋನಿಂಗ್' ಆವಿಷ್ಕಾರದ ಬಗ್ಗೆ ತಿಳಿದಿರುವಿರಿ. ಈಗ ಸ್ಫುರದ್ರೂಪಿ ತಳಿಗಳ ಬಗ್ಗೆ ತಿಳಿಯಿರಿ. ಜೀವಿಯ ಆಕಾರ ಮತ್ತು ಸ್ವಭಾವಗಳು ತಲೆಮಾರಿನಿಂದ ತಲೆಮಾರಿಗೆ 'ಜೀನ್' ಗಳ ಮೂಲಕ ರವಾನೆಯಾಗುತ್ತವೆ. ಇದು ಜೀವಶಾಸ್ತ್ರದ ತಳಿ ವಿಜ್ಞಾನದ ಶೋಧನೆ, ಈ ಜೀನ್‌ಗಳ ರಚನೆಯಲ್ಲಿ ವರ್ಣತಂತು (ಕ್ರೊಮೋಸೋಮ್) ಮತ್ತು ಆ ವರ್ಣ ತಂತುವಿನಲ್ಲಿನ ಡಿ.ಎನ್.ಎ(ವರ್ಣಲೋಳೆ) ಗಳ ಪಾತ್ರ ಅತಿಮುಖ್ಯವಾದುದು. ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ಜೀನ್‌ಗಳ ಆವಿಷ್ಕಾರದೊಂದಿಗೆ ಡಿ.ಎನ್.ಎ. ವಿಶ್ಲೇಷಣೆಯೊಂದಿಗೆ ಜೀನ್‌ಗಳನ್ನು ಗುರುತಿಸುವಲ್ಲಿ (Genetic Coding) ಮತ್ತು ಅವುಗಳನ್ನು ಪರಿವರ್ತಿಸು (Decoding) ವಲ್ಲಿ ಐತಿಹಾಸಿಕ ಹಾಗೂ ಕ್ರಾಂತಿಕಾರಿಕ ಸಂಶೋಧನೆಗಳಾಗಿವೆ. ೧೯೫ ರಿಂದ ಇತ್ತೀಚಿನ ಸೂಕ್ಷ್ಮ ಜೀವಾಣುಶಾಸ್ತ್ರ (Microbiology) ದಲ್ಲಿ ಆಗುತ್ತಿರುವ ಆವಿಷ್ಕಾರಗಳಿಂದ ತಳಿ ವಿಜ್ಞಾನದಲ್ಲಿ ತೀವ್ರ ಪ್ರಗತಿ ಕಂಡುಬರುತ್ತಿದೆ. ಈ ಆವಿಷ್ಕಾರದ ಕರ್ತೃ ಅಮೇರಿಕಾದ ವಂಶತಳಿ ಸಂಶೋಧನಾ ಮುಖ್ಯಸ್ಥರಾದ ಡಾ. ಜೆ. ಜಿ. ವೆಂಟರ್. ಇವರ ಈ ಸಂಶೋಧನೆಯಿಂದ ಗರ್ಭಸ್ಥ ಭ್ರೂಣದಲ್ಲಿನ ಜೀನ್ಸ್‌ಗಳನ್ನು ಡಿ.ಎನ್.ಎ. ಮೂಲಕ ವಿಶ್ಲೇಷಿಸಿ ಆ ಭ್ರೂಣದ ಲಿಂಗ ನಿರ್ಣಯ. ಹುಟ್ಟುವ ಮಗುವಿನ ಆಕೃತಿ, ಸ್ವಭಾವ ಅಷ್ಟೇ ಏಕೆ ಆ ಭ್ರೂಣಸ್ಥ ಮಗುವಿನ ಭವಿಷ್ಯತ್ತಿನ ಆಕೃತಿ-ಸ್ವಭಾವಗಳನ್ನು ಕೋಡಿಂಗ್ ಮತ್ತು ಡಿ-ಕೋಡಿಂಗ್ ಮಾಡುವ ಪ್ರಕ್ರಿಯೆಯಲ್ಲಿ ಇಡೀ ಜೀನ್‌ಗಳನ್ನೇ ನಿಯಂತ್ರಿಸಬಹುದಾಗಿದೆ. ಗರ್ಭಸ್ಥ ಭ್ರೂಣದ ಜೀನ್‌ಗಳ ಸಮೂಹದಲ್ಲೇ ಪರಸ್ಪರ ನಿಯಂತ್ರಿಸುವ ಕ್ರಿಯೆ ಇತ್ತೀಚೆಗೆ ಗೊತ್ತಾಗಿದೆ. ಕ್ಯಾಲಿಫೋರ್ನಿಯಾ ವಿಶ್ವ ವಿದ್ಯಾಲಯದ ಮೈಕೇಲ್ ಲೆವಿನ್ ಎಂಬ ಸಂಶೋಧಕ, ಬೆಳೆಯುತ್ತಿರುವ ಭ್ರೂಣದ ತಲೆ ಮತ್ತು ದೇಹವನ್ನು ವಿಂಗಡಿಸುವ 'ಈವ್' ಎಂಬ ಜೀನ್ ಇತರ ಹಲವು ಜೀನ್‌ಗಳನ್ನು ನಿಯಂತ್ರಿಸಲ್ಪಡುತ್ತದೆ ಎಂಬುದನ್ನು ಕಂಡುಹಿಡಿದಿದ್ದಾರೆ. ಅಂದರೆ ಇಲ್ಲಿ ಸ್ತ್ರೀ(ಈವ್) ಜೀನ್ಸ್‌ಗಳು ಪುರುಷ ಜೀನ್‌ಗಳ ಮೇಲೆ ಹತೋಟಿ ಸಾಧಿಸುತ್ತವೆ. ಜೀವ ಸಂಕುಲದಲ್ಲಿ ಮಾತ್ರ ಪ್ರಧಾನಿಕೆಯೇ ಹೆಚ್ಚು. ಆದರಿಂದಲೇ 'ಕ್ಲೋನಿಂಗ್' ಪದ್ಧತಿಯಲ್ಲಿ 'ಅಂಡಾಣು' ವಿನಿಂದಲೇ

4

'ವೀರ್ಯಾಣು' ವಿಲ್ಲದೆ ಸಂತಾನ ಪ್ರಾಪ್ತಿ ಮಾಡಬಹುದು, ಆ ಸಂತಾನವನ್ನು 'ಅಬೀಜ ಸಂತಾನ' ವೆನ್ನುತ್ತಾರೆ.

ಆಶ್ಚರ್ಯವೆಂದರೆ, ಪುರುಷ ಜೀನ್‌ಗಳ ಸಂಖ್ಯೆ ಹೆಚ್ಚಿದಷ್ಟು ಆ ಸಂತಾನದಲ್ಲಿ ಅಪರಾಧಿ ಮನೋವೃತ್ತಿ ಹೆಚ್ಚಿರುವುದು ಕಂಡುಬಂದಿದೆ. ಅದಕೆಂದೇ 'ಈವ್' ಜೀನ್‌ಗಳು ಕೆಲವು ಪುರುಷ ಜೀನ್‌ಗಳ ಮೇಲೆ ಪಟ್ಟಿಯೊಂದನ್ನು ಎಳೆದು ಅವುಗಳನ್ನು ನಿಯಂತ್ರಿಸುತ್ತವೆ. ಈ ನಿಯಂತ್ರಣಕ್ಕೊಳಗಾದ ಜೀನ್‌ಗಳು ಪರಿಸರ ಪ್ರಭಾವದಿಂದ ಸುಪ್ತಾವಸ್ಥೆಯಿಂದ ಸ್ಫೋಟಗೊಳ್ಳುತ್ತವೆ. ಆದ್ದರಿಂದ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಪರಿಸರ ಬಹಳ ಪ್ರಭಾವ ಬೀರುವುದರಿಂದ ಉತ್ತಮ ಪರಿಸರವನ್ನು ಒದಗಿಸಬೇಕು. ಇದು ಅತ್ಯಗತ್ಯ.

ಜೀನ್‌ಗಳ ಡಿಕೋಡಿಂಗ್ ಮಾಡಿ ಕಂಪ್ಯೂಟರ್‌ಗೆ ಒಳಪಡಿಸಿದರೆ ಮುಂದೆ ಹುಟ್ಟುವ ಮಗುವಿನ ಆಕಾರ-ಸ್ವಭಾವ ಇತರೆ ಯಾವುದೇ ಅಂಗವಿಕಲತೆ ಎಲ್ಲವೂ ಗೊತ್ತಾಗುತ್ತದೆ. ಕಂಪ್ಯೂಟರ್ ಕೈಚಳಕದಲ್ಲಿ ಪುರುಷನನ್ನು ಸ್ತ್ರೀಯನ್ನಾಗಿ, ಸ್ತ್ರೀಯನ್ನು ಪುರುಷನನ್ನಾಗಿ, ಕುರೂಪಿಗಳನ್ನುಸ್ಫುರದ್ರೂಪಿಯಾಗಿ, ಮಂಗೋಲಿಯನ್‌ನನ್ನು ಕಕೇಶಿಯನನ್‌ನಂತೆ ತತ್‌ಕ್ಷಣದಲ್ಲಿ ಮಾರ್ಪಡಿಸಿ (ದೃಶ್ಯ ಮಾಧ್ಯಮದಲ್ಲಿ) ತೋರಿಸುವುದನ್ನು ನೀವು ಟಿ.ವಿ.ಗಳಲ್ಲಿ ನೋಡಿರುವಿರಿ. ಕಂಪ್ಯೂಟರ್ ಸಹಾಯದಿಂದ ಸೃಷ್ಟಿಸಿದ 'ಜುರಾಸಿಕ್ ಪಾರ್ಕ್' ಮತ್ತು 'ದಿ ಲಾಸ್ಟ್ ವರ್ಲ್ಡ್' ಎಂಬ ಡೈನೋಸಾರ್ ಚಲನಚಿತ್ರಗಳನ್ನು ನೋಡಿರುವಿರಿ. ಈ ಮಹಾ ಸರೀಸೃಪಗಳು ಅಸ್ತಿತ್ವದಲ್ಲಿ ಇಲ್ಲದಿದ್ದರೂ ಆ ಬೃಹತ್ ಪ್ರಾಣಿಯನ್ನು ದೃಶ್ಯ ಮಾಧ್ಯಮದಲ್ಲಿ ಸೃಷ್ಟಿಸಿರುವುದು ಕಂಪ್ಯೂಟರ್‌ನ ತಂತ್ರಜ್ಞಾನದ ಕೊಡುಗೆ. ಆದರಂತೆ ಜೀನ್ಸ್‌ನ ಡಿಕೋಡಿಂಗ್ ಮಾಡಿ ಡಿ.ಎನ್.ಎ. ವಿಶ್ಲೇಷಣೆ ಮೂಲಕ ಕಂಪ್ಯೂಟರ್ ಸಹಾಯದಿಂದ ಹುಟ್ಟುವ ಮಗುವಿನ ವಿವಿಧ ಹಂತದ ಜೀವಿತ ಅವಧಿಯಲ್ಲಿ (ಬಾಲ್ಯ, ಯೌವನ, ಮಧ್ಯವಯಸ್ಕ, ಮುಪ್ಪು ಇತ್ಯಾದಿ)ನ ಭವಿತವ್ಯದ ರೂಪು, ಆಕಾರ ಮತ್ತು ಗುಣ-ಸ್ವಭಾವಗಳನು ಸೃಷ್ಟಿಸಿ, ಯಾವುದೇ ನ್ಯೂನತೆಗಳನ್ನು ಸರಿಪಡಿಸಿ ಅಗತ್ಯವಾದ ಸ್ಫುರದ್ರೂಪಿ ಸಂತಾನವನ್ನು ಪಡೆಯಬಹುದು.

ಒಂದು ವಾರ ಕಳೆದು ಎರಡನೆ ವಾರಕ್ಕೆ ಕಾಲಿಟ್ಟಿರುವ, ಗರ್ಭಸ್ಥ ಭ್ರೂಣದಲ್ಲಿನ ಜೀನ್ಸ್‌ಗಳನ್ನು ಈ ಅಧ್ಯಯನಕ್ಕೆ ಬಳಸಬಹುದು. ಜೀನ್ಸ್‌ಗಳ ಜಾಲವನ್ನು ಜಾಲಾಡಿಸಿ ಭ್ರೂಣಕ್ಕೆ ಯಾವುದೇ ಧಕ್ಕೆಯಾಗದಂತೆ ಮೂಲ ಗುಣ ಸ್ವಭಾವ ಮತ್ತು ಆಕಾರ-ಬಣ್ಣ ಇತ್ಯಾದಿಗಳನ್ನು ಬದಲಾಯಿಸುವ ಸಾಧ್ಯತೆ ಬಗ್ಗೆ ತೀವ್ರ ಸಂಶೋಧನೆಗಳು ಈಗ ಜಗತ್ತಿನಾದ್ಯಂತ ಜರುಗುತ್ತಿವೆ. ಇದು ಯಶಸ್ವಿಯಾದಲ್ಲಿ ಜನಾಂಗೀಯ ಪರಿಕಲ್ಪನೆ ಅಳಿದು; ವರ್ಣ ಭೇದ; ಜಾತಿಭಾವನೆ ಮುಂತಾದ ಸಾಮಾಜಿಕ ಹಾಗೂ ಅಂತರಾಷ್ಟ್ರೀಯ ಪಿಡುಗುಗಳು ತೊಲಗುತ್ತವೆ. ಆಗ ಭಾರತೀಯ ಚಿಂತನೆಯ 'ವಸುಧೈಕಕುಟುಂಬಂ' ಅನ್ನು ಕಾಣಬಹುದು. ಇದರಿಂದ 'ವಿಶ್ವಶಾಂತಿ' ಸ್ಥಾಪಿತಗೊಳ್ಳುತ್ತದೆ.

ಇದರಿಂದ 'ಹುಟ್ಟುಗುಣ ಸುಟ್ಟರೂ ಹೋಗದು' ಎಂಬ ಗಾದೆಯೇ ಸುಳ್ಳಾಗುವುದಲ್ಲವೆ?

★

ಲಂಡನ್‌ನಲ್ಲಿ ಕುಳಿತು ಲಕ್ನೋದಲ್ಲಿ ಚಿಕಿತ್ಸೆ ಮಾಡುವ ವೈದ್ಯ ~~~~~~~~~~~~~~~~~~~~~~~~~~~~~~~

ರಾಮ-ರಾವಣರ ಯುದ್ಧದಲ್ಲಿ ಲಕ್ಷ್ಮಣ ಮೂರ್ಛೆ ಹೋದಾಗ ಆತನ ಸ್ಮೃತಿ ಚಿಕಿತ್ಸೆಗಾಗಿ ವೈದ್ಯರು ಸಲಹೆ ಮಾಡಿದ ಗಿಡ-ಮೂಲಿಕೆಯನ್ನು ತರಲು ಹನುಮಂತ ಹಿಮಾಲಯಕ್ಕೆ ಹಾರುತ್ತಾನೆ. ಅಲ್ಲಿ ವೈದ್ಯರು ವರ್ಣಿಸಿದ್ದ ಸಸ್ಯವನ್ನು ಗುರುತಿಸಲಾಗದೆ ಇಡೀ ಸಂಜೀವಿನಿ ಪರ್ವತವನ್ನೇ ತನ್ನ ಭುಜದ ಮೇಲೆ ಹಿಮಾಲಯದಿಂದ ಲಂಕೆಗೆ ಹೊತ್ತು ತರುತ್ತಾನೆ. ಸಂಬಂಧಪಟ್ಟ ಸಸ್ಯವನ್ನು ಆ ಸಂಜೀವಿನಿ ಪರ್ವತದಿಂದ ಹುಡುಕಿ ಅದರಿಂದ ಲಕ್ಷ್ಮಣನಿಗೆ ಚಿಕಿತ್ಸೆನೀಡಿ ಲಕ್ಷ್ಮಣನನ್ನು ಉಳಿಸುತ್ತಾರೆ. ಇದು ತ್ರೇತಾಯುಗದ ಕಥೆ.

ಹಿರಿಯ ರಾಜಕಾರಣಿ, ಸೈದ್ಧಾಂತಿಕ ಹೋರಾಟಗಾರ ಮತ್ತು ಖ್ಯಾತ ವಿಚಾರ ವಾದಿಯಾಗಿದ್ದ ಜಯಪ್ರಕಾಶ್ ನಾರಾಯಣರವರಿಗೆ ಡಯಾಲಿಸಿಸ್‌ನಂತಹ ಬೈಪಾಸ್ ಶಸ್ತ್ರಚಿಕಿತ್ಸೆಗಾಗಿ ಕ್ಯಾಲಿಫೋರ್ನಿಯದಿಂದ ಒಂದು ವೈದ್ಯ ತಂಡ ಬಾಂಬೆಯ ಜಸ್‌ಲೋಕ್ ಆಸ್ಪತ್ರೆಗೆ ವಿಶೇಷ ವಿಮಾನದಲ್ಲಿ ಬಂದು ಶಸ್ತ್ರಚಿಕಿತ್ಸೆ ಮಾಡಿಹೋದ ಘಟನೆ ೧೯೭೦ರ ದಶಕದಲ್ಲಿ ಜರುಗಿದ್ದು.

ತಮಿಳು ಚಲನಚಿತ್ರದ ಅತ್ಯಂತ ಜನಪ್ರಿಯ ನಟ ಹಾಗೂ ತದನಂತರದಲ್ಲಿ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಎಂ. ಜಿ. ರಾಮಚಂದ್ರನ್ (ಎಂ. ಜಿ. ಆರ್) ರವರಿಗೆ ತುರ್ತು ಶಸ್ತ್ರಚಿಕಿತ್ಸೆಯೊಂದನ್ನು ಮಾಡಲು ಅಮೆರಿಕಾದ ನ್ಯೂಯಾರ್ಕ್‌ನಿಂದ ನೇರವಾಗಿ ಮಣಿಪಾಲ್ ಆಸ್ಪತ್ರೆಗೆ ವಿಶೇಷ ಹೆಲಿಕಾಪ್ಟರ್‌ನಲ್ಲಿ ಕರ್ನಾಟಕ ಸಂಜಾತ (ಈಗ ಅಮೆರಿಕ ವಾಸಿ) ಸರ್ವಶ್ರೇಷ್ಠ ಶಸ್ತ್ರಚಿಕಿತ್ಸಾ ವೈದ್ಯರಾದ ಡಾ। ಟಿ. ಕೆ. ಶ್ರೀಪಾದರಾವ್ ಬಂದು ಚಿಕಿತ್ಸೆ ನೀಡಿ ಹೋದದ್ದು ೧೯೮೦ ರ ದಶಕದ ಘಟನೆ.

ಇವೆಲ್ಲವೂ ಇಪ್ಪತ್ತನೆಯ ಶತಮಾನಕ್ಕೆ ಸಂಬಂಧಪಟ್ಟ ವೈದ್ಯಕೀಯ ತಂತ್ರಜ್ಞಾನವಾದರೆ, ೨೧ನೇ ಶತಮಾನಕ್ಕೆ ದಾಪುಗಾಲು ಹಾಕುತ್ತಿರುವ ನಮಗೆ ಹಿಂದಿನಂತೆ ವೈದ್ಯ ತಜ್ಞರನ್ನು ದೂರದಿಂದ ಕರೆಸುವ, ಪ್ರಯಾಣದ ಸಮಯ, ಆಯಾಸ, ತುರ್ತುಪರಿಸ್ಥಿತಿಯ ಒತ್ತಡ ಇವನ್ನೆಲ್ಲಾ ತಡೆಯುವ ಆಧುನಿಕ ವೈದ್ಯಕೀಯ ತಂತ್ರಜ್ಞಾನ, ಕಂಪ್ಯೂಟರ್ ಹಾಗೂ ರೋಬೋಟ್ ಯುಗದಲ್ಲಿ ಸಾಧ್ಯ.

ಕುಳಿತಲ್ಲಿಂದಲೇ ದೂರದ ರೋಗಿಯೊಬ್ಬನ ಶಸ್ತ್ರಚಿಕಿತ್ಸೆ ಮಾಡುವ ಪರಿಣತಿಯನ್ನು ಇಂದಿನ ವೈದ್ಯವಿಜ್ಞಾನಿಗಳು ಕಂಡುಕೊಂಡಿದ್ದಾರೆ.

ಕ್ಯಾಲಿಫೋರ್ನಿಯಾದಲ್ಲಿ ಕುಳಿತು ಲಂಡನ್ ಆಸ್ಪತ್ರೆಯೊಂದರಲ್ಲಿ ಮಲಗಿರುವ ರೋಗಿಗೆ ರೋಬೊಟ್(ಯಂತ್ರ ಮಾನವ) ಗಳನ್ನು ಬಳಸಿ ಈಗಾಗಲೇ ತೊಡೆ, ಮೆಗುಳು ಮತ್ತು ಕಣ್ಣಿನ ಶಸ್ತ್ರ ಚಿಕಿತ್ಸೆಗಳನ್ನು ಪ್ರಾಯೋಗಿಕವಾಗಿ ಜರುಗಿಸಿ ವೈದ್ಯ ತಜ್ಞರು ಯಶಸ್ವಿಯಾಗಿದ್ದಾರೆ. ಈ ಪ್ರಯೋಗದಲ್ಲಿ ಮೂರು ಆಯಾಮ (೩) ಗಳ ಕಂಪ್ಯೂಟರ್ ಮಾಡೆಲ್ಸ್, ಯೋಜನೆ ಸಿದ್ಧಪಡಿಸುವ ಸಾಫ್ಟವೇರ್ ಮತ್ತು ಇಡೀ ಶಸ್ತ್ರಚಿಕಿತ್ಸೆಯ ಪ್ರಕ್ರಿಯೆಯನ್ನು ಸಮನ್ವಯಗೊಳಿಸುವ ಮಾಪಕ ಯಂತ್ರವೊಂದನ್ನು ಬಳಸಲಾಗುವುದು. ಈ ಯಂತ್ರ ಭೌತಿಕ ಮಾಡೆಲ್‌ನ್ನು ಕಂಪ್ಯೂಟರ್ ಮಾಡೆಲ್‌ಗೆ ಪರಿವರ್ತಿಸುವುದು. ವಿಶೇಷ ದರ್ಶಕಗಳಿಂದ ಕೂಡಿದ ಕ್ಯಾಮರಾಗಳನ್ನು ದೇಹದ ಮೂಳೆಗಳಿಗೆ, ಶಸ್ತ್ರಚಿಕಿತ್ಸೆ ಮಾಡುವ ಸಾಧನಗಳಿಗೆ ಮತ್ತು ಇತರೆ ಸಲಕರಣೆಗಳಿಗೆ ಜೋಡಿಸುತ್ತಾರೆ. ಅತ್ಯಂತ ನಿಖರತೆ ಮತ್ತು ಅಗತ್ಯ ದಿಕ್ಕುಗಳಿಗೆ ತಿರುಗುವ ಸೌಲಭ್ಯವಿರುವ ಈ ಕ್ಯಾಮೆರಾಗಳಿಗೆ ವಿಶೇಷ ಬೆಳಕನ್ನು ಹೊಮ್ಮಿಸುವ ಡಯೋಡ್‌ಗಳನ್ನು ಅಳವಡಿಸಿರುತ್ತಾರೆ. ಈ ದೂರ-ಶಸ್ತ್ರ ಚಿಕಿತ್ಸೆ(Tele-Surgery)ಯು ಶಸ್ತ್ರಕ್ರಿಯಾಪೂರ್ವ, ಶಸ್ತ್ರಕ್ರಿಯಾವಧಿ ಮತ್ತು ಶಸ್ತ್ರಕ್ರಿಯೋತ್ತರ ಕಂಪ್ಯೂಟರ್ ಪ್ಲಾನಿಂಗ್ ಮೇಲೆ ಸಾಗುತ್ತದೆ.

ರೋಗಿಯ ದೇಹದ ತೆರೆದ ಆವಯವಗಳನ್ನು ದೂರದಲ್ಲಿ ಕುಳಿತೇ ಕಂಪ್ಯೂಟರ್ ಮೂಲಕ ನೋಡುತ್ತಾ ಆ ಕಡೆಗಿರುವ ರೋಬೋಟ್‌ಗೆ ಕಾರ್ಯಪ್ರವೃತ್ತವಾಗುವ ಆಜ್ಞೆ ಸಂಜ್ಞೆಗಳನ್ನು ತಜ್ಞವೈದ್ಯ ನೀಡುತ್ತಿರುತ್ತಾನೆ. ಆಪರೇಷನ್ ಕೊಠಡಿಯಲ್ಲಿ ಅರವಳಿಕೆಗೆ ಒಳಪಟ್ಟ ರೋಗಿ ಮತ್ತು ರೋಬೋಟ್‌ಗಳಷ್ಟೇ ಇರುತ್ತಾರೆ. ಎಲ್ಲಾ ಅಗತ್ಯ ಉಪಕರಣಗಳೂ ಆ ಕೊಠಡಿಯಲ್ಲಿ ರೋಬೋಟ್‌ನ ಕೈ ಅಳತೆಯಲ್ಲಿ ಸಿಗುವಂತೆ ಮತ್ತು ಅವುಗಳನ್ನು ಸುಲಭವಾಗಿ ಬಳಸುವಂತಹ ವಿಶೇಷ ವ್ಯವಸ್ಥೆಯಿರುತ್ತದೆ.

ಬ್ರಿಸ್ಟಲ್ ವಿಶ್ವವಿದ್ಯಾಲಯದಲ್ಲಿ ಜರುಗಿಸಿದ ಇಂತಹ ಯಶಸ್ವಿ ಪ್ರಯೋಗದಲ್ಲಿ ಮಾನವನ ಮೆದುಳಿನಲ್ಲಿದ್ದ ಗಂತಿ (Tumour) ಯನ್ನು ತೆಗೆದುಹಾಕುವ ಶಸ್ತ್ರಕ್ರಿಯೆಯನ್ನು ರೋಬೋಟ್‌ಗಳು ಟೊಮೊಗ್ರಾಫಿಕ್ ಸ್ಕ್ಯಾನರ್ಸ್‌ಗಳ ನಿಯಂತ್ರಣದಲ್ಲಿ ಶಸ್ತ್ರ ವೈದ್ಯನಿಗಿಂತಲೂ ಅತ್ಯಂತ ದಕ್ಷತೆ ಮತ್ತು ಹೆಚ್ಚಿನ ನಿಖರತೆಯೊಂದಿಗೆ ಮಾಡಿವೆ.

ಬ್ರಿಟಿಷ್ ಪ್ರಯೋಗಾಲಯಗಳ ಮುಖ್ಯಸ್ಥ ಪ್ರೊ. ಪೀಟರ್ ಕೊಕ್ರೇನ್‌ರವರ ಪ್ರಕಾರ ಈ ರೀತಿಯ ದೂರ ಶಸ್ತ್ರಕ್ರಿಯೆಗಳಿಗೆ ಮೊದಲು ದೂರ-ರೋಗ ಪರೀಕ್ಷೆ (Remote Diagnosis) ತಪಾಸಣೆ (Inspection) ಗಳನ್ನು ಸಹ ಕಂಪ್ಯೂಟರ್ ಮೂಲಕ ರೋಬೋಟ್‌ಗಳಿಂದ ಮಾಡಿಸಬಹುದು. ಶಸ್ತ್ರ ಚಿಕಿತ್ಸೆಯ ನಂತರವೂ ರೋಗಿಯ ದೇಹದಲ್ಲಿ ಕಟ್ಟಿರುವ ಎಲೆಕ್ಟ್ರಾನಿಕ್ ಉಪಕರಣಗಳ ಮೂಲಕ ದೂರ ನಿಗಾವಣೆ (Remote-Monitoring) ಮಾಡಬಹುದು.

ಸಕ್ಕರೆ ಖಾಯಿಲೆ ಮತ್ತು ಸದಾ ಔಷಧ ಸೇವಿಸುವ ಇತರೆ ಖಾಯಿಲೆಗಳ ವ್ಯಕ್ತಿಗಳಿಗೆ ದೂರದಿಂದಲೇ ಔಷಧಿ ನಿಷ್ಕರ್ಷಿಸುವ ಮತ್ತು ನಿಯಂತ್ರಿಸುವ ಕೆಲಸವನ್ನು ಕಂಪ್ಯೂಟರ್‌ಗಳ ಮೂಲಕ ನಿಭಾಯಿಸಬಹುದು. ಆದರೂ ಸದ್ಯಕ್ಕೆ ಈ ದೂರ-ಶಸ್ತ್ರಕ್ರಿಯೆಯ ತಂತ್ರಜ್ಞಾನ ಆಸ್ಪತ್ರೆಗಳ ಆವರಣಕ್ಕಷ್ಟೆ ಸೀಮಿತವಾಗಿದೆ. ಜೊತೆಗೆ ಶಸ್ತ್ರಕ್ರಿಯೆಯ ನೈಪುಣ್ಯತೆ(Dexterity) ಹಾಗೂ ಪರಸ್ಪರ್ಶ ಭಾವನೆ (ಬೇರೊಬ್ಬರು ಸ್ಪರ್ಶಿಸಿದ್ದನ್ನು ಇನ್ನೊಬ್ಬರು ಗ್ರಹಿಸುವುದು) ಯ (Taetile Quality) ಕೊರತೆಗಳು ಈ ತಂತ್ರಜ್ಞಾನದಲ್ಲಿ ಕಂಡು ಬರುವ ನ್ಯೂನತೆಗಳು. ಈ ನ್ಯೂನತೆಗಳು ಪ್ರೊ. ಕೊಕ್ರೇನ್ ಪ್ರಕಾರ ೨೦೧೫ರ ಇಸವಿಯೊಳಗಡೆ ಪರಿಹಾರ ಗೊಳ್ಳುವದರಲ್ಲಿ ಸಂದೇಹವಿಲ್ಲ.

ಭಾರತದಲ್ಲಿ ಈ ರೀತಿಯ ದೂರ-ಶಸ್ತ್ರಕ್ರಿಯೆಯು ಇನ್ನೂ ಶೈಶವಾವಸ್ಥೆಯಲ್ಲಿದೆ. ಆದರೂ ಡಾ। ಐಸಾಕ್ ನ್ಯೂಟನ್ ರಾಜ್‌ಕುಮಾರ್ ಎಂಬ ಖ್ಯಾತ ಕೀಲು, ಮೂಳೆ ಜೋಡಣಾ ತಜ್ಞ, ಚೆನ್ನೈನ ವಿಲ್ಲಿಂಗ್ಟನ್ ಆಸ್ಪತ್ರೆಯಲ್ಲಿ ಕೀಲು ಜೋಡಣೆಯಲ್ಲಿ ಅಳವಡಿಸಿದ್ದಾರೆ. ಅಂದರೆ ಇನ್ನು ಮೇಲೆ ಲಂಡನ್‌ನಲ್ಲಿ ಕುಳಿತು ಲಕ್ನೋದಲ್ಲಿ ಚಿಕಿತ್ಸೆ ಮಾಡಬಹುದು. ಇದರಿಂದ ಪ್ರವಾಸದ ತಾಪತ್ರಯವಿಲ್ಲದೆ ಆಸ್ಪತ್ರೆಗಳು ಹೊರ ರೋಗಿಗಳ ಒತ್ತಡದಿಂದ ಮುಕ್ತಗೊಳ್ಳುತ್ತದೆ.

ಪ್ರೊ. ಕೊಕ್ರೇನ್‌ರವರು ಕೊನೆಯಲ್ಲಿ ಸಮಕಾಲೀನ ಮಾನವ ಜನಾಂಗಕ್ಕ ಒಂದು ಎಚ್ಚರಿಕೆಯನ್ನು ನೀಡಿದ್ದಾರೆ.

''ಇಂದಿನ ಮಾನವನ ಮಿದುಳನ್ನು ಕಂಪ್ಯೂಟರ್ ವೇಗಕ್ಕೆ ಸರಿಗಟ್ಟಿಸದಿದ್ದರೆ, ಇನ್ನು ಕೆಲವೇ ವರ್ಷಗಳಲ್ಲಿ ಕಂಪ್ಯೂಟರ್ ಮಾನವನ ಮಿದುಳನ್ನು ಅತ್ಯಂತ ನಿಷ್ಪ್ರಯೋಜಕ ಅಂಗವನ್ನಾಗಿ ಮಾರ್ಪಡಿಸುವುದರಲ್ಲಿ ಸಂದೇಹವಿಲ್ಲ. ಕಾರಣ, ಕಂಪ್ಯೂಟರ್ ಸಾಮರ್ಥ್ಯ ವರ್ಷದಿಂದ ವರ್ಷಕ್ಕೆ ದ್ವಿಗುಣದ ದರದಲ್ಲಿ ಧಾವಿಸುತ್ತಿದೆ!!''

★

'ಇಗ್ಲೀಸ್' ಎಂಬ ವಿಲಕ್ಷಣ ಸನ್ನಿ ~~~~~~~~~~~~~~~~~~

ಅತ್ತ ಆಂಗ್ಲ ಭಾಷೆಯಲ್ಲೂ ಕಾಣದ, ಇತ್ತ ಕನ್ನಡದ ನಿಘಂಟುವಿನ ಕೋಶದಲ್ಲೂ ಸಿಗದ ಅತಂತ್ರ ಸ್ಥಿತಿಯ 'ಇಗ್ಲೀಸ್' ಎಂಬ ಪದ ಇತ್ತೀಚೆಗೆ ವೈದ್ಯಕೀಯ ಶಾಸ್ತ್ರಕ್ಕೆ ಸವಾಲಾಗಿ ನಿಂತಿದೆ. ಕೇವಲ ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಪ್ರದೇಶದ ಗ್ರಾಮೀಣ ಜನತೆಗಷ್ಟೇ ಪರಿಚಯವಾಗಿರುವ ಈ ಪದ ವೈದ್ಯ ಇಲಾಖೆಯ ಬಾಗಿಲನ್ನು ಇನ್ನೂ ತಟ್ಟಿಲ್ಲವೆನ್ನಬೇಕು. ಬೆರಳೆಣಿಕೆಯ ಮಂದಿ ಮಾತ್ರ ಈ ರೋಗ ಭ್ರಾಂತಿಗೆ ಬಲಿಯಾಗಿದ್ದು ಮನಶಾಸ್ತ್ರಜ್ಞರಿಗೆ, ನರತಜ್ಞರಿಗೆ ಬಿಡಿಸಲಾಗದ ಕಗ್ಗಂಟ್ಟಾಗಿದೆ. ದರ್ಶನ ಭ್ರಾಂತಿ, ಶ್ರವಣ ಭ್ರಾಂತಿ, ಇಚ್ಛಿತ ವಿಕಲ್ಪ ಮುಂತಾದ ಮಾನಸಿಕ ಬೇನೆಗಳನ್ನು ಗುರುತಿಸಿ ಚಿಕಿತ್ಸೆ ಪಡೆಯುತ್ತಿರುವ ಜನತೆಗೆ ಹೊಸದೊಂದು ಕಾಯಿಲೆಯ ಪರಿಚಯವಾಗುತ್ತಿದೆ ಎನ್ನಬೇಕು. ಏಕೆಂದರೆ ಇಗ್ಲೀಸ್ ಪದವೇ ಪ್ರಶ್ನಾರ್ಥಕವಾಗಿದೆ. ರೋಗದ ಬಾಧೆಗೂ ಈ ಹೆಸರಿಗೂ ಯಾವ ರೀತಿಯ ಸಂಬಂಧ ಕಲ್ಪಿಸಿದ್ದಾರೆ ಎಂಬುದನ್ನು ಭಾಷಾ ವಿಜ್ಞಾನಿಗಳೇ ಪರಿಹರಿಸಬೇಕಾಗಿದೆ. ಸ್ಥಳೀಯವಾಗಿ ನೀಡುತ್ತಿರುವ ಕಾರಣ ಮಾತ್ರ ವ್ಯಕ್ತಿಯ ಎರಡು ಕಾಲುಗಳನ್ನು ಇಗ್ಗಲಿಸಿ (ಅಗಲಿಸಿ) ಚಿಕಿತ್ಸೆ ನೀಡುತ್ತಿರುವುದರಿಂದ ಈ ರೋಗಕ್ಕೆ 'ಇಗ್ಲೀಸ್' ಎಂದು ಕರೆಯುತ್ತಿದ್ದೇವೆ ಎನ್ನುತ್ತಾರೆ. ಅಲ್ಲದೆ, ಈ ಕಾಯಿಲೆ ಕಳೆದ ಎರಡು ದಶಕಗಳಿಂದ ಈ ಪ್ರದೇಶದಲ್ಲಿ ಮರುಕಳಿಸುತ್ತಾ, ವ್ಯಕ್ತಿಯೊಬ್ಬನಿಗೆ ವರ್ಷಕ್ಕೋ ಇಲ್ಲವೆ ಎರಡು ವರ್ಷಕ್ಕೊಮ್ಮೆ ಈ ಬೇನೆಯಿಂದ ತೀವ್ರವಾಗಿ ಬಳಲುತ್ತಿದ್ದಾರೆಂಬ ವಿಚಾರವನ್ನು ವಿವರಿಸುತ್ತಾರೆ. ಈವರೆಗೆ ಸುಮಾರು ಐದು ಜನರ ಸಾವು ಇದರಿಂದ ಸಂಭವಿಸಿದೆಯೆನ್ನಲಾಗಿದೆ.

ಇಗ್ಲೀಸ್ ಪದ ವಿಚಿತ್ರವಾಗಿರುವಂತೆ ಕಾಯಿಲೆಯ ಲಕ್ಷಣವು ಅಷ್ಟೇ ವಿಚಿತ್ರವೆನ್ನಬೇಕು. ಏಕೆಂದರೆ ಈ ರೋಗ ಲಕ್ಷಣವು ವ್ಯಕ್ತಿಯೊಬ್ಬ ತನ್ನ ಜನನಾಂಗವನ್ನು ಗಟ್ಟಿಯಾಗಿ ಹಿಡಿದುಕೊಂಡು ಹೊರಕ್ಕೆ ಎಳೆಯುವಂತೆ ವರ್ತಿಸುತ್ತಾನೆ. ಇದರ ತೀವ್ರತೆ ಎಷ್ಟಿದೆಯೆಂದರೆ, ತನ್ನ ಸ್ನಾಯುಬಲ ಸಾಲದೆ ಇತರರಿಗೆ ಅದನ್ನು ಹಿಡಿದು ಎಳೆಯುವಂತೆ ಮಮ್ಮಲ ಮರುಗುತ್ತಾನೆ. ನರಳಾಟವನ್ನು ನೋಡಲಾಗದ ಜನ ರೋಗಿಯು ಆದೇಶವನ್ನು ಪಾಲಿಸುವ ಪರಿಗೆ ಸಮ್ಮತಿ ಸೂಚಿಸುತ್ತಾರೆ. ಆಗ ರೋಗಿಯ ಎರಡು ಕಾಲುಗಳನ್ನು ಅಗಲಮಾಡಿ ಮೇಲ್ತೊಡೆಗಳಿಗೆ ಒತ್ತುಕೊಟ್ಟು ಬಲವಾಗಿ ಹಿಡಿದು ಹೊರಗೆ ಎಳೆಯುವಂತೆ ಮಾಡುತ್ತಾರೆ. ಕೆಲ ನಿಮಿಷದ ನಂತರ ರೋಗ ಬಾಧೆಗೆ ತುತ್ತಾದವ ತನ್ನ ಸಹಜ ಸ್ಥಿತಿಗೆ ಮರಳುತ್ತಾನೆ. ನಂತರ ತನ್ನ ಪಾಲಿಗೆ ಜೀವ ಉಳಿಸಿದ ವ್ಯಕ್ತಿಗೆ ಕೃತಜ್ಞತಾಭಾವವನ್ನು ವ್ಯಕ್ತಪಡಿಸುತ್ತಾನೆ. ಕಾರಣ ಕೇಳಿದಾಗ, ಆರಂಭದಲ್ಲಿ ಕಿಬ್ಬೊಟ್ಟೆಯ ನೋವು ಶುರುವಾಗುತ್ತದೆ, ನಂತರ ನೋವು

ತೀವ್ರಗೊಳ್ಳುತ್ತಾ ಹೋದಂತೆ ಶಿಶ್ನವು ದೇಹದ ಒಳಕ್ಕೆ ಹೋಗಲೆತ್ನಿಸುತ್ತದೆ! ಆಗ ಗಟ್ಟಿಯಾಗಿ ಹಿಡಿದು ಎಳೆಯದಿದ್ದರೆ , ಒಳಹೊಕ್ಕು ಕೂಡಲೇ ಸಾವನ್ನಪ್ಪಬೇಕಾಗುತ್ತದೆ ! ಎಂದು ವಿವರಿಸುತ್ತಾನೆ, ಈ ಸಂದರ್ಭದಲ್ಲಿ ಅಪಸ್ಮಾರ (ಫಿಟ್ಸ್) ಕ್ಕೆ ಬಲಿಯಾಗುವ ಸಾಧ್ಯತೆಗಳಿವೆ. . ಸ್ಥಳೀಯವಾಗಿ ಕೆಲವೈದ್ಯರು ತೀವ್ರತರವಾಗಿ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ರೋಗಕ್ಕೆ ಬಲಿಯಾದವರು ವೈದ್ಯರೊಂದಿಗೆ ಸಮಾಲೋಚಿಸಿದಾಗ ಅವರು ಲಕ್ಷ್ಯ ಕೊಟ್ಟು ಕೇಳದೆ ಲಘುವಾಗಿ ಪರಿಗಣಿಸಿದರೆಂಬ ಹತಾಶೆಯನ್ನು ವ್ಯಕ್ತಪಡಿಸುತ್ತಾರೆ. ಮೇಲ್ನೋಟಕ್ಕೆ ಈ ಬಾಧೆ ವ್ಯಕ್ತಿಯ ಅಜಾಗರೂಕತೆ, ಅಪ್ರಬುದ್ಧತೆಯೆನಿಸಿದರೂ, ಮಾನಸಿಕ ಭ್ರಾಂತಿಗೆ ಒಳಗಾದಂತಿದೆ. ಜೊತೆಗೆ ಜನರಿಗೆ ಸೂಕ್ತ ಮಾರ್ಗದರ್ಶನದ ಕೊರತೆ ಎದ್ದು ಕಾಣುತ್ತಿದೆ. ಇಲ್ಲಿ ಮೊದಲು ಆಗಬೇಕಾಗಿರುವ ಕಾರ್ಯವೆಂದರೆ, ಯಾವುದೇ ಕಾರಣಕ್ಕೂ ಜನನೇಂದ್ರಿಯ ಶರೀರದ ಒಳಭಾಗದಲ್ಲಿ ಹೋಗಲು ಸಾಧ್ಯವಿಲ್ಲವೆಂದು ಮನವರಿಕೆ ಮಾಡಿಕೊಡಬೇಕು. ಪ್ಯೂಬಿಕ್ ಮೂಳೆಯ ರಕ್ಷಣಾ ಕಾವಲು ಇಡೀ ಶಿಶ್ನ ವ್ಯವಸ್ಥೆಯನ್ನು ಕಾಪಾಡುತ್ತಿರುವುದರ ಸತ್ಯವನ್ನು ಪ್ರಯೋಗಶೀಲವಾದ ತಿಳುವಳಿಕೆಯಿಂದ ತಿಳಿಸಬೇಕು. ಕಿಬ್ಬೊಟ್ಟೆ ನೋವಿಗೂ ಇದಕ್ಕೂ ಸಂಬಂಧವಿಲ್ಲವೆಂಬ ಅರಿವು ಮೂಡಿಸಬೇಕು. ಹೆಚ್ಚಾಗಿ ಮಾನಸಿಕ ಸ್ಥೈರ್ಯವನ್ನು ತುಂಬುವ ಅಗತ್ಯವಿಲ್ಲಿದೆ. ಜೊತೆಗೆ ಆಸಕ್ತ ವೈದ್ಯಕೀಯ ತಂಡ, ಮನಶಾಸ್ತ್ರಜ್ಞರು ಈ ಪ್ರದೇಶಗಳಿಗೆ ಭೇಟಿ ನೀಡಿ, ಸ್ಥಳೀಯ ಕಾರಣಗಳೇನಾದರೂ ಇವೆಯೇ ಎಂಬುದನ್ನು ಪತ್ತೆ ಹಚ್ಚಬೇಕಾಗಿದೆ. ಅಲ್ಲದೆ ಭೌಗೋಳಿಕವಾದ ಪರಿಸರದ ಪ್ರಭಾವಕ್ಕೂ ಈ ಸನ್ನಿಗೂ ಸಂಬಂಧಗಳೇನಾದರೂ ಇವೆಯೇ ಎಂಬುದರ ಸರ್ವೇಕ್ಷಣೆ ನಡೆಯಬೇಕಾಗಿದೆ. ಆಗ ಮಾತ್ರ ಈ ವಿಲಕ್ಷಣ ಸನ್ನಿಗೆ ಸ್ಪಷ್ಟೀಕರಣ ನೀಡಲು ಸಾಧ್ಯ.

★

(ಇದು ಸಂಪಾದಕೀಯ ಲೇಖನ. ವಿಜ್ಞಾನ ಸಂಗಾತಿ- ಮಾಸಿಕ ಪತ್ರಿಕೆ)

'ಇಗ್ಲೀಸ್' ಎಂಬ ವಿಲಕ್ಷಣ ಸನ್ನಿ ~~~~~~~~~~~~~~~~

ಚಂದ್ರಪ್ಪ ನೋಡಲು ಎತ್ತರ ಕಾಯದ ಸ್ಫುರದ್ರೂಪಿ ಯುವಕ. ಶಾಂತ ಸ್ವಭಾವದ ಸೌಜನ್ಯ ವ್ಯಕ್ತಿ. ಮದುವೆಯಾಗಿ ನಾಲ್ಕು ವರ್ಷಗಳಾಗಿವೆ. ಮೂರು ವರ್ಷದ ಮಗನಿದ್ದಾನೆ. ಸರಳ ಸುಂದರ ಸಂಸಾರ ಅವರದು.

ಗ್ರಾಮ ಪಂಚಾಯಿತಿಯಲ್ಲಿ ನೌಕರಿ ಹೊಂದಿರುವ ಚಂದ್ರಪ್ಪನಿಗೆ ಗ್ರಾಮೀಣ ಬದುಕು, ಗ್ರಾಮೀಣ ಜನತೆಯೊಂದಿಗೆ ವ್ಯವಹಾರ ಬಿಟ್ಟರೆ ಪೇಟೆ ಪ್ರಪಂಚ ಅರಿಯದ ಮುಗ್ಧ. ಹಿರಿಯ ಅಧಿಕಾರಿಗಳಿಗೆ ಚಂದ್ರಪ್ಪನೆಂದರೆ ಅಚ್ಚುಮೆಚ್ಚು. ಯಾರಿಗೂ ಎದುರು ನುಡಿಯದೆ ಎಷ್ಟೇ ಕೆಲಸದ ಒತ್ತಡವಿದ್ದರೂ ಹೊತ್ತು ಮೀರಿ ಕೆಲಸ ಮಾಡುವ ನಿಷ್ಠಾವಂತ. ಬಾಕಿ ಬಿದ್ದ ಕೆಲಸವನ್ನು ರಜೆ ದಿನಗಳಲ್ಲೂ ಆಫೀಸಿಗೆ ಬಂದು ದುಡಿಯುವ ಶ್ರಮಜೀವಿ. ಸುಮಾರು ಐದು ಕಿ.ಮೀ. ದೂರವಿರುವ ತನ್ನೂರಿಂದ ಈ ಗ್ರಾಮಕ್ಕೆ ದಿನವೂ ಸೈಕಲ್ ಮೇಲೆ ಬಂದು ಹೋಗುತ್ತಾನೆ. ಪ್ರತಿದಿನ ಬುತ್ತಿ ಕಟ್ಟಿಕೊಂಡು ಬಂದು ಮಧ್ಯಾಹ್ನದ ಊಟ ಮಾಡಿಕೊಳ್ಳುತ್ತಾನೆ. ಕಾಫಿ-ಟೀ ಕುಡಿಯುವುದಿಲ್ಲ. ಮದ್ಯ-ಧೂಮಪಾನಗಳ ಚಟವಿಲ್ಲ. ಪಂಚಾಯ್ತಿ ವ್ಯಾಪ್ತಿಗೆ ಬರುವ ಗ್ರಾಮೀಣ ಜನರಿಗೆ ಚಂದ್ರಪ್ಪನೆಂದರೆ ಪಂಚಾಯಿತಿ, ಪಂಚಾಯಿತಿ ಎಂದರೆ ಚಂದ್ರಪ್ಪ ಎಂಬಷ್ಟು ಮಿಳಿತ.

ಹೀಗಿರುವಲ್ಲಿ ಒಂದು ದಿನ ಮೂರು ಗಂಟೆಯ ಮಧ್ಯಾಹ್ನದ ಸಮಯ. ಬೆಳಗಿನ ಸಮಯದಲ್ಲೇ ಕೆಲಸ ಮಾಡಿಸಿಕೊಂಡು ಹೋದ ಗ್ರಾಹಕರ್‍ಯಾರು ಇರಲಿಲ್ಲ. ಇದ್ದೊಬ್ಬ ಪೀವನ್ ಊಟ ಮಾಡಿಬರಲು ಮನೆಗೆ ಹೋಗಿದ್ದ. ಊರಿನಿಂದ ತುಸು ಹೊರಗಿದ್ದ ಕಚೇರಿ ಕಟ್ಟಡದಲ್ಲಿ ಚಂದ್ರಪ್ಪನೊಬ್ಬನೆ ಆ ಸಮಯದಲ್ಲಿ ಉಳಿದಿದ್ದ. ಊಟ ಮುಗಿಸಿ ಬಂದ ಪೀವನ್‌ಗೆ ದಿಗ್ಭ್ರಮೆಯೊಂದು ಕಾದಿತ್ತು.

ಚಂದ್ರಪ್ಪ ನೆಲದ ಮೇಲೆ ಅಂಗಾತ ಬಿದ್ದಿದ್ದಾನೆ. ತನ್ನ ಪ್ಯಾಂಟಿನ ಗುಂಡಿಬಿಚ್ಚಿ, ಜನನೇಂದ್ರಿಯವನ್ನು ತಾನೇ ಹಿಡಿದುಕೊಂಡು ನೋವಿನಿಂದ ನರಳುತ್ತಿದ್ದಾನೆ. ಪೀವನ್ ಕಂಡಾಕ್ಷಣ ಅದನ್ನು ಬಲವಾಗಿ ಹಿಡಿದು ಎಳೆಯಲು ಬೊಬ್ಬೆ ಹಾಕಿದ. ಅನಿರೀಕ್ಷಿತ ಈ ಘಟನೆಯಿಂದ ಭಯಗ್ರಸ್ಥನಾದ ಪೀವನ್‌ಗೆ ತಡಮಾಡದೆ ಹೆದರದೆ ಜನನೇಂದ್ರಿಯವನ್ನು ಹೊರಗೆಳೆದು ಬಿಗಿಯಾಗಿ ಹಿಡಿದುಕೊಳ್ಳಲು ಆಗ್ರಹಿಸಿದ. ಇಲ್ಲದಿದ್ದರೆ ತಾನು ಸತ್ತೇ ಹೋಗುವೆನೆಂದು ಕೂಗಿಕೊಂಡ. ಪಕ್ಕದಲ್ಲಿ ಮತ್ಯಾರೂ ಇರದ ಪೀವನ್‌ಗೆ ನರಳುತ್ತಿದ್ದ ಚಂದ್ರಪ್ಪನ ಬಳಿ ವಿಧಿಯಿಲ್ಲದೆ ಹೋಗಿ ಅಜ್ಞಾಪಿಸಿದಂತೆ ಮಾಡಿದ. ಚಂದ್ರಪ್ಪ ತನ್ನ ಕೈಗಳನ್ನು ಹಿಂದಕ್ಕೆ ತೆಗೆದು ಪೀವನ್ ಕೈಯಲ್ಲಿ ತನ್ನ ತನ್ನ ಜನನೇಂದ್ರಿಯವನ್ನು ಹಿಡಿಸಿ ಬಲಬಿಟ್ಟು


ಎಳೆಯಲು ಆಗ್ರಹಿಸಿದ. ತನ್ನ ಕೈಗಳನ್ನು ನೆಲಕ್ಕೆ ಊರುಗೋಲು ಹಾಕಿಕೊಂಡು ಕತ್ತನ್ನು ಮೇಲಕ್ಕೆ ಎತ್ತಿ ಪೀವನ್‌ಗೆ ನಿರ್ದೇಶನ ನೀಡುತ್ತಾ ಹೋದ. ಯಾವುದೇ ಕಾರಣದಿಂದ ತಾನು ಹೇಳುವವರೆಗೆ ಕೈ ಸಡಿಲ ಮಾಡದೆ ಬಲವಾಗಿ ಹಿಡಿದೆಳೆದುಕೊಂಡಿರಲು ಬೇಡಿಕೊಂಡ. ಅಗಲಿಸಿ ಉದ್ದಕ್ಕೆ ನೆಲದ ಮೇಲೆ ಕಾಲು ಚಾಚಿದ್ದ ಚಂದ್ರಪ್ಪನ ತೊಡೆಗಳಿಗೆ ಒತ್ತುಕೊಟ್ಟು ಪೀವನ್ ಬಲವಾಗಿ ಎಳೆದಂತೆ ಚಂದ್ರಪ್ಪ ತನ್ನ ನೋವು ಕಡಿಮೆಯಾಗುತ್ತಿದೆ, ಕೈಬಿಟ್ಟರೆ ತನ್ನ ಶಿಶ್ನ ಶರೀರದೊಳಗೋಗಿ ತಾನು ಖಂಡಿತ ಸತ್ತು ಹೋಗುತ್ತೇನೆಂದು ರೋದಿಸುತ್ತಿದ್ದ. ಹೀಗೆಯೇ ಕೆಲ ನಿಮಿಷ ಕಳೆದ ಮೇಲೆ ನೋವಿನಿಂದ ಮುಲುಗುತ್ತಿದ್ದ ಚಂದ್ರಪ್ಪ ತನ್ನ ನರಳಾಟ ಕಡಿಮೆ ಮಾಡಿ ಪೀವನ್‌ಗೆ ಜನನೇಂದ್ರಿಯವನ್ನು ಬಿಟ್ಟುಬಿಡಲು ಹೇಳಿದ. ಅದರಂತೆ ಪೀವನ್ ತನ್ನ ಹಿಡಿತವನ್ನು ಸಡಿಲಗೊಳಿಸಿ ಚಂದ್ರಪ್ಪನ ಜನನೇಂದ್ರಿಯವನ್ನು ಬಿಟ್ಟ. ಚಂದ್ರಪ್ಪ ನೋವಿನಿಂದ ಶಮನಗೊಂಡು ಮತ್ತೊಮ್ಮೆ ಕತ್ತೆತ್ತಿ ತನ್ನ ಜನನೇಂದ್ರಿಯ ಹೊರಗುಳಿದಿರುವುದನ್ನು ಖಾತ್ರಿ ಮಾಡಿಕೊಂಡು, ಪೀವನ್‌ಗೆ ಕೈಮುಗಿದು ನನ್ನನ್ನು ಉಳಿಸಿದೆ, ನನ್ನ ಭಾಗಕ್ಕೆ ಈ ದಿನ ನೀನೆ ದೇವರಾದೆ. ನಿನ್ನಿಂದ ನನ್ನ ಪ್ರಾಣ ಉಳಿಯಿತು. ಹೆಂಡತಿ ಮಕ್ಕಳು ಅನಾಥರಾಗುವುದು ತಪ್ಪಿತು, ಎಂದು ಪ್ಯಾಂಟಿನ ಗುಂಡಿ ಹಾಕಿಕೊಂಡು ಮೇಲೆದ್ದ. ಪೀವನ್‌ನನ್ನು ಮತ್ತೊಮ್ಮೆ ತಬ್ಬಿಕೊಂಡು ಧನ್ಯವಾದ ಅರ್ಪಿಸಿದ. ಒಂದು ಅಥವಾ ಎರಡು ವರ್ಷಕ್ಕೊಮ್ಮೆ ಈ ರೀತಿ ಕಾಣಿಸಿಕೊಳ್ಳುವ ರೋಗ ಮೂರ್ಛೆರೋಗ (ಅಪಸ್ಮಾರ) ದಂತೆ ಇದ್ದಕ್ಕಿದ್ದಂತೆ ಬಂದು ಭಾಧಿಸುತ್ತದೆ. ಆಗ ಕಿಬ್ಬೊಟ್ಟೆಯಲ್ಲಿ ವಿಪರೀತ ನೋವುಂಟಾಗಿ ತನ್ನ ಜನನೇಂದ್ರಿಯ ಒಳಹೋದಂತೆ ಆಗುತ್ತದೆ. ಆಗ ಬಿಗಿಯಾಗಿ ತಾನಾಗಲಿ ಮತ್ತು ಇತರರ ಸಹಾಯದಿಂದ ಬಿಗಿಯಾಗಿಡಿದು ಎಳೆಯದಿದ್ದರೆ ಅದು ಒಳಹೋಗಿ ಸಾವು ತಕ್ಷಣದಲ್ಲಿ ಸಂಭವಿಸುತ್ತದೆ. ಈ ರೋಗಕ್ಕೆ ಶರೀರ ಒಳ ಹೋಗುವುದು ಎನ್ನುತ್ತಾರೆ. ಅವರ ಹುಟ್ಟೂರಿನ ಸುತ್ತಮುತ್ತಲಿನಲ್ಲಿ ಅದು ' ಇಗ್ಲೀಸ್ ' ರೋಗವೆಂದು ಕರೆಯುತ್ತಾರೆ ಎಂದು ತಿಳಿಸಿದ. ಈ ಘಟನೆಯಿಂದ ದಿಗ್ಮೂಢನಾಗಿದ್ದ ಪೀವನ್ ನಿಟ್ಟುಸಿರು ಬಿಟ್ಟು ನಿರಾಳನಾದ.

ದರ್ಶನ ಭ್ರಾಂತಿ, ಶ್ರವಣ ಭ್ರಾಂತಿ (Halluesination) ಇಚ್ಛಿತ ವಿಕಲ್ಪ (Sehizophrenia) ಮುಂತಾದ ಮಾನಸಿಕ ವಿದ್ಯಮಾನಗಳನ್ನು ಕೇಳಿದ್ದೇವೆ. ಆದರೆ ಹೂವಿನ ಹಡಗಲಿ ತಾಲ್ಲೂಕಿನ ಹಿರೇಹಡಗಲಿ ಗ್ರಾಮದಲ್ಲಿ ವಿಚಿತ್ರ ರೋಗ ಭ್ರಾಂತಿಯೊಂದು ಜನರನ್ನು ಕಾಡುತ್ತಿದೆ.

ಹಿರೇಹಡಗಲಿ ಮತ್ತು ಸುತ್ತಮುತ್ತಲಿನ ಜನರಲ್ಲಿ ' ಇಗ್ಲೀಸ್ ' ಎಂಬ ಈ ಸ್ಥಳೀಯ ಹೆಸರಿನ ರೋಗ ಸುಮಾರು ಎರಡು ದಶಕಗಳಿಂದ ಇತ್ತೀಚೆಗೆ ಕೆಲವರಲ್ಲಿ ಕಾಣಿಸಿಕೊಳ್ಳುತ್ತಿದೆ. ಇದಕ್ಕೆ ' ಶರೀರ ಒಳ ಹೋಗುವುದು ' ಎಂತಲೂ ಕರೆಯುತ್ತಾರೆ. ಪ್ರದೇಶದಲ್ಲಿ ಮಾತ್ರ ಈ ರೋಗ ಲಕ್ಷಣಗಳು ಕಂಡು ಬಂದಿದ್ದು ಮತ್ತೆಲ್ಲೂ ವರದಿಯಾಗಿಲ್ಲ. ಆ ಸಮಯದಲ್ಲಿ ಕಾಲುಗಳನ್ನು ಇಗ್ಗಲಿಸುವುದರಿಂದ ಈ ' ಇಗ್ಲೀಸ್ ' ಎಂಬ ಪದ ಉತ್ಪತ್ತಿಯಾಗಿರಬೇಕು.

ಈ ರೋಗ ತಗುಲಿದ ಪುರುಷನ ಜನನೇಂದ್ರಿಯ ಒಳ ಹೋಗಿ ಸಾವು ಸಂಭವಿಸುತ್ತದೆ. ಎಂದು ಗಾಢವಾಗಿ ಈ ಪ್ರದೇಶದ ಜನ ನಂಬಿದ್ದಾರೆ. ಈಗಾಗಲೇ ೪-೫ ಜನರ ಸಾವು ಇದರಿಂದ ಸಂಭವಿಸಿದೆ ಎಂಬ ವಿವರ ಸಿಗುತ್ತದೆ. ಇತ್ತೀಚಿನ ದಿನಗಳಲ್ಲಿ ಅಸುನೀಗಿದ ಒಂದೆರಡು ಉದಾಹರಣಗಳಿವೆ. ಆ ರೋಗ ತಗುಲಿ ಇನ್ನೂ ಬದುಕಿರುವ ವ್ಯಕ್ತಿಗಳು ಸಿಗುತ್ತಾರೆ. ಅವರು ತಮ್ಮ ದಟ್ಟ ಅನುಭವವನ್ನು ಹಾಸುಹೊಕ್ಕಾಗಿ ವಿವರಿಸುತ್ತಾರೆ.

ಅಂತಹ ವ್ಯಕ್ತಿಯೊಬ್ಬನನ್ನು ಪ್ರತ್ಯೇಕವಾಗಿ ವಿಚಾರಿಸಲಾಯಿತು. ಆತ ಹೇಳುವಂತೆ ವರ್ಷದಲ್ಲಿ ಅಥವಾ ಎರಡು ವರ್ಷಕ್ಕೊಮ್ಮೆ ಈ ರೋಗಬಾಧೆ ಸದರಿ ವ್ಯಕ್ತಿಗಳಿಗೆ ಕಾಣಿಸಿಕೊಳ್ಳುತ್ತದೆ. ಆಗ ಇದ್ದಕ್ಕಿದ್ದಂತೆ ಕಿಬ್ಬೊಟ್ಟೆ (Lower Abdomen) ಯಲ್ಲಿ ವಿಪರೀತ ನೋವು ಉಂಟಾಗಿ ಜನನೇಂದ್ರಿಯ ಒಳಹೋಗುವಂತೆ ಭಾಸವಾಗುತ್ತದೆ. ಆಗ ಆತ ಕಷ್ಟಪಟ್ಟು ತನ್ನ ಜನನಾಂಗವನ್ನು ಒಳಹೋಗದಂತೆ ಬಿಗಿಹಿಡಿದು, ಪಕ್ಕದಲ್ಲಿದ್ದವರಿಗೆ ಹಿಡಿದು ಹೊರಜಗ್ಗಲು ಬೇಡಿಕೊಳ್ಳುತ್ತಾನೆ. ಸುಮಾರು ಐದು ನಿಮಿಷಗಳು ಯಾರಾದರೂ ಭದ್ರವಾಗಿ ಎಳೆದರೆ ರೋಗಿಗೆ ಬೇನೆ ಕಡಿಮೆಯಾಗಿ ಅಪಸ್ಮಾರದಿಂದ ಸ್ಮೃತಿ ತಪ್ಪಿ ನಂತರ ಎಚ್ಚರವಾಗಿ ಎದ್ದೇಳುವಂತೆ ಮೇಲಕೆದ್ದು, ಹಿಡಿದುಕೊಂಡವರಿಗೆ ತನ್ನ ಪ್ರಾಣ ಉಳಿಸಿದಕ್ಕೆ ಕೈಮುಗಿದು ಧನ್ಯವಾದ ಹೇಳುತ್ತಾನೆ. ಅಂಥಹ ರೋಗ ಬಾಧೆಗೆ ಒಳಗಾದವರು ಯಾವಾಗಲೂ ತಮ್ಮ ಜೇಬಿನಲ್ಲಿ ಒಂದು ದಾರ (Gunny thread)ವನ್ನು ಸದಾ ಇರಿಸಿಕೊಂಡಿರುತ್ತಾರೆ. ಬೇರೆಯವರು ಕೈಯಲ್ಲಿ ಹಿಡಿಯುವ ಬದಲು ದಾರಕಟ್ಟಿ ಜಗ್ಗಲು ಸುಲಭವಾಗಲೆಂದು.



ಆಫೀಸುಗಳಲ್ಲಿ ಕೆಲಸ ಮಾಡುವ ಸಂದರ್ಭದಲ್ಲೂ ಈ ರೀತಿಯಾಗಿರುವ ಪ್ರಸಂಗಗಳಿವೆ. ಅದನ್ನು ಹಿಡಿದು ಜಗ್ಗಿದ ವ್ಯಕ್ತಿಗಳನ್ನು ಸಂದರ್ಶಿಸಲಾಗಿ ತಮ್ಮ ಎರಡು ಕಾಲುಗಳನ್ನು ರೋಗಿಯ ಮೇಲ್ತೊಡೆಗಳಿಗೆ ಒತ್ತುಕೊಟ್ಟು ಬಲವಾಗಿ ಹಿಡಿದು ಹೊರಗೆ ಎಳೆದುಕೊಂಡು ನಿಂತ ಅವರ ಅನುಭವ ಕೇಳುಗರಿಗೆ ಮೈ ಜುಮ್ಮೆನಿಸುತ್ತದೆ. ಯಾವುದೇ ಸ್ಥಳವಿರಲಿ, ಯಾರೇ ಇರಲಿ (ಹೆಣ್ಣು ಮಕ್ಕಳಿದ್ದರೂ) ಆ ಬೇನೆ ಕಾಣಿಸಿಕೊಂಡಾಗ ತತ್‌ಕ್ಷಣದಲ್ಲಿ ರೋಗಿ ತನ್ನ ಕೆಳ ವಸ್ತ್ರಗಳ ಗುಂಡಿ ಬಿಚ್ಚಿ ಸಡಿಲಗೊಳಿಸಿಕೊಂಡು ತಾನೇ ಮೊದಲಿಗೆ ಹಿಡಿದುಕೊಂಡು ಬೇರೆಯವರ ನೆರವಿಗೆ ಬೊಬ್ಬೆ ಹಾಕುತ್ತಾನೆ. ನೋವು ಜಾಸ್ತಿಯಾದಂತೆ ತಾನೇ ಹೆಚ್ಚು ಹೊತ್ತು ಹಿಡಿಯಲಾಗುವುದಿಲ್ಲ. ಬೇರೆಯವರು ಹಿಡಿದಾಕ್ಷಣ ಆತ ಅಂಗಾತ ಮಲಗಿ ಬಿಡು ಎನ್ನುವವರೆಗೂ ಬಿಗಿಹಿಡಿದು ಜಗ್ಗುತ್ತಾ ಇರುವಂತೆ ಸೂಚನೆ ನೀಡಿ ನೋವಿನಿಂದ ಮುಲುಗುತ್ತಾ ಇರುತ್ತಾನೆ. ಬಲವಾಗಿ ಎಳೆದಂತೆಲ್ಲಾ ಆತನಿಗೆ ನೋವಿನ ಶಮನವಾಗುತ್ತಾ ಬರುತ್ತದೆಂದು ಹೇಳುತ್ತಾರೆ. ಈ ಪ್ರಕ್ರಿಯೆ ಮುಗಿದ ನಂತರ ತಕ್ಷಣ ನೋವು ಮಾಯವಾಗಿ ಆತ ಯಥಾ ಪ್ರಕಾರ ಸರಿಹೋಗುತ್ತಾನೆ. ಈ ಸಂದರ್ಭದಲ್ಲಿ ಬಹಳ ಜನ ಸೇರಿದ್ದರೆ, ಬಹಳ ನಾಚಿಕೆಪಟ್ಟುಕೊಂಡು, ಅವರಿಗೆ ಕ್ಷಮೆ ಯಾಚಿಸುತ್ತಾನೆ. ಈ ಘಟನೆಯ ಬಗ್ಗೆ ಸಂಕೋಚದಿಂದ ಯಾರಲ್ಲೂ ಮಾತನಾಡಲೂ ಇಚ್ಚಿಸುವುದಿಲ್ಲ. ತನ್ನ ರೋಗದ ಬಗ್ಗೆ ಬಯಲು ಮಾಡದೆ ಬಹಳ ಗೌಪ್ಯವಾಗಿಡುತ್ತಾರೆ. ತನ್ನ ತಂದೆ-ತಾಯಿ ಮತ್ತು ಹೆಂಡತಿಗಷ್ಟೇ ತಿಳಿದಿರುತ್ತದೆ. ಹೆಚ್ಚಾಗಿ ಮನೆಯಲ್ಲಿದ್ದಾಗಲೇ ಕಾಡುವ ಈ ಬಾಧೆಯ ಸಮಯದಲ್ಲಿ ಹೆಂಡತಿ ನೆರವಿಗೆ ಬರುತ್ತಾಳೆ. ಅವಿವಾಹಿತರಲ್ಲಿ ತಾಯಿಯ ನೆರವು ಸಿಗುತ್ತದೆ. ಆದರೆ ಗುಟ್ಟಾಗಿ, ಪ್ರತ್ಯೇಕ ಕೋಣೆಯಲ್ಲಿ ಮನೆಯ ಇತರರಿಗಾಗಲಿ ನೆರೆಮನೆಯವರಿಗಾಗಲಿ ತಿಳಿಸರು. ಪರಸ್ಥಳದಲ್ಲಿ ಆದಾಗ ಮಾತ್ರ ಘಟನೆ ವೀಕ್ಷಿಸಿದವರಿಗೆ ತಿಳಿಯುತ್ತದೆ. ಈ ಬಗ್ಗೆ ವೈದ್ಯರನ್ನು ಕಂಡು ಸಮಾಲೋಚಿಸಿದ, ಚಿಕಿತ್ಸೆ ಪಡೆದ ಅಥವಾ ಆಸ್ಪತ್ರೆಗೆ ದಾಖಲಾದ ಪ್ರಸಂಗಗಳು ಕಡಿಮೆ. ಇಲ್ಲವೇ ಇಲ್ಲವೆಂದು ಹೇಳಬಹುದು. ಈ ರೀತಿಯ ರೋಗ ಭ್ರಾಂತಿಯಿಂದ ನರಳುತ್ತಿರುವ ಒಬ್ಬ ವಿದ್ಯಾವಂತ ಉದ್ಯೋಗಸ್ಥ ಒಮ್ಮೆ ದೂರದ ಊರಲ್ಲಿ ದೊಡ್ಡ ವೈದ್ಯರೊಂದಿಗೆ ಸಮಾಲೋಚಿಸಿದಾಗ ಅವರು ಲಕ್ಷ್ಯಕೊಟ್ಟು ಕೇಳದೆ ಲಘುವಾಗಿ ಪರಿಗಣಿಸಿ ಉಪೇಕ್ಷಿಸಿದರೆಂದು ಮುಂದೆ ಯಾವ ವೈದ್ಯರಲ್ಲೂ ಹೇಳಿಕೊಂಡಿಲ್ಲ.

ಸದರಿ ಘಟನೆಯ ಸಂದರ್ಭದಲ್ಲಿ ಆ ರೀತಿ ಹಿಡಿದು ಎಳೆಯುವುದೊಂದೇ ಆ ರೋಗಕ್ಕೆ ಸುಲಭವಾದ ಮತ್ತು ಸಕಾಲಿಕ ಪರಿಹಾರವೆಂದು ಹೇಳುತ್ತಾರೆ. ಎಳೆಯದೆ ಬಿಟ್ಟರೆ ಶರೀರ (ಜನನಾಂಗ) ಒಳ ಹೋಗಿ ತಕ್ಷಣದಲ್ಲೇ ಸಾವು ಸಂಭವಿಸುತ್ತವೆ ಎಂದು ಬಲವಾಗಿ ಆ ಪ್ರದೇಶದ ಜನರು ನಂಬಿದ್ದಾರೆ.

೧೯೭೭ರ ಸುಮಾರಿಗೆ ಆ ಊರಿನಲ್ಲಿ ಪ್ರಥಮ ಬಾರಿಗೆ ಈ ರೋಗ ಕಾಣಿಸಿಕೊಂಡು ಸೂಕ್ತ ಸಮಯದಲ್ಲಿ ಯಾರೂ ಎಳೆಯದೆ ಇದ್ದಾಗ ಸತ್ತು ಹೋದ ಸ್ಥಳೀಯ ಭೀಮರಾಯಪ್ಪನ

ಸಾವು, ಆಗಾಗ್ಗೆ ಕಿಬ್ಬೊಟ್ಟೆಯಲ್ಲಿ ಕಾಣಿಸಿಕೊಳ್ಳುವ ನೋವು ಜನರಲ್ಲಿ ಭೀತಿ ಉಂಟುಮಾಡಿದೆ. ಕಾರಣ, ಸತ್ತ ಭೀಮರಾಯಪ್ಪನಿಗೂ ಇದೇ ರೀತಿಯ ನೋವು ಬರುತ್ತಿತ್ತಂತೆ. ನಾಲ್ಕು ತಿಂಗಳ ಹಿಂದೆ ಪಕ್ಕದ ಹಳ್ಳಿಯ ೧೪ ವರ್ಷದ ಹುಡುಗನೊಬ್ಬ ಈ ವಿಚಿತ್ರ ಕಾಯಿಲೆಯಲ್ಲಿ ಸತ್ತಿದ್ದಾನೆಂದು ಹೇಳುತ್ತಾರೆ. ಆತನ ತಾಯಿ ಈ ಕಾಯಿಲೆಯಿಂದಲೇ ಸತ್ತಿದ್ದಾನೆ ಎಂದು ಹೇಳುತ್ತಾ ಈಗಲೂ ರೋದಿಸುತ್ತಿದ್ದಾಳೆ.

ಅಷ್ಟೇ ಏಕೆ, ಈ ಕಾಯಿಲೆ ಅಪರೂಪಕ್ಕೆ ಮಹಿಳೆಯರಲ್ಲೂ ಕಾಣಿಸಿಕೊಂಡು, ಸ್ಥಳೀಯವಾಗಿ ಒಬ್ಬ ಮಹಿಳೆ ಈ 'ಇಗ್ಲೀಸ್' ನಿಂದ ಸತ್ತಿದ್ದಾಳೆಂದು ಸಮರ್ಥಿಸುತ್ತಾರೆ. ಮಹಿಳೆಯರಿಗೆ ಈ ರೋಗ ಬಂದರೆ ಪರಿಹಾರವಿಲ್ಲ!

ವೈದ್ಯರಲ್ಲಿ ವಿಚಾರಿಸಿದರೆ 'ಇಗ್ಲೀಸ್' ಎಂಬ ರೋಗ ವೈದ್ಯಶಾಸ್ತ್ರದಲ್ಲಿ ಎಲ್ಲೂ ಇಲ್ಲ. ರೋಗಿಯ 'ಪೆಲ್ವಿ' ಭಾಗದಲ್ಲಿ ಉಂಟಾದ ಹರ್ನಿಯಾ ಊತದಿಂದ ಮುಂಚಾಚಿತ (Protrusie) ಮಾಂಸಲ ಕುಣಿಕೆ (Noose) ಯಲ್ಲಿ ಸಿಕ್ಕಿಕೊಂಡು ನೋವು ಕಾಣಿಸುತ್ತದೆ. ಇದು ಯಾವಾಗಲಾದರೂ ಒಮ್ಮೆ ಸಂಭವಿಸುವುದುಂಟು. ಕಿಬ್ಬೊಟ್ಟೆಯ ಗೋಡೆ (Abdominal wall) ದುರ್ಬಲವಾಗಿರುವವರಲ್ಲಿ ಈ ಸಮಸ್ಯೆ ಕಾಡುತ್ತದೆ. ಅಂಥಹ ಸಮಯದಲ್ಲಿ ಸಾವಿನ ಭಯ (feeling of impending death) ಉಂಟಾಗುವುದು ಸಹಜ. ಜೊತೆಗೆ ಆ ತರಹದ ಹರ್ನಿಯ ಸಮಸ್ಯೆ ಉಲ್ಬಣವಾದಾಗ ಕೆಲವು ವಿಷಯುಕ್ತ ವಸ್ತುಗಳು ಸ್ರವಿಸಿ ಸಾವೂ ಸಂಭವಿಸುತ್ತದೆ. ಹರ್ನಿಯಗಳಲ್ಲಿ ಸುತ್ತುಕಟ್ಟಿದ (Strangulated), ತಡೆಗಟ್ಟಿದ (obstructe) ವೃಷಣ (Testicular) ತೊಡೆ ಸಂದಿಯ (Femoral & Inguinary) ಹರ್ನಿಯಾಗಳು ಈ ರೀತಿಯ ಮರಣಾಂತಿಕ ನೋವನ್ನು ಉಂಟುಮಾಡಬಲ್ಲವು. ಕರುಳಿನ ಮೇಲಿನ ಹೊದಿಕೆಯ ಪೊರೆ (Peritoneum) ಯ ಊತದಿಂದಲೂ ಈ ರೀತಿಯ ನೋವು ಕಾಣಿಸುತ್ತದೆ. ಇಂಥಹ ಸಮಸ್ಯೆಯವರು ಗಟ್ಟಿ ಆಹಾರ ಪದಾರ್ಥಗಳನ್ನು ತಿಂದಾಗ ಒತ್ತಿ-ಬಿಡುವ (Pressing & relaxing) ಅತಿ ನೋವು ಕಾಣಿಸುವುದುಂಟು. ತೊಡೆ ಸಂದಿಯ ಮೂಳೆಗಳಲ್ಲಿ ಗುಳಿ (Cavity) ಬಿದ್ದಾಗ ಕಿಬ್ಬೊಟ್ಟೆಯ ಮಾಂಸಲು ಅದರಲ್ಲಿ ತೂರಿ ಹೊರ ಬರುವ ಸಂಭವದಿಂದಲೂ ಈ ನೋವು ಉಂಟಾಗುತ್ತದೆ. ತಾನಾಗಿಯೇ ಹೊರಬಂದಾಗ ಪರಿಹಾರವಾಗುವುದು. ಇಲ್ಲವೆ ಹೊರಮೈಯನ್ನು ತೀಡಿ ತಿಕ್ಕಿದಾಗ (Massaging) ಸರಿಯಾಗುವ ಪ್ರಮೇಯವೂ ಇದೆ.

ಆ ಪ್ರದೇಶದ ಭೌಗೋಳಿಕ ಅಂಶಗಳ ಆಧಾರದ ಮೇಲೆ ವಿಶ್ಲೇಷಿಸಿ ಮತ್ತೊಂದು ಅಭಿಪ್ರಾಯ ಮಂಡಿತವಾಗಿದೆ. ತೀವ್ರ ಕಲ್ಮಷಬೆರೆತ ನೀರನ್ನು ಸೇವಿಸುವುದರಿಂದಲೂ ಈ ಕಿಬ್ಬೊಟ್ಟೆಯ ನೋವು ಕಾಣಿಸುವುದು. ಈ ಪ್ರದೇಶದ ಸನಿಹದಲ್ಲೇ ತುಂಗಭದ್ರೆ ನದಿ ಹರಿಯುತ್ತಿದ್ದು, ಪಕ್ಕದ ತಾಲ್ಲೂಕಾದ ಹರಿಹರದ ಕಾರ್ಖಾನೆಗಳಿಂದ ವಿಷಯುಕ್ತ ತ್ಯಾಜ್ಯ

ವಸ್ತುಗಳು ಈ ನದಿಗೆ ವಿಸರ್ಜಿತವಾಗುತ್ತವೆ. ಆ ಮೂಲದಿಂದಲೂ ಇದು ಈ ಪ್ರದೇಶದಲ್ಲಿ ಕಂಡು ಬಂದಿರುವ ಸಾಧ್ಯತೆಯಿದೆ. ಇದಕ್ಕೆ ಪೂರಕವಾಗಿ ಈ ನದಿಯ ದಕ್ಷಿಣಭಾಗದ ದೂರದ ಹಳ್ಳಿಗಳಲ್ಲಿ (ಹರಿಹರ- ಹಿರೆಹಡಗಲಿ ಮಧ್ಯೆ) 'ಇಗ್ಲೀಸ್' ಪದ ಬಳಕೆಯಿದೆ. ಆದರೆ ಅಲ್ಲಿ ಕಿಬ್ಬೊಟ್ಟೆ ನೋವಿಗಷ್ಟೇ ಆ ಹೆಸರನ್ನು ಬಳಸುತ್ತಾರೆ. ಅವರಿಗೆ ಇದರ ಜೊತೆಯಲ್ಲಿ ಉಂಟಾಗುವ 'ಶರೀರ ಒಳ ಹೋಗುವ' ಭ್ರಾಂತಿಯಾಗಲಿ, ಭೀತಿಯಾಗಲಿ ಇಲ್ಲ. ನದಿಯ ಆ ಕಡೆ ದಂಡೆಯ ಹಾವೇರಿ ಜಿಲ್ಲೆಯ ಗುತ್ತಲ ಗ್ರಾಮಗಳಲ್ಲೂ ಈ ಇಗ್ಲೀಸ್ (ಶರೀರ ಒಳ ಹೋಗುವ) ರೋಗವಿದೆಯೆಂದು ಹಿರೆಹಡಗಲಿ ಜನರು ಹೇಳುತ್ತಾರೆ.

ಏನೇ ಆಗಲಿ ಮೇಲಿನ ಯಾವುದೇ ಕಾರಣಗಳಿಂದಲೂ ಜನನೇಂದ್ರಿಯ ಶರೀರದೊಳಕ್ಕೆ ಹೋಗಲು ಸಾಧ್ಯವಿಲ್ಲ. ಏಕೆಂದರೆ ಆ ದ್ವಾರದಲ್ಲಿ ಒಳ ಹೋಗದಂತೆ ಪ್ಯೂಬಿಕ್ ಮೂಳೆಯ ಕಾವಲು ಭದ್ರವಾಗಿರುತ್ತದೆ. ಆದ್ದರಿಂದ ಇದು ಕೇವಲ ಭ್ರಾಂತಿ. ಕಿಬ್ಬೊಟ್ಟೆ ಸಂಬಂಧಿಸಿದ ಯಾವುದೇ ನೋವಿಗೂ ಈ ಭ್ರಾಂತಿಗೆ ಜನ ಒಳಗಾಗುವುದು ಜನಮಾನಸದಲ್ಲಿ ಬಿತ್ತಿರುವ ಕೆಲವು ಘಟನೆಗಳ ವಿಕಲ್ಪಿತ ತೀರ್ಮಾನಗಳು. ಇವು ಆಯಾ ಪ್ರದೇಶಕ್ಕಷ್ಟೆ ಸೀಮಿತಗೊಂಡ ಸಮೂಹ ಸನ್ನಿ ಎಂದರೆ ತಪ್ಪಾಗದು.

ಆದರೂ ಕೆಲವರ ಅಭಿಪ್ರಾಯದಲ್ಲಿ ಇದು ಒಂದು ವಿಲಕ್ಷಣ ರೋಗ. ಅಧ್ಯಯನ ಶೀಲವೆಂದು ಪರಿಗಣಿಸಿದ್ದಾರೆ. ಸ್ಥಳೀಯರ ಪ್ರಕಾರ ಈ ಪ್ರದೇಶದ ಸುತ್ತುಮುತ್ತಲಿನ ಹತ್ತಾರು ಹಳ್ಳಿಗಳಲ್ಲಿ ಈ ರೋಗದಿಂದ ಬಹಳಷ್ಟು ಮಂದಿ ಸತ್ತಿದ್ದಾರೆಂದು ಹೇಳುತ್ತಾರೆ. ಆದರೆ ಖಚಿತವಾಗಿ ೪-೫ ಸಾವುಗಳ ವಿವರಗಳನ್ನಷ್ಟೇ ತಿಳಿಸುತ್ತಾರೆ. ಆಸಕ್ತ ವೈದ್ಯಕೀಯ ತಂಡ, ಮನಶಾಸ್ತ್ರಜ್ಞರು ಈ ಪ್ರದೇಶಗಳಿಗೆ ಭೇಟಿ ನೀಡಿ, ಸ್ಥಳೀಯ ಕಾರಣಗಳೇನಾದರೂ ಇವೆಯೋ ಅಥವಾ ಅದೊಂದು ಭ್ರಾಂತಿಯೆ ಎಂಬುದನ್ನು ಸ್ಪಷ್ಟಪಡಿಸಿ ಜನ- ಮನದ ಮಾರಣಾಂತಿಕ ಭೀತಿಯನ್ನು ಹೋಗಲಾಡಿಸಬೇಕಾದ ಅಗತ್ಯವಿದೆ.

★

ಟೆಲಿಪಥಿ ಪರಸ್ಪರ ಪ್ರತಿಕೃತಿಗಳ ಸಂವೇದ ~~~~~~~~~~~~~~

ದೂರದಲ್ಲಿರುವ ಇಬ್ಬರು ವ್ಯಕ್ತಿಗಳು ಯಾವುದೇ ಭೌತಿಕ ಇಂದ್ರಿಯದ ಸಹಾಯವಿಲ್ಲದೆ ಕೇವಲ ಮಾನಸಿಕವಾಗಿ ಸಂಪರ್ಕ ಹೊಂದುವುದಕ್ಕೆ 'ಟೆಲಿಪಥಿ' ಎನ್ನುವರು. ಅರ್ಥಾತ್ ಭಾವನಾತ್ಮಕ ಪ್ರಭಾವದಿಂದ ಒಂದು ಮನಸ್ಸು ದೂರದಲ್ಲಿರುವ ಇನ್ನೊಂದು ಮನಸ್ಸಿನ ಮೇಲೆ ಉಂಟುಮಾಡುವ ಕ್ರಿಯೆ. ಒಂದು ವಸ್ತುವಿನ ಬಗ್ಗೆ ಅಥವಾ ಘಟನೆ ಬಗ್ಗೆ ಪಂಚೇಂದ್ರಿಯಗಳ ಸಹಾಯವಿಲ್ಲದೆ ಕೇವಲ ಮನಸ್ಸಿನ ಮೂಲಕ ಅರಿಯುವ ಶಕ್ತಿ. ದೂರದಲ್ಲಿ ಸಂಭವಿಸಿದ ಘಟನೆಗಳಿಗೆ ಉಂಟಾಗುವ ಮಾನಸಿಕ ತಳಮಳ, ಭಾವನಾತ್ಮಕ ಉದ್ವೇಗ ಮತ್ತು ಆತಂಕಗಳು ಈ ಕ್ರಿಯೆಯ ಸೂಚನೆಗಳು. ಕೆಲವೊಮ್ಮೆ ಪರಂಪರಾಗತ ನಂಬಿಕೆಗಳು (Traditional beliefs) ಮತ್ತು ಸ್ಥಳೀಯ ಮೂಢನಂಬಿಕೆಗಳು ಇಂಬುಕೊಡುವುದಿದೆ. ಅದು ಕಣ್ಣು-ಮೂಗು ಅದುರುವುದು; ನಾಯಿ-ಗೂಬೆ ಕೂಗುವುದು, ಒಲೆ ಶಬ್ದಮಾಡಿ ಉರಿಯುವುದು, ಆಕಳಿಸುವುದು ಮತ್ತು ಸ್ವಪ್ನದಲ್ಲಿ ಕಂಡ ದೃಶ್ಯಗಳು ಇತ್ಯಾದಿ ಪೂರಕ ಕ್ರಿಯೆಗಳಾಗುತ್ತವೆ. ಅಂದರೆ, ಇವುಗಳು ಟೆಲಿಪಥಿ ಕ್ರಿಯೆಗೆ ವೇಗವರ್ಧಕ (Catalyst) ಗಳಾಗುತ್ತವೆ.

'ಕಣ್ಣ ಅರಿಯದೊಡಂ ಕರುಳರಿಯದೆ' ಎಂಬ ಮಾತು ಮೊದಲಿಗೆ ಜನ್ನನ ಯಶೋಧರ ಚರಿತೆಯಲ್ಲಿ ಬರುತ್ತದೆಯಾದರೂ, ಮಹಾಭಾರತದ ಕುಂತಿಯ ವಿಷಯದಲ್ಲಿ ಈ ಟೆಲಿಪಥಿ ಕ್ರಿಯೆ ಹೃದಯಂಗಮವಾಗಿ ನಿರೂಪಿತವಾಗಿದೆ. ಗಾವುದ ದೂರದಲ್ಲಿ ಜರುಗುತ್ತಿದ್ದ ಕುರುಕ್ಷೇತ್ರ ಯುದ್ಧದಲ್ಲಿ ತೊಟ್ಟ ಬಾಣ ತೊಡದೆ ಅರ್ಜುನನಿಂದ ಹತಗೈದ ಕರ್ಣನ ಸಾವಿನ ಸೂಚನೆ ಯುದ್ಧಭೂಮಿಯಿಂದ ದೂರದಲ್ಲಿದ್ದ ತಾಯಿಕುಂತಿಗೆ ಅರಿವಾಗುತ್ತದೆ. ತನ್ನ ಕರುಳಿನ ಕುಡಿಯ ಸಾವು ಆಕೆಯ ಒಡಲಿನ ಕರುಳಿಗೆ ಅರಿವಾಗುತ್ತದೆ. ತಕ್ಷಣ ಆಕೆಯ ಬಾಯಿಂದ 'ಹತ್ತನಾದೆಯಾ ಕಂದು ಓ ಕರ್ಣ ಎಂಬ ಆರ್ತನಾದ ಹೊರಹೊಮ್ಮುತ್ತದೆ.

ಸಂಬಂಧಿಕರ ಸಾವು, ಅಪಘಾತ, ಮಕ್ಕಳ ಜನನ ಇತ್ಯಾದಿಗಳ ಬಗ್ಗೆ ಪೂರ್ವ ಸೂಚನೆಯಾಗುವುದು. 'ಹೆಂಡತಿಗೆ ದೈಹಿಕವಾಗಿ ಹೆರಿಗೆ ನೋವಾದರೆ, ದೂರದಲ್ಲಿರುವ ಗಂಡನಿಗೆ ಮಾನಸಿಕವಾಗಿ ಹೆರಿಗೆ ನೋವಾಗುವುದು' ಎಂಬ ಇಂಗ್ಲೀಷಿನ ಪ್ರಚಲಿತ ಮಾತೊಂದಿದೆ.


ಅನೇಕ ಪ್ರಾಣಿಗಳಲ್ಲೂ ಈ ಟೆಲಿಪಥಿ ಕ್ರಿಯೆ ಜರುಗುತ್ತದೆ ಎಂದು ನಂಬಲಾಗಿದೆ. ಅದಕ್ಕೆ ನಾನಾ ತರದ ಪ್ರಚಲಿತ ಕತೆಗಳು ಹುಟ್ಟಿಕೊಂಡಿವೆ.

ಇತ್ತೀಚಿನ ಸಂಶೋಧನೆಗಳಲ್ಲಿ, ಇರುವೆಗಳಿಗೆ ಈ ಶಕ್ತಿಯಿದೆ ಎಂದು ಭಾವಿಸಲಾಗುತ್ತಿದೆ, ಆಹಾರದ ಜಾಡನ್ನು ದೂರದಲ್ಲಿದ್ದರೂ ವಿಸ್ಮಯಕಾರಿಕವಾದ ಕ್ರಿಯೆಯಿಂದ ಗ್ರಹಿಸಿ, ಅದರ ದೂರ ಮತ್ತು ದಿಕ್ಕನ್ನು ಕಂಡುಕೊಳ್ಳುತ್ತವೆ. ಪ್ರೊಫೆಸರ್ ಕ್ರೈಸ್ ವಿಂಟರ್‌ರವರು ಈ ಸಂಶೋಧನೆ ನಡೆಸಿ, ಇರುವೆಗಳು ಕಂಪ್ಯೂಟರ್ ಮಾದರಿಯಲ್ಲಿ ಆಹಾರದ ಜಾಡನ್ನು ಗ್ರಹಿಸುತ್ತವೆ ಎಂದಿದ್ದಾರೆ. ಬ್ರಿಟಿಷ್ ಟೆಲಿಕಾಂ ಸಂಸ್ಥೆಯೊಂದರ ಮುಖ್ಯಸ್ಥರಾದ ಪ್ರೊ. ವಿಂಟರ್‌ರವರು ಇರುವೆಗಳ ಜೈವಿಕ ಶಾಸ್ತ್ರದ ವಿಶೇಷ ಅಧ್ಯಯನದಿಂದ ಈಗ ಪ್ರಸ್ತುತವಿರುವ 'ಸಾಫ್ಟ್‌ವೇರ್ ಸಿಸ್ಟಂ'ನ್ನು ಮತ್ತಷ್ಟು ವಿಸ್ಮಯಕಾರಿಕ ವೈಜ್ಞಾನಿಕ ಸಾಧನವಾಗಿ ಮತ್ತು ಕುಶಲಾಗ್ರಮತಿ ಉಪಕರಣವಾಗಿ ಮಾರ್ಪಡಿಸಬಹುದೆಂದು ತಿಳಿಸಿದ್ದಾರೆ. ಕಂಪ್ಯೂಟರ್ ಸಾಧನಗಳು ಬಾಹ್ಯ ನಿಯಂತ್ರಣದಿಂದ ಕಾರ್ಯವೆಸಗಿದರೆ, ಇರುವೆಗಳಲ್ಲಿ 'ಸ್ವ-ನಿಯಂತ್ರಿತ' ವಿಧಾನದಲ್ಲಿ ಕಂಪ್ಯೂಟರ್ ಮಾದರಿ ಕ್ರಿಯೆ ಜರುಗುತ್ತದೆ ಎಂದು ವಿವರಿಸಿದ್ದಾರೆ. ಅವರ ಪ್ರತಿಷ್ಠಿತ ಟೆಲಿಕಾಂ ಸಂಸ್ಥೆಯಾದ 'ಬಿ. ಟಿ. ಪ್ಯೂಚರ್ ಸಿಸ್ಟಮ್ಸ್' ನಲ್ಲಿ ಈಗಾಗಲೇ ಈ ತರಹದ 'ಸ್ವ-ನಿಯಂತ್ರಿತ' ತಂತ್ರ ಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ ಎಂದು ಘೋಷಿಸಿದ್ದಾರೆ.

ಪ್ರೊ. ಜೆ. ಬಿ. ರೈನೇ ಈ ಟೆಲಿಪಥಿಯ ಅಪೂರ್ವ ವಿಷಯಗಳ ಬಗ್ಗೆ ವೈಜ್ಞಾನಿಕವಾಗಿ ಸಮರ್ಥಿಸಲು ಪ್ರಯತ್ನಿಸಿದವರಲ್ಲಿ ಮೊದಲಿಗರು. ಇವರಲ್ಲದೇ ಪ್ಯಾರಿಸ್‌ನ ಚಾರ್ಲೆಸ್ ರಿಕೆಟ್, ಸ್ಟ್ಯಾನ್ ಫೋರ್ಡ್ ವಿಶ್ವವಿದ್ಯಾಲಯದ ಜಾನ್ ಆ ಕೂಪರ್, ಹಾರ್ವರ್ಡ್ ವಿಶ್ವವಿದ್ಯಾಲಯದ ಜಾರ್ಜ್ ಈ ಸ್ಟಾಬ್ರೂಕ್ಸ್, ವಿಲಿಯಂ ಮಾಗ್ಡಗಾಲ್ ಮುಂತಾದವರು ಪ್ರಯೋಗಶಾಲೆಯ ನಿಯಮಿತ ಪರಿಸ್ಥಿತಿಗಳಲ್ಲಿ ಟೆಲಿಪಥಿ ಬಗ್ಗೆ ತೀವ್ರ ಪ್ರಯೋಗ ನಡೆಸಿದರು. ೧೯೨೦ರಲ್ಲಿ ಅಪ್ಟಾನ್ ಸಿಂಕ್ಲೇರ್ ಎಂಬ ಮನೋವಿಜ್ಞಾನಿ ದೂರದಲ್ಲಿದ್ದ ತನ್ನ ಪತ್ನಿ ಮೇರಿಯೊಂದಿಗೆ ಟೆಲಿಪಥಿಯ ಸಂಪರ್ಕ ಸಾಧಿಸಲು ಪ್ರಯತ್ನಿಸಿದ. ಈ ಪ್ರಯೋಗದಲ್ಲಿ ಮೇರಿ ದೂರದಲ್ಲಿ ತಮ್ಮ ಪತಿ ರಚಿಸಿದ ನೂರು ಸಾಮಾನ್ಯ ಚಿತ್ರಗಳನ್ನು ಸ್ವತಃ ನೋಡದೆ ಅವುಗಳ ಪ್ರತಿಕೃತಿಗಳನ್ನು ಚಿತ್ರಿಸಿದ್ದಳು. ಅವುಗಳ ಒಂದೆರಡು ಮಾದರಿಗಳನ್ನು ಅವರ ಭಾವಚಿತ್ರದೊಂದಿಗೆ ಇಲ್ಲಿ ನೀಡಲಾಗಿದೆ.

ಈ ಪ್ರಯೋಗದ ಆಧಾರದ ಮೇಲೆ ಸಿಂಕ್ಲೇರ್ 'ಮಾನಸಿಕ ರೇಡಿಯೋ ಟೆಲಿಪಥಿ' ಎಂಬ ಪುಸ್ತಕವನ್ನು ಬರೆದಿದ್ದಾರೆ. ಈ ಪುಸ್ತಕಕ್ಕೆ ಮುನ್ನುಡಿ ಬರೆದಿರುವವರು ಜಗತ್ತಿನ ಅಗ್ರಗಣ್ಯ ವಿಜ್ಞಾನಿಯಾದ ಡಾ. ಆಲ್ಬರ್ಟ್ ಐನ್‌ಸ್ಟೀನ್, ಇವರು ತಮ್ಮ ಮುನ್ನುಡಿಯಲ್ಲಿ ಫಿರೋಮೋನುಗಳನ್ನು ಒಂದಲ್ಲ ಒಂದು ಸಂಕೇತಕ್ಕಾಗಿ ಬಳಸುತ್ತವೆಂದು ತಿಳಿದುಬಂದಿದೆ. ನಾಯಿಗಳೂ, ಹುಲಿಗಳು ತಂತಮ್ಮ ಆವರಣಗಳ ಎಲ್ಲೆಯನ್ನು ಮೂತ್ರದಿಂದ ಗುರುತಿಸುತ್ತವೆ.

ಆದರೆ ಮನುಷ್ಯರಲ್ಲೂ ಈ ಬಗೆಯ ಗಂಧವಿಲ್ಲದ, ಬಣ್ಣವಿಲ್ಲದ ಫಿರೋಮೋನುಗಳ ರೂಪದಲ್ಲಿ ಗುಪ್ತ ಸಂಕೇತಗಳು ರವಾನೆಯಾಗುತ್ತಿವೆಯೇ ಎಂಬ ಬಗ್ಗೆ ಪುಕಾರುಗಳಿದ್ದರೂ ಅವು ವೈಜ್ಞಾನಿಕವಾಗಿ ಸಾಬೀತಾಗಿಲ್ಲ. ಇಲಿ, ಕೀಟಗಳಲ್ಲಿರುವಂತೆ ಮನುಷ್ಯರಲ್ಲೂ ಫಿರೋಮೋನುಗಳನ್ನು ಗ್ರಹಿಸಬಲ್ಲ ವಿಶಿಷ್ಟ ಸಂವೇದನಾಂಗ ಇದೆಯೆಂಬ ಬಗ್ಗೆ ಖಚಿತವಾಗಿಲ್ಲ.



ಟೆಲಿಪಥಿಯಂತೆ ಅಂತರ್‌ದೃಷ್ಟಿ (Intution) ಅಂತರಂಗದ ಸಾಕ್ಷ್ಯ, ಅಂತರಂಗದ ದನಿ (Inner Voice) ಮಾನಸಿಕ ಶಕ್ತಿಯಿಂದ ವಸ್ತುಗಳನ್ನು ಕದಲಿಸುವ ಶಕ್ತಿ (Psycho Kinesis) ಕಣ್ಣಿಗೆ ಕಾಣದ್ದನ್ನು ಕಾಣುವ ಶಕ್ತಿ (Clairvoyance) ಪೂರ್ವಜ್ಞಾನ (Precognition) ಇತ್ಯಾದಿಗಳನ್ನು ಕುರಿತು ಪ್ರಯೋಗಗಳು ನಡೆಯುತ್ತಿವೆ. ಇವುಗಳಿಗೆ ಪಿ. ಎಸ್. ಐ. ಪ್ರಯೋಗಗಳೆನ್ನುವರು. ಇವುಗಳು ಇನ್ನೂ ವೈಜ್ಞಾನಿಕವಾಗಿ ಅಂಗೀಕಾರಗೊಂಡಿಲ್ಲ.

ಸ್ವತಃ ಪ್ರೊ. ಜೆ. ಬಿ. ರೈನೇ ಹೇಳುವಂತೆ 'ಪಿ. ಎಸ್. ಐ. ಗಳೊಂದಿಗೆ ತಲೆ ಕೆಡಿಸಿಕೊಳ್ಳುವಲ್ಲಿ ಅರ್ಥವಿಲ್ಲ. ವೈಜ್ಞಾನಿಕ ಪರಿಭಾಷೆಯಲ್ಲಿ ಇದನ್ನು ತಿಳಿಯಲಾರದ ಪರಿಮಾಣ (ಅನೂಹ್ಯ ಪರಿಮಾಣ) ಎಂದು ಭಾವಿಸಿರುವುದು, ಮುಂದಿನ ವೈಜ್ಞಾನಿಕ ಸಂಶೋಧನೆಗಳಲ್ಲಿ ರುಜುವಾತಾಗಿ (Prove) ನಿಖರ ಪರಿಮಾಣವಾಗುವುದು ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಈ ಟೆಲಿಪಥಿ ಪ್ರಯೋಗಗಳಲ್ಲಿ ಯಶಸ್ವಿ ಸಾಧಿಸಿದರೆ ವೈಜ್ಞಾನಿಕ ಲೋಕದಲ್ಲಿ ಕ್ರಾಂತಿಕಾರಿಕ ವಿಸ್ಮಯವೊಂದು ಆವಿರ್ಭವಿಸುವುದು. ನಮ್ಮ ಪೀಳಿಗೆಯ ಅಂತ್ಯದಲ್ಲಾಗಲಿ ಅಥವಾ ಮುಂದಿನ ಪೀಳಿಗೆಯ ಆದಿಯಲ್ಲಾಗಲಿ ಇದು ಸಾಧ್ಯವಾಗಬಹುದೆಂಬುದನ್ನು ಅಲ್ಲಗಳೆಯಲಾಗದು.

ಕೊನೆಯದಾಗಿ, ವಿಶ್ವವಿಖ್ಯಾತ ಮನಶಾಸ್ತ್ರಜ್ಞನಾದ ಪ್ರೊ. ಸಿಗ್ಮೆಂಡ್ ಫ್ರಾಯ್ಡ್‌ನ ಆಶಯವನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. 'ನನ್ನ ಜೀವಿತಾವಧಿಯಲ್ಲಿ ಟೆಲಿಪಥಿ ಅಧ್ಯಯನವನ್ನು ಮಾಡಲಾಗದಿರುವುದಕ್ಕೆ ವಿಷಾದವಾಗುತ್ತದೆ. ಮುಂದಿನ ಜನ್ಮವೊಂದಿದ್ದರೆ, ಆ ಜನ್ಮಾವಧಿಪೂರ್ತಿ ಟೆಲಿಪಥಿಯ ಬಗ್ಗೆ ಸಂಶೋಧನೆ ಮಾಡುತ್ತೇನೆ'.

★

ಕುಕ್ಕುಟ ವೈದ್ಯಕೀಯಂ ~~~~~~~~~~~~~~~~~~~~~~~~

ಭಗವಂತಪ್ಪ ಗ್ರಾಮೀಣ ಬ್ಯಾಂಕೊಂದರ ಉದ್ಯೋಗಿ. ತುಂಗಭದ್ರ ನದೀ ತೀರದಲ್ಲಿರುವ ನಗರ-ಪಟ್ಟಣಗಳಿಂದ ಅತೀ ದೂರದಲ್ಲಿರುವ ಹಿಂದುಳಿದ ಪ್ರದೇಶದ ಗ್ರಾಮವೊಂದರ ಶಾಖೆಯಲ್ಲಿ ಕೆಲಸಮಾಡುತ್ತಿದ್ದಾರೆ. ಮ್ಯಾನೇಜರ್ ಮತ್ತು ಇವರನ್ನು ಬಿಟ್ಟರೆ ಆ ಚಿಕ್ಕ ಶಾಖೆಯಲ್ಲಿ ಬೇರೆ ಸಿಬ್ಬಂದಿಯಿಲ್ಲ. ರಜೆಮೇಲೆ ಹೋಗಬೇಕಾದರೆ ಬಹಳ ಕಷ್ಟ. ಆ ಊರಿಗೆ ಸಾರಿಗೆ ವಾಹನಗಳ ಸೌಕರ್ಯ ದುರ್ಲಭ. ಶಿಕ್ಷಣ ಮತ್ತು ನಾಗರೀಕ ಸೌಲಭ್ಯಗಳಿಂದ ವಂಚಿತಗೊಂಡ ಕುಗ್ರಾಮ. ಆ ಶಾಖೆಗೆ ಬರುವ ಸಿಬ್ಬಂದಿ ಸಿಗುವುದೇ ಕಷ್ಟ. ಬಂದರೂ ದೂರದ ಪಟ್ಟಣದಿಂದ ಸ್ವಂತ ದ್ವಿಚಕ್ರ ವಾಹನವಿಟ್ಟುಕೊಂಡು ದಿನನಿತ್ಯ ಓಡಾಡುವುದು ಅನಿವಾರ್ಯ. ನಮ್ಮ ಭಗವಂತಪ್ಪನಿಗೆ ಈ ಶಾಖೆಯಿಂದ ೧೨ ಕಿ.ಮೀ. ದೂರದ ಅಂತರದಲ್ಲೇ ಸ್ವಂತ ಊರಿದ್ದು, ಅಲ್ಲಿಯ ಹಳ್ಳಿಯ ಮನೆಯಲ್ಲೇ ಕುಟುಂಬ ಸಮೇತ ವಾಸ. ಪಿತ್ರಾರ್ಜಿತ ಆಸ್ತಿಗಳಾದ ಹೊಲಮನೆ ನೋಡಿಕೊಂಡು ಅವುಗಳ ಅಭಿವೃದ್ಧಿಯತ್ತ ಗಮನ ನೀಡುವ ಸಲುವಾಗಿ ಈ ಶಾಖೆಗೆ ಬಂದಿದ್ದಾರೆ. ಮೊಪೆಡ್ ವಾಹನವೊಂದನ್ನು ಖರೀದಿಸಿ ಸ್ವಂತ ಊರಿನಿಂದ ದಿನನಿತ್ಯ ಇಲ್ಲಿಗೆ ಬಂದು ಕಾರ್ಯ ನಿರ್ವಹಿಸುತ್ತಾರೆ.

ಹೀಗಿರುವಾಗ ಮಳೆಗಾಲದ ಒಂದು ಮಧ್ಯಾಹ್ನ ಕಟ್ಟಿಗೆ ರಾಶಿಗೆ ಕೈಹಾಕಿದಾಗ ಅವರ ಹೆಂಡತಿ ಅಮರಮ್ಮನಿಗೆ ನಾಗರ ಹಾವೊಂದು ಕಚ್ಚಿಬಿಟ್ಟಿತು. ವಿಷವೇರಿ ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಅಮರಮ್ಮನನ್ನು ಮಂತ್ರ ವೈದ್ಯ ಅಥವಾ ನಾಟಿ ವೈದ್ಯಕ್ಕೆ ಕಾಯದೆ ತುರ್ತು ಚಿಕಿತ್ಸೆಗೆಂದು ಹತ್ತಿರದ (೪೫ ಕಿ.ಮೀ ಅಂತರ) ಪಟ್ಟಣಕ್ಕೆ ತೆಗೆದುಕೊಂಡು ಹೋಗಲು ಬಡಪಟ್ಟಿಗೆ ಸಿಕ್ಕ ಟ್ರ್ಯಾಕ್ಟರ್ ಒಂದರಲ್ಲಿ ಕೂಡಿಸಿಕೊಂಡು ಹೊರಟರು. ಅನುಭವಿ ಹಿರಿಯರೊಬ್ಬರು ದಾರಿಯಲ್ಲಿ ಸಾಗಿಸುವಾಗ ಕಚ್ಚಿದ ಭಾಗಕ್ಕೆ ಹೆಣ್ಣು ಕೋಳಿಯೊಂದರ ಗುದದ್ವಾರಕ್ಕೆ ಸ್ವಲ್ಪ ಪೆಟ್ಟುಮಾಡಿ, ಹಾವು ಕಚ್ಚಿದ ಮನುಷ್ಯನ ದೇಹದ ಭಾಗದಲ್ಲಿ ರಕ್ತ ಹೊಮ್ಮುವಂತೆ ಬ್ಲೇಡಿನಿಂದ ತುಸು ಗಾಯಮಾಡಿ, ಆ ಭಾಗಕ್ಕೆ ಸರಿಯಾಗಿ ಆ ಕೋಳಿಯ ಗುದದ್ವಾರವನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಸಲಹೆಮಾಡಿದರು. ಅದರಿಂದ ವಿಷದ ಪ್ರಮಾಣ ಸ್ವಲ್ಪ ಕುಗ್ಗಿ ದಾರಿಪ್ರಯಾಣದಲ್ಲಿಯೇ ಸಾವನಪ್ಪುವ ಸಂಭವವನ್ನು ತಪ್ಪಿಸಬಹುದೆಂದು ಅಭಿಪ್ರಾಯನೀಡಿದರು.

ಅಮರಮ್ಮ ೩೫ ವರ್ಷಗಳ ನಡುವಯಸ್ಸಿನ ಮುಗ್ಧ ಮಹಿಳೆ. ಮೂರು ಮಕ್ಕಳ ತಾಯಿ. ಹಿರಿಯರು ಹೇಳಿದಂತೆ ಊರಿನಲ್ಲಿ ಸಿಕ್ಕ ೫-೬ ಕೋಳಿಗಳನ್ನು ಕಲೆಹಾಕಿ ದಾರಿಪ್ರಯಾಣದಲ್ಲಿ ಆ ಪ್ರಯೋಗ ಮಾಡುತ್ತಾ ಸಾಗಿದರು. ಕಚ್ಚಿದ ಭಾಗಕ್ಕೆ ಕೋಳಿಯ ಗುದದ್ವಾರವನ್ನು ಒತ್ತಿ

ಹಿಡಿದಾಗ, ಸ್ವಲ್ಪ ಹೊತ್ತಿನಲ್ಲಿ ಕೋಳಿ ಸಾಯುತ್ತಿತ್ತು. ಇದರಿಂದ ರೋಗಿಯಿಂದ ಕೋಳಿಗೆ ವಿಷ ವರ್ಗವಾಗಿದೆ ಎಂದು ಭಾವಿಸಬೇಕೆಂದು ಹಿರಿಯರು ಹೇಳಿದ್ದರು. ನಂತರ ಮತ್ತೊಂದು ಕೋಳಿಯ ಪ್ರಯೋಗ. ದಾರಿ ಉದ್ದಕ್ಕೂ ಬರುವ ಗ್ರಾಮಗಳಲ್ಲೆಲ್ಲಾ ಹೆಣ್ಣು ಕೋಳಿಗಳ ಖರೀದಿ ಮಾಡುತ್ತಾ ಸುಮಾರು ೫ ಗಂಟೆಗಳ ಆ ಹಳ್ಳಿಗಾಡಿನ ರಸ್ತೆಗಳ ಪ್ರಯಾಣದಲ್ಲಿ ಒಟ್ಟು ೨೮ ಕೋಳಿಗಳ ಆಹುತಿಯಲ್ಲಿ ಕೊನೆಗೂ ಪಟ್ಟಣದ ಆಸ್ಪತ್ರೆಗೆ ಪ್ರಜ್ಞಾ ಸ್ಥಿತಿಯಲ್ಲಿ ಆಕೆಯನ್ನು ತಂದರು. ಆಕೆ ಪ್ರಜ್ಞಾಹೀನಳಾಗುವ ಸಂದರ್ಭದಲ್ಲಿ ಕೋಳಿಯನ್ನು ಒತ್ತಿ ಹಿಡಿದಾಗ ಆಕೆಗೆ ಪ್ರಜ್ಞೆ ಮರುಕಳಿಸುತ್ತಿತ್ತು. ಕೋಳಿಗೆ ವಿಷವೇರಿ ಕೋಳಿ ಸಾಯುತ್ತಿತ್ತು. ಈ ರೀತಿಯ ನಿರಂತರ ಪ್ರಯೋಗವನ್ನು ದಾರಿಯುದ್ದಕ್ಕೂ ಮಾಡಿಕೊಂಡು ಬಂದಿರುವ ಈ ಗ್ರಾಮೀಣ ನಂಬಿಕೆಯ ಪದ್ಧತಿ ವೈದ್ಯಕೀಯ ವಲಯದಲ್ಲೂ ಆಶ್ಚರ್ಯ ಮೂಡಿಸಿತು. ಇಷ್ಟು ಹೊತ್ತು ರೋಗಿಯನ್ನು ಬದುಕಿಸಿ ತಂದಿರುವುದರಿಂದಲೇ ಆಕೆಯನ್ನು ಮುಂದಿನ ಚಿಕಿತ್ಸೆ ನೀಡಲು ಸಾಧ್ಯವಾಯಿತು ಎಂದು ಆಕೆಯನ್ನು ಬದುಕಿಸಿದ ನುರಿತ ವೈದ್ಯರ ಖಚಿತ ಅಭಿಪ್ರಾಯವಾಗಿತ್ತು. ಇಲ್ಲದಿದ್ದರೆ ದಾರಿಯಲ್ಲೇ ಸಾಯಬೇಕಿದ್ದ ಪ್ರಕರಣವಿದೆಂದು ಅವರು ಒಪ್ಪಿಕೊಂಡರು. ಆ ಸಂದರ್ಭದಲ್ಲಿ ನಾನು ಆಸ್ಪತ್ರೆಯಲ್ಲಿದ್ದು ಇದರಲ್ಲಿ ಹೆಚ್ಚಿನ ಆಸಕ್ತಿ ತೋರಿಸಿ ವೈದ್ಯರಲ್ಲಿ ವಿಚಾರಿಸಿದಾಗ ಪ್ರಾಣಿ ಶಾಸ್ತ್ರಜ್ಞರಲ್ಲಿ ವಿಚಾರಿಸಿ ವೈಜ್ಞಾನಿಕ ಕಾರಣಗಳನ್ನು ಕಂಡುಕೊಳ್ಳಬಹುದೆಂದರು.

ತಕ್ಷಣ, ನಮ್ಮ ರಾಜ್ಯದ ವಿಜ್ಞಾನ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಮತ್ತು ತುಮಕೂರಿನ ಕಾಲೇಜೊಂದರಲ್ಲಿ ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಾ|| ಹೆಚ್. ಎಸ್. ನಿರಂಜನಾರಾಧ್ಯರನ್ನು ಸಂಪರ್ಕಿಸಿ ಸುದೀರ್ಘವಾಗಿ ಚರ್ಚಿಸಿದ ನಂತರ ಈ ಗ್ರಾಮೀಣ ನಂಬಿಕೆಯ ತುರ್ತು ಚಿಕಿತ್ಸಾ ಪದ್ಧತಿ ವೈಜ್ಞಾನಿಕ ಆಧಾರಿತವೆಂದು ಮನಗಂಡೆವು.

ವಿಷದ ಹಾವಿನ ಕಡಿತಕ್ಕೆ ಈ ಗ್ರಾಮೀಣ ಚಿಕಿತ್ಸೆಯ ಬಗ್ಗೆ ಚಿಕ್ಕಂದಿನಿಂದಲೂ ನೋಡುತ್ತಾ ಬಂದಿದ್ದೇವೆ. ಇದು ಕೇವಲ ನಂಬಿಕೆಯಷ್ಟೇ. ವೈಜ್ಞಾನಿಕ ಆಧಾರವಿಲ್ಲವೆಂದು ತಿಳಿದಿದ್ದೆವು. ಆದರೆ ವಿಶದವಾಗಿ ವಿಶ್ಲೇಷಿಸಿದಾಗ ಆ ಪದ್ಧತಿಯಲ್ಲಿ ಸತ್ಯಾಂಶವಿದೆ.

೧. ಎಲ್ಲಾ ಪಕ್ಷಿಗಳಲ್ಲಿಯೂ ಮೂತ್ರದ್ವಾರ ಹಾಗೂ ಗುದನಾಳವು 'ಕ್ಲೋಯಕ' ಎಂಬ ಕಿರಿದಾದ ಅವಕಾಶಕ್ಕೆ ತೆರೆಯುತ್ತವೆ. ಈ ಕ್ಲೋಯಕವು ಹೊರಕ್ಕೆ ಒಂದು ರಂಧ್ರದ ಮೂಲಕ ತೆರೆದಿರುತ್ತದೆ. ಗಂಡು ಹೆಣ್ಣು ಪಕ್ಷಿಗಳು ಪರಸ್ಪರ ಕೂಡಿದಾಗ ಅವುಗಳ ಕ್ಲೋಯಕಗಳು ಒಂದಕ್ಕೊಂದು ಅಂಟಿಕೊಳ್ಳುತ್ತವೆ. ಈ ಕ್ರಿಯೆಯನ್ನು 'CLOACAL KISS' (ಕ್ಲೋಯಕಗಳ ಚುಂಬನ) ಎಂದು ಕರೆಯುತ್ತಾರೆ. ಆಗ ಗಂಡು ಪಕ್ಷಿಯಿಂದ ವೀರ್ಯವು ಹೆಣ್ಣಿನ ಕ್ಲೋಯಕಕ್ಕೆ ಸೇರುತ್ತದೆ.

೨. ಎಲ್ಲಾ ಪ್ರಾಣಿಗಳಲ್ಲಿ ಸಂಭೋಗ ನಡೆದಾಗ ಸ್ವಲ್ಪ ಕಾಲ ಅಂಡನಾಳ, ಗರ್ಭ ಹಾಗೂ ಸಂಬಂಧಿತ ಅಂಗಾಂಗಗಳು ಸಂಕುಚನ ವಿಕಸನ ಕ್ರಿಯೆಗೆ ಒಳಪಡುತ್ತವೆ. ಇದರಿಂದ

ವೀರ್ಯವು ಅಂಡನಾಳದ ಮೇಲ್ಭಾಗಕ್ಕೆ ಚಲಿಸಲು ಸಹಾಯವಾಗುತ್ತದೆ. ಇಂಕ್ ಫಿಲ್ಲರ್ ತರಹ ಹೀರಿಕೊಳ್ಳುವ ಕ್ರಿಯೆ ಸಂಭವಿಸುತ್ತದೆ.

೩. ಕ್ಲೋಯಕದ ಒಳಗೋಡೆಗಳಲ್ಲಿ ಮೃದುವಾದ, ಅಂಟಿರುವ ಚರ್ಮವಿರುತ್ತದೆ. ಇದು ಹೊರ ಚರ್ಮಕ್ಕಿಂತ ಭಿನ್ನ ರಚನೆ ಹೊಂದಿದ್ದು ಹೀರಿಕೊಳ್ಳುವ ಗುಣವನ್ನು ಹೊಂದಿರುತ್ತದೆ. ಚಿಕ್ಕಂದಿನಲ್ಲಿ ನಾವು ಮೊಟ್ಟೆಯಿಸುವ ಕೋಳಿಯ ಗುದದ್ವಾರಕ್ಕೆ ನಮ್ಮ ಚಿಕ್ಕ ಕಿರುಬೆರಳನ್ನು ತುರುಕಿಸಿ ಒಳಗೆ ಮೊಟ್ಟೆಯಿರುವುದನ್ನು ಖಾತ್ರಿ ಮಾಡಿಕೊಂಡು ಅದನ್ನು ಬಿದಿರಿನ ಬುಟ್ಟಿಯೊಳಗಿಟ್ಟು ಮೊಟ್ಟೆಯಿಡಲು ಅನುವುಮಾಡಿಕೊಡುತ್ತಿದ್ದೆವು. ಬಾಲ್ಯದಲ್ಲಿ ಇದೊಂದು ಮೋಜಿನ ಆಟವಾಗಿರುತ್ತಿತ್ತು. ಆಗ ನಮ್ಮ ಕಿರುಬೆರಳನ್ನು ಬಲವಾಗಿ ಒತ್ತಿ ಕೋಳಿ ಹೀರಿಕೊಳ್ಳುವುದು (ಒಳಗೆ ಎಳೆದುಕೊಳ್ಳುತ್ತಿದ್ದ ಅನುಭವ) ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಒಳಗೆ ಅತ್ಯಂತ ಬಿಸಿಯಾದ ಮೃದುವಾದ ಮಾಸಲು ಗೋಡೆ ಸಿಗುತ್ತಿತ್ತು.

ಇಲ್ಲಿ ಮತ್ತೊಂದು ವಿಷಯ, ಪಕ್ಷಿಗಳು ನಮ್ಮಂತೆ ಮೂತ್ರ ಮಾಡುವುದಿಲ್ಲ. ಅವುಗಳಿಗೆ ನಮ್ಮಂತೆ ಪ್ರತ್ಯೇಕ ಮೂತ್ರದ್ವಾರವಿಲ್ಲ. ಬದಲಿಗೆ ಗುದದ್ವಾರದಲ್ಲಿ ಏಕಕಾಲದಲ್ಲಿ ಮೂತ್ರ-ಮಲ ಜಲರೂಪದಲ್ಲಿ ವಿಸರ್ಜಿತಗೊಳ್ಳುತ್ತದೆ. ಸಂಭೋಗವೂ ಅದೇ ದ್ವಾರದ ಮೂಲಕ ಜರುಗುತ್ತದೆ. ಆದಷ್ಟು ನೀರನ್ನು ಅವು ಪುನರ್ಬಳಕೆ ಮಾಡಿಕೊಳ್ಳುತ್ತವೆ. ಆಕಾಶದಲ್ಲಿ ಹಾರುವಾಗ ನೀರಿಲ್ಲದೆ, ಮೂತ್ರ ವಿಸರ್ಜನೆ ಮಾಡಿ ದಿನವೆಲ್ಲಾ ಇರಬಲ್ಲವು.

೪. ಪಕ್ಷಿಗಳ ದೇಹದ ಉಷ್ಣತೆಯು ಮಾನವನ ಶರೀರಕ್ಕಿಂತ ಹೆಚ್ಚಿರುತ್ತದೆ. ಕೋಳಿ ದೇಹದ ಉಷ್ಣತೆಯೂ ಮಾನವನ ಶರೀರಕ್ಕಿಂತ ಅಧಿಕವಾಗಿರುತ್ತದೆ.

೫. ಬೆರಳುಗಳ ತುದಿಗೆ ಅಥವಾ ದೇಹದ ಇತರ ಭಾಗಗಳಿಗೆ ಹಾವು ಕಡಿದಾಗ ಅಲ್ಲಿ ಗಾಯಮಾಡಿ ಹೆಣ್ಣು ಕೋಳಿಗಳ ಕ್ಲೋಯಕಕ್ಕೆ ಹಿಡಿದಾಗ ಮನುಷ್ಯನ ಮಾಂಸ ಹಾಗೂ ರಕ್ತದಲ್ಲಿರುವ ನೀರು ಹಾಗೂ ವಿಷವನ್ನು ಕ್ಲೋಯಕದ ಒಳಗೋಡೆಯ ಚರ್ಮ ಹೀರಿಕೊಳ್ಳುವುದು. ಹೆಚ್ಚಿನ ಉಷ್ಣತೆ, ಕ್ಲೋಯಕದ ಸಂಕುಚನ-ವಿಕಸನ ಈ ಕ್ರಿಯೆಗೆ ಸಹಾಯಕವಾಗುವುದು.

ಇಂಥಹ ಗ್ರಾಮೀಣ ಚಿಕಿತ್ಸೆಗಳಲ್ಲಿ ಸತ್ಯವಿದೆಯೆಂದು ಹಾವುಗಳ ತಜ್ಞರಾದ ರೋಮಾಲಸ್ ವಿಟೇಕರ್ ಸಹ ಒಪ್ಪಿರುತ್ತಾರೆ.

ಆದರೆ ಇದರ ಲಭ್ಯತೆ ಎಲ್ಲ ಊರುಗಳಲ್ಲಿ ಎಲ್ಲ ಕಾಲದಲ್ಲಿ ದೊರಕುವುದು ಕಷ್ಟ. ಇದನ್ನು ತುರ್ತುಕ್ರಮದ ಪರ್ಯಾಯ ಚಿಕಿತ್ಸೆ ಎಂದು ತಾತ್ಕಾಲಿಕವಾಗಿ ನೀಡಿ, ನಂತರ ಸೂಕ್ತ ಕ್ರಮದ ಪ್ರಮಾಣಿಕ ವೈದ್ಯಕೀಯ ಚಿಕಿತ್ಸೆ ನೀಡುವುದು ಅತ್ಯಗತ್ಯ.

★

ಋತು ಬಂಧ

ಮಧ್ಯವಯಸ್ಕಳಾದ ಸರಸ್ವತಿಬಾಯಿಯವರು ತುಂಬಿದ ಗೃಹಿಣಿ. ಸಂಸಾರ ಜೀವನದಲ್ಲಿ ಸಾರ್ಥಕ ಬದುಕನ್ನು ಕಂಡ ಸಾಧ್ವಿಮಣಿ. ಆಕರ್ಷಕ ಮೈಕಟ್ಟಿನ ಸದೃಢೆ. ರೂಪ ಲಾವಣ್ಯದಲ್ಲಿ ಏನೂ ಕೊರತೆಯಿಲ್ಲ. ಉನ್ನತ ಹುದ್ದೆಯಲ್ಲಿರುವ ಪತಿ. ಮುತ್ತಿನಂಥ ಎರಡು ಮಕ್ಕಳು. ಹಿರಿಯ ಮಗ ವೈದ್ಯಕೀಯ ವಿದ್ಯಾಭ್ಯಾಸ ಮುಗಿಸಿ ಸದ್ಯದಲ್ಲೇ ವೈದ್ಯನಾಗುತ್ತಾನೆ. ಮಗಳಿಗೆ ಉತ್ತಮನಾದ ವರ ಸಿಕ್ಕಿದ್ದು, ಮದುವೆ ನಿಶ್ಚಯವಾಗಿದೆ. ಸ್ವಂತ ಮನೆ, ಆಧುನಿಕ ಜೀವನಕ್ಕೆ ಬೇಕಾದ ಎಲ್ಲಾ ಸೌಲಭ್ಯವೂ ಲಭ್ಯವಾಗಿ ಸುಖವಾಗಿ ಬಾಳುತ್ತಿರುವ ಸರಸ್ವತಿಬಾಯಿಯವರು ಇತ್ತೀಚೆಗೆ ಇದ್ದಕ್ಕಿದ್ದಂತೆ ಖಿನ್ನಳಾಗುತ್ತಿದ್ದಾರೆ. ಹತಾಶ ಮನೋಭಾವದಿಂದ ಎಲ್ಲದರಲ್ಲೂ ನಿರಾಸಕ್ತಿ ಹೊಂದಿದ್ದಾರೆ. ದೇಹಕ್ಕೆ ಯಾವುದೇ ಜಡ್ಡಿಲ್ಲ. ಕೌಟುಂಬಿಕವಾಗಿ ಯಾವುದೇ ಅಹಿತಕರ ಘಟನೆಗಳು ಸಂಭವಿಸಿಲ್ಲ. ಕುಟುಂಬ ವೈದ್ಯರಲ್ಲಿ ತೋರಿಸಿದಾಗ ಅವರಿಗೆ ಯಾವುದೇ ದೈಹಿಕ ತೊಂದರೆಯಿಲ್ಲ ಎಂದು ತಿಳಿಸಿದ್ದಾರೆ. ಆದಾಗ್ಯೂ ಆಕೆಯ ಮಾನಸಿಕ ಅಸ್ವಸ್ಥತೆ ಕಡಿಮೆಯಾಗಲಿಲ್ಲ. ಊಟತೊಡಿಗೆಯಲ್ಲಿ ನಿರಾಸಕ್ತಿ. ಗಂಡ ಮಕ್ಕಳೊಡನೆ ಮೊದಲಿನಂತೆ ಲವಲವಿಕೆಯಿಂದ ಮಾತನಾಡುವುದಿಲ್ಲ. ಮನೆಗೆಲಸ ಮಾಡುವಲ್ಲಿ ಉತ್ಸಾಹವಿಲ್ಲ. ಏನೋ ಕಳೆದುಕೊಂಡವರಂತೆ, ಜೀವನದಲ್ಲಿ ಜಿಗುಪ್ಸೆಗೊಂಡವರಂತೆ ಜರ್ಝರಿತ ಮನಸ್ಕಳಾಗಿರುತ್ತಾರೆ. ವಿನಾಕಾರಣ ಉಂಟಾದ ಈ ವಿದ್ಯಮಾನ ಕೆಲವು ದಿನಗಳಾದರೂ ಸುಧಾರಣೆ ಕಂಡುಬರಲಿಲ್ಲವಾದ್ದರಿಂದ ಮನೆಯವರು ಅವರನ್ನು ಕೊನೆಗೆ ತಜ್ಞ ಮಹಿಳಾ ವೈದ್ಯರಲ್ಲಿ ತೋರಿಸಿದರು. ಸರಸ್ವತಿಬಾಯಿಯವರ ಬಗ್ಗೆ ತಿಳಿದುಕೊಂಡು ಪರೀಕ್ಷಿಸಿದ ಮಹಿಳಾ ವೈದ್ಯರು ತಟ್ಟನೆ ಅವರ ವಯಸ್ಸು ಮತ್ತು ಪ್ರತಿ ತಿಂಗಳು ಮುಟ್ಟಾಗುತ್ತಿರುವಿರಾ ಎಂದು ವಿಚಾರಿಸಿದರು. ೪೫ ವರ್ಷ ತುಂಬಿವೆ. ಇಂದಿಗೆ ಎರಡು ತಿಂಗಳಾದರೂ ಮುಟ್ಟಾಗಿಲ್ಲವೆಂದು ಸರಸ್ವತಿ ಬಾಯಿಯವರು ತಿಳಿಸಿದಾಗ, ವೈದ್ಯರು ನಗುತ್ತಾ ಇನ್ನು ಮೇಲೆ ನೀವು ಮುಟ್ಟಾಗುವುದಿಲ್ಲ. ನಿಮಗೆ ಶಾಶ್ವತವಾಗಿ ಮುಟ್ಟು ನಿಂತಿದೆ. ಈ ಹಂತದಲ್ಲಿ ಮಹಿಳೆಗೆ ಮಾನಸಿಕ ಖಿನ್ನತೆ ಸ್ವಾಭಾವಿಕ. ಈ ಅವಸ್ಥೆಗೆ ಮೆನೊಪಾಸ್ (Menopause) ಎನ್ನುತ್ತಾರೆ. ಮುಟ್ಟು ನಿಲ್ಲುವಿಕೆ ಅಥವಾ ಋತು ಚಕ್ರ ಸ್ಥಗಿತಗೊಳ್ಳುವ ಈ ಸ್ಥಿತಿಗೆ 'ಋತುಬಂಧ' ವೆನ್ನುವುದು ಎಂದು ತಿಳಿಸಿದರು.

ಜಗತ್ತಿನ ಎಲ್ಲ ಪ್ರಾಣಿ ಸಂಕುಲದಲ್ಲಿ ಜೀವ ವಿಕಾಸದ 'ಸಂತಾನ ವೃದ್ಧಿ'ಯ ಜೈವಿಕ ಕ್ರಿಯೆ ನಿರಂತರವಾಗಿ ಸಾಗುತ್ತಿರುತ್ತದೆ. ಪ್ರಾಣಿವರ್ಗದಲ್ಲಿ ತಮ್ಮ ಸಾವು ಬರುವವರೆಗೂ ಸಂತಾನವೃದ್ಧಿ ಮಾಡುತ್ತಲೇ ಇರುತ್ತವೆ. ನಮ್ಮ ಅತ್ಯಂತ ಸನಿಹದ ದಾಯಾದಿಗಳಾದ ಚಿಂಪಾಂಜಿ, ಗೊರಿಲ್ಲಾ ಪ್ರಭೇದಗಳಲ್ಲಿ ತಮ್ಮ ಜೀವಿತಾವಧಿಯ ಕೊನೆಯ ಹಂತದವರೆಗೂ ಋತುಸ್ರಾವದ

ಕ್ರಿಯೆ ಅವ್ಯಾಹತವಾಗಿ ಜರುಗುತ್ತಿರುತ್ತದೆ. ಪ್ರಾಣಿವರ್ಗದಲ್ಲಿ ತಾಯ್ತನಕ್ಕೆ ಮುದಿತನ ಎಂಬುದೇ ಇಲ್ಲ. ಮನುಷ್ಯ ಪ್ರಾಣಿ ಮಾತ್ರವೇ ಈ ನಿಯಮಕ್ಕೆ ಅಪವಾದ. ಮಧ್ಯ ವಯಸ್ಸು ಮೀರುವ ಮೊದಲೇ ಮಹಿಳೆಯರಲ್ಲಿ ಮುಟ್ಟು ನಿಂತು ಹೋಗುತ್ತದೆ. ಫಲವತ್ತತೆ ಬತ್ತಿ ಹೋಗುತ್ತದೆ. ಗರ್ಭಧಾರಣ ಶಕ್ತಿ ಇಲ್ಲವಾಗುತ್ತದೆ. ಮನುಷ್ಯ ಪ್ರಾಣಿಗೆ ಮಾತ್ರ ಯಾಕೆ ಈ ನಿಸರ್ಗ ಪಕ್ಷಪಾತ ಮಾಡಿದೆ?

ಸ್ತ್ರೀಯ ಅಂಡಾಶಯ ಕ್ರಿಯೆಯಲ್ಲಿ ಜರುಗುವ ಕ್ಷೀಣತೆಯಿಂದ ಈ ಋತುಬಂಧ ಅಥವಾ ಋತುಸ್ತಂಭನ ಸಂಭವಿಸುತ್ತದೆ. ಜೀವಿಯಲ್ಲಿ ಸಂಭವಿಸುವ ಉತ್ಕಟ ಬದಲಾವಣೆಯ ಕಾಲವಿದು. ಇದಕ್ಕೆ ಗಂಡಕಾಲ ಅಥವಾ ಪ್ರಜನನ ಸಾಮರ್ಥ್ಯಾಂತ್ಯ ಕಾಲವೆನ್ನುತ್ತಾರೆ. ವೈಜ್ಞಾನಿಕ ಪರಿಭಾಷೆಯಲ್ಲಿ ಸಂಧಿಕಾಲವೆನ್ನಬಹುದು. ಋತು ಬಂಧ ಪ್ರಕಟಗೊಳ್ಳುವ ಮೊದಲೇ ಸ್ತ್ರೀಯ ಅಂಡಾಶಯ ಕ್ರಿಯೆಯಲ್ಲಿನ ಕ್ಷೀಣತೆ ಒಂದೆರಡು ವರ್ಷಗಳಿಂದ ಪ್ರಾರಂಭಗೊಂಡಿರುತ್ತದೆ. ಕೆಲವರಲ್ಲಿ ಈ ಕ್ಷೋಭೆ ಐದು ವರ್ಷಗಳವರೆವಿಗೂ ಸಂಭವಿಸುತ್ತಿರುತ್ತದೆ.

ಋತುಬಂಧ ಸಾಮಾನ್ಯವಾಗಿ ಮಹಿಳೆಯರಲ್ಲಿ ೪೫ ರಿಂದ ೫೦ ವರ್ಷದೊಳಗೆ ಸಂಭವಿಸುತ್ತದೆ. ಸರಾಸರಿ ವಯಸ್ಸು ೪೭ ವರ್ಷ. ಕೆಲವು ಆರೋಗ್ಯವಂತ ಮಹಿಳೆಯರು ೫೫ ವರ್ಷಗಳವರೆವಿಗೂ ಮುಟ್ಟು(ಋತುಸ್ರಾವ) ಆಗುತ್ತಿರುತ್ತಾರೆ. ಋತುಬಂಧ ಪ್ರಾರಂಭದ ಈ ವೈಪರೀತ್ಯ ಅವಧಿಗೆ ಆನುವಂಶಿಕತೆ; ವ್ಯಕ್ತಿಯ ಆರೋಗ್ಯಸ್ಥಿತಿ; ಹವಾಗುಣ ಮತ್ತು ಆಹಾರಪದ್ಧತಿಗಳ ಮೇಲೆ ಅವಲಂಬಿತವಾಗುತ್ತದೆ. ವೈಜ್ಞಾನಿಕವಾಗಿ ಋತುಬಂಧ ಸಂಭವಿಸುವುದು ಸ್ತ್ರೀಯ ಅಂಡಾಶಯದಿಂದ ಹೊರದೂಡಲ್ಪಟ್ಟ ಅಂಡಾಣುವಿನ ಸ್ಥಾನದಲ್ಲಿ ಮತ್ತೊಂದು ಅಂಡಾಣು ರಚನೆಯ ಅಂತಸ್ರಾವಕ ಕೂಪ (ಕಾರ್ಪಸ್ ಲೂಟಿಯಮ್) ಮತ್ತು ಅಂಡಾಶಯದ ಗರ್ಭಮಾಸುವಿನಿಂದ ಸ್ರವಿಸುವ ಪ್ಯಾಜೆಸ್ಟ್ರಿನ್ ಎಂಬ ಪೀತವರ್ಣದ ಹಾರ್ಮೋನ್‌ಗಳ ಸ್ಥಗಿತವೇ ಮೆನೊಪಾಸ್‌ಗೆ ಕಾರಣ.

ಋತುಚಕ್ರ ಮತ್ತು ಲೈಂಗಿಕ ಪ್ರಕ್ರಿಯೆಯಲ್ಲಿ ಪ್ರಧಾನವಾಗಿ ಪಾತ್ರವಹಿಸುವ ಚೋದಕ ಹಾರ್ಮೋನ್ ಋತುಬಂಧ ಹಂತದಲ್ಲಿ ಸ್ತ್ರೀ ಅಂಡಾಶಯದಿಂದ ಅತ್ಯಲ್ಪ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ಅಂಡಾಶಯ ಮತ್ತು ಗರ್ಭಕೋಶಗಳು ಸಂಕುಚಿತಗೊಂಡು ಅಂಡವಾಹಕನಾಳ (fallopian tube) ಕ್ಷೀಣತೆಗೆ ಒಳಗಾಗುತ್ತದೆ. ಋತುಚಕ್ರದ ಸಮಯದಲ್ಲಿ ರಕ್ತ ಸ್ರವಿಸುವುದು ಕಡಿಮೆಯಾಗುತ್ತದೆ. ಋತುಚಕ್ರದ ಅವಧಿಯು ಮುಂದೂಡಲ್ಪಟ್ಟು ಎರಡು ಮುಟ್ಟಿನ ಅಂತರದಲ್ಲಿ ವಿಸ್ತಾರ ಕಂಡುಬರುವುದು. ಕೊನೆಗೆ ರಕ್ತಸ್ರಾವ ಮತ್ತು ಮುಟ್ಟು ಪೂರ್ಣವಾಗಿ ನಿಲ್ಲುವುದು. ಮುಟ್ಟು ನಿಂತ ಆರು ತಿಂಗಳನಂತರ ಏನಾದರೂ ರಕ್ತಸ್ರಾವವಾದರೆ ವೈದ್ಯಕೀಯ ಚಿಕಿತ್ಸೆ ನೀಡಬೇಕಾಗುತ್ತದೆ.

ಋತುಬಂಧ ಘಟ್ಟದಲ್ಲಿ ಸ್ತ್ರೀ ಯೋನಿಯ ಸುತ್ತಲಿನ ರೋಮಸಾಂದ್ರತೆ ಕಡಿಮೆಯಾಗುತ್ತಾ, ಬಿಳಿಗೂದಲು ಕಾಣಿಸಿಕೊಳ್ಳುತ್ತವೆ. ಯೋನಿಯ ಒಳಭಾಗ

ಕಿರಿದುಗೊಳ್ಳುವುದು ಮತ್ತು ಗರ್ಭಕೋಶದ ಕಂಠ ಸಂಕುಚಿತಗೊಳ್ಳುವುದು. ಕಿಬ್ಬೊಟ್ಟೆಯೊಳಗಿನ ಅಂಗಾಂಶ(ಟಿಶ್ಯು) ಮತ್ತು ಅಸ್ಥಿರಜ್ಜುವಿನ ಪ್ರಮಾಣ ಕುಂಠಿತಗೊಂಡು ಗರ್ಭಕೋಶ ಮತ್ತು ಯೋನಿ ಒಳಭಾಗ ಸಡಿಲಗೊಳ್ಳುತ್ತದೆ. ಈ ದಿಶೆಯಲ್ಲಿ ಬೆನ್ನುನೋವು; ಕೀಲು ನೋವು; ರಕ್ತದ ಒತ್ತಡ; ಹೃದಯ ಬೇನೆಗಳು ಕಾಣಿಸಿಕೊಳ್ಳುತ್ತವೆ. ಸ್ತನ, ಜಘನ ಮತ್ತು ಕೆಳಹೊಟ್ಟೆ ಭಾಗಗಳಲ್ಲಿ ಕೊಬ್ಬಿನಂಶ ಸಂಗ್ರಹವಾಗಿ ಗಾತ್ರ ಹೆಚ್ಚುವುದು ಮತ್ತು ಆ ಭಾಗಗಳು ಸಡಿಲಗೊಳ್ಳುವುವು. ಜೊತೆಗೆ ಕೆಲವರಿಗೆ ತುಟಿ, ಕೆನ್ನೆಗಳಲ್ಲಿ ರೋಮಗಳು ಕಾಣಿಸಿಕೊಂಡು, ಚರ್ಮದಲ್ಲಿ ಸುಕ್ಕುಗೆರೆಗಳು ಮೂಡಲಾರಂಭಿಸುತ್ತವೆ. ಋತುಬಂಧ ಸಮೀಪಿಸುವ ಅವಧಿಯಲ್ಲಿ ಕೆಲವು ಸ್ತ್ರೀಯರಿಗೆ ಋತುಚಕ್ರ ಒಮ್ಮೆಲೇ ಸ್ಥಗಿತಗೊಂಡರೆ, ಕೆಲವು ಸ್ತ್ರೀಯರಿಗೆ ರಜಸ್ವಲೆಯಲ್ಲಿ ರಕ್ತಸ್ರಾವದ ಪ್ರಮಾಣ ಹಂತಹಂತವಾಗಿ ಕಡಿಮೆಗೊಂಡು ನಂತರದಲ್ಲಿ ಋತು ಬಂಧ ಸಂಭವಿಸುತ್ತದೆ. ಇನ್ನು ಕೆಲವರಲ್ಲಿ ಋತುಚಕ್ರದ ಅವಧಿಯಲ್ಲಿ ಅಂತರ ಹೆಚ್ಚಾಗಿ ಕೊನೆಗೆ ಸುಮಾರು ಆರು ತಿಂಗಳ ಅಂತರ ಸಮೀಪಿಸಿ, ನಂತರ ಪೂರ್ಣ ಋತುಬಂಧ ಪ್ರಕಟವಾಗುವುದು.

ದಿನದಲ್ಲಿ ಹಲವು ಬಾರಿ ಮುಖ ಮತ್ತು ಕತ್ತು ಭಾಗದಲ್ಲಿ ರಕ್ತ ಚಲನೆ ತೀವ್ರಗೊಂಡು ಬೆವರು ಪ್ರವಹಿಸುತ್ತದೆ. ಹೆದರಿಕೆ, ನಡುಕ ಸ್ವಭಾವದ ಸ್ತ್ರೀಯರಲ್ಲಿ ಈ ಕ್ರಿಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ರಾತ್ರಿ ಮಲಗುವಾಗಲೂ ಈ ರೀತಿಯ ಬೆವರು ಪ್ರಕೃತಿ ಹೆಚ್ಚು. ಹೃದಯ ಬಡಿತದಲ್ಲಿ ಏರುಪೇರಾಗಿ ಮಾನಸಿಕ ಖಿನ್ನತೆ ಪ್ರಕಟಗೊಳ್ಳುವುದು. ಪ್ಯಾರಸ್ತೇನಿಯ (ಅಪಸಾಮಾನ್ಯ ಸಂವೇದನೆ) ದ ಪರಿಣಾಮಗಳಾದ ಮೈ ಜುಮ್ಮೆನ್ನುವುದು, ಕಚಗುಳಿಯಿಟ್ಟಂತೆ ಅಥವಾ ಮೈಮೇಲೆ ಇರುವೆ ಹರಿದಾಡಿದಂತೆನಿಸುತ್ತದೆ. ಕೆಲವೊಮ್ಮೆ ಮೈ ಚುಚ್ಚಿದಂತೆ ಭಾಸವಾಗುವುದು. ಇದರಿಂದಲೂ ಮಾನಸಿಕ ಖಿನ್ನತೆ (ಡಿಪ್ರೆಷನ್) ಮತ್ತು ವಿಷಣ್ಣತೆ (ಮೆಲಾಂಕಲಿಯ) ಗೆ ಋತುಬಂಧದ ಸ್ತ್ರೀಯರು ಒಳಗಾಗುತ್ತಾರೆ.

ಮತ್ತೊಂದು ಕುತೂಹಲದ ಸಂಗತಿಯೆಂದರೆ ಜನಸಾಮಾನ್ಯರು ತಿಳಿದಿರುವಂತೆ ಋತುಬಂಧದ ಘಟ್ಟ ಮುಟ್ಟಿದ ಮೇಲೆ ಲೈಂಗಿಕ ಭಾವನೆಗಳು, ಲೈಂಗಿಕಾಸಕ್ತಿ ಇಲ್ಲವಾಗುವುವು ಎಂಬ ನಂಬಿಕೆ ಸುಳ್ಳು. ಮೂತ್ರಪಿಂಡಗಳ ಮೇಲೆ ಕುಲಾವಿಯಂತೆ ಇರುವ ಅಡ್ರಿನಲ್ ಗ್ರಂಥಿಗಳು ಸ್ರವಿಸುವ ಆಂಡ್ರೋಜೆನ್ ಬೋದಕಗಳು ಋತುಬಂಧ ಸ್ತ್ರೀಯರಲ್ಲಿ ಹೆಚ್ಚಾಗಿ ಲೈಂಗಿಕಾಸಕ್ತಿ ಅಧಿಕಗೊಳ್ಳುವುದು. ಕಾಲಕ್ರಮೇಣದಲ್ಲಿ ಅದು ಕಡಿಮೆಗೊಳ್ಳುವುದು ಅಥವಾ ಸಾಮಾಜಿಕ ಕಾರಣಗಳಿಂದ ಮುದಿರಿಟ್ಟುಕೊಳ್ಳುವುದು ಸಾಮಾನ್ಯ. ಋತುಬಂಧ ಸಮೀಪಿಸುವ ಅಥವಾ ಘಟಿಸಿರುವ ಸ್ತ್ರೀಯರಿಗೆ ಈ ಚರ್ಯೆಗಳ ಬಗ್ಗೆ ತಿಳುವಳಿಕೆಯಿರದೆ, ಬೇರೆಯವರು ಇದನ್ನು ವಿವರಿಸಿ ತಿಳಿಹೇಳಲಾಗದೆ ಅಂಥಹ ಸ್ತ್ರೀಯರು ಮನೋಕ್ಷೋಭೆಗೆ ಒಳಗಾಗುತ್ತಾರೆ. ಆಸ್ಟ್ರೋಜೆನ್ ಗ್ರಂಥಿಗಳು ಋತುಬಂಧ ಸ್ತ್ರೀಯರಲ್ಲಿ ಕುಂಠಿತವಾಗುತ್ತಾ, ಮೂಳೆಯಲ್ಲಿನ ಕ್ಯಾಲ್ಷಿಯಮ್‌ನ ಕೊರತೆ ಕಾಣಿಸಿಕೊಂಡು ಬೆನ್ನು ನೋವು, ಕೀಲುನೋವುಗಳು ಉಂಟಾಗುತ್ತವೆ.

ಜೊತೆಗೆ ಮೂತ್ರಕೋಶ, ಮೂತ್ರನಾಳನಲ್ಲಿ ಉರಿ ಕಾಣಿಸಿಕೊಳ್ಳುವುದು ಮತ್ತು ಯೋನಿ ಒಳಭಾಗ ಶುಷ್ಕವಾಗಿರುವುದು ಸಾಮಾನ್ಯ ಲಕ್ಷಣಗಳು.

ಚಿಕಿತ್ಸೆ :

ಋತುಬಂಧದ ವೈಪರೀತ್ಯ ಪರಿಣಾಮದ ಅಸ್ವಸ್ಥತೆಗೆ ಕೆಲವು ಚಿಕಿತ್ಸೆಗಳನ್ನು ವೈದ್ಯರು ನೀಡುತ್ತಾರೆ. ಜೊತೆಗೆ ಸೂಕ್ತ ಸಲಹೆ-ತಿಳುವಳಿಕೆ ನೀಡಿ ಮಾನಸಿಕ ತುಮುಲತೆಯನ್ನು ಶಮನಗೊಳಿಸುತ್ತಾರೆ.

೧. ಮಾನಸಿಕ ಖಿನ್ನತೆ ಮತ್ತು ಕ್ಯಾನ್ಸರ್ ಭೀತಿಯಿರುವ ಋತುಬಂಧ ಸ್ತ್ರೀಯರಿಗೆ ಶಮನಕಾರಿ ಮದ್ದನ್ನು ತಜ್ಞವೈದ್ಯರು ನೀಡುತ್ತಾರೆ. ಹೃದಯ ಬಡಿತ, ಸ್ತನಪರೀಕ್ಷೆ, ಸ್ಫೆಕ್ಯುಲಮ್ ಉಪಕರಣ ಬಳಸಿ ಯೋನಿ ಒಳಭಾಗದ ಕಟ್ಟಸ್ಥಿ (ಪೆಲ್ವಿಕ್) ಪರೀಕ್ಷೆ, ಕೋಶಾಂಶ ಪರೀಕ್ಷೆ, ರಕ್ತದ ಒತ್ತಡ, ರಕ್ತದಲ್ಲಿನ ಸಕ್ಕರೆ ಪ್ರಮಾಣ ಪರೀಕ್ಷೆಗಳನ್ನು ಈ ಸಂದರ್ಭದಲ್ಲಿ ಕೈಗೊಂಡು ಚಿಕಿತ್ಸೆ ನೀಡುತ್ತಾರೆ. ಇದು ಪ್ರಾರಂಭಘಟ್ಟದಲ್ಲಿ ಮಾತ್ರ. ಕಾಲಾನುಕ್ರಮವಾಗಿ ರೋಗಿಯಲ್ಲಿ ಇವುಗಳು ಸಹಜವಾಗಿ ಶಮನಗೊಳ್ಳುವುವು.

೨. ನಿದ್ರಾಭಂಗ, ಬೆವರುವಿಕೆ , ಹೃದಯ ಬಡಿತದ ಹೆಚ್ಚಳ ಇತ್ಯಾದಿ ಲಕ್ಷಣಗಳಿಗೆ ಆಸ್ಟ್ರೋಜಿನ್ ನೀಡುವ ಚಿಕಿತ್ಸೆಕೊಡಲಾಗುವುದು. ಆರು ತಿಂಗಳಿಗೊಮ್ಮೆ ನೀಡುವ ಈ ಚಿಕಿತ್ಸೆಯಿಂದ ಅಡ್ಡ ಪರಿಣಾಮಗಳು ಸಂಭವಿಸುವ ಪ್ರಮೇಯವಿದ್ದು ಬಹಳ ಸುರಕ್ಷಣ ಕ್ರಮದಿಂದ ಮತ್ತು ತೀವ್ರನಿಗಾವಣೆಯಲ್ಲಿ ಚಿಕಿತ್ಸೆ ಪಡೆಯಬೇಕು. ಇಲ್ಲವಾದರೆ ಯಕೃತ್ತು ಪಿತ್ಥಕೋಶ, ಸ್ತನ ಕ್ಯಾನ್ಸರ್, ರಕ್ತಸ್ರಾವ ಮೊದಲಾದ ಸಮಸ್ಯೆಗಳು ಉದ್ಭವಿಸುವ ಶಕ್ಯವಿದೆ. ಜೊತೆಗೆ ಕ್ಲೊನಿಡೈನ್ ಮತ್ತು ಆಂಡ್ರೊಜಿನ್ ಮುಂತಾದ ಚಿಕಿತ್ಸೆಗಳನ್ನು ಅಗತ್ಯವಿದ್ದಲ್ಲಿ ಋತುಬಂಧ ಸ್ತ್ರೀಯರ ಸಮಸ್ಯೆಗೆ ಲೈಂಗಿಕ ತಜ್ಞ ವೈದ್ಯರು ನೀಡುತ್ತಾರೆ.

ಇತರ ಪ್ರಾಣಿಗಳಲ್ಲಿ ಹುಟ್ಟಿದ ಶಿಶುಗಳು ಅಲ್ಪಕಾಲದಲ್ಲೇ ತಾಯಿ-ತಂದೆ ಪೋಷಣೆ ಮತ್ತು ಆಶ್ರಯದಿಂದ ದೂರವಾಗುತ್ತವೆ. ಕೆಲವು ಪ್ರಾಣಿಗಳು ಹುಟ್ಟಿದಾಕ್ಷಣವೇ ಪ್ರತ್ಯೇಕವಾಗಿ ಸ್ವತಂತ್ರ ಜೀವನ ಸಾಗಿಸುತ್ತವೆ. ಮನುಷ್ಯರ ಮಕ್ಕಳು ಹದಿನೈದು ವರ್ಷಗಳವರೆಗೂ, ಅಂದರೆ ಬುದ್ಧಿಮತ್ತೆ ಸಾಕಷ್ಟು ವಿಕಾಸ ಆಗುವವರೆಗೂ ತಾಯಿಯ ಆಸರೆಯಲ್ಲೇ ಬೆಳೆಯುತ್ತಿರುತ್ತಾರೆ. ನಿಸರ್ಗ ತಾನೇ ರೂಪಿಸಿದ ಈ ವ್ಯವಸ್ಥೆಯಲ್ಲಿ ತಾಯಿ ಎನಿಸಿದವಳು ಹೆಚ್ಚು ಮಕ್ಕಳನ್ನು ಹೆರುತ್ತ ಹೋಗುವ ಹಾಗಿಲ್ಲ, ಬದಲಿಗೆ ತನಗೆ ಜನಿಸಿದ ಕೆಲವೇ ಮಕ್ಕಳನ್ನು ಸದೃಢಮಾಡಿ, ಅವುಗಳ ಮಕ್ಕಳೂ ಅಂದರೆ ಮೊಮ್ಮಕ್ಕಳೂ ಅಷ್ಟೇ ಕುಶಲವಾಗಿ ಬೆಳೆಯುವಂತೆ ಮಾಡಿದರೆ ಮಾತ್ರ ವಂಶವೃಕ್ಷ ಬೆಳೆಯುತ್ತ ಹೋಗುತ್ತದೆ.

ಇತರ ಪ್ರಾಣಿಗಳು ತಮ್ಮ ಗಮನವನ್ನು ಮೊದಲ ಪೀಳಿಗೆಗೆ ಮಾತ್ರ ಕೊಟ್ಟಿದ್ದರೆ, ಮನುಷ್ಯ ಪ್ರಾಣಿಗಳು ಎರಡು ಹಾಗೂ ಮೂರನೇ ಪೀಳಿಗೆಯ ಮಕ್ಕಳ ಯೋಗಕ್ಷೇಮವನ್ನು

ನೋಡುತ್ತವೆ. ಈ ವ್ಯವಸ್ಥೆಗೆ ಕಟ್ಟು ಬಿದ್ದ ಮನುಷ್ಯ ಜೀವಿಗಳು ಮೊಮ್ಮಕ್ಕಳಿಗಾಗಿ ವಿಶೇಷ ಕಾಳಜಿ ನೀಡಬೇಕಾಗುತ್ತದೆ. ಸ್ವಂತ ಮಕ್ಕಳನ್ನು ಹೆರುತ್ತಿದ್ದರೆ ಈ ಕೆಲಸ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ನಿಸರ್ಗ ತಾನೇ ಮುಂದಾಗಿ ನಲ್ವತ್ತು ದಾಟಿದ ಮಹಿಳೆಯರು ಮೊಮ್ಮಕ್ಕಳತ್ತ ಗಮನ ಹರಿಸಲು ಸಾಧ್ಯವಾಗುವಂತೆ ಅಂಥವರ ಗರ್ಭಧಾರಣಾ ವ್ಯವಸ್ಥೆಯನ್ನು ಸ್ಥಗಿತಮಾಡುತ್ತದೆ.

ಬೇಗ ಋತು ಬಂಧ ಸಂಭವ ಮತ್ತು ಋತು ಚಕ್ರ ಪ್ರಾರಂಭ ಇವುಗಳಿಗೆ ಮನುಷ್ಯ ಅಳವಡಿಸಿಕೊಂಡಿರುವ ಕೆಲವು ಹೆಚ್ಚುವರಿ ವಿಧಾನಗಳಾದ ಆಹಾರಪದ್ಧತಿ, ಬೇಯಿಸಿ ತಿನ್ನುವುದು, ಬಟ್ಟೆ ಧರಿಸುವುದು ಮತ್ತು ಸಂತಾನ ನಿಯಂತ್ರಣ ಕ್ರಮಗಳು ಇತ್ಯಾದಿ ಸಹ ಪರಿಣಾಮ ಬೀರುತ್ತವೆ. ಕಾರಣ, ಮನುಷ್ಯನ ಹೊರತಾಗಿ ಇನ್ಯಾವ ಜೀವಕೋಟಿಯು ಆಹಾರವನ್ನು ಬೇಯಿಸಿ ತಿನ್ನುವುದಿಲ್ಲ. ಬಟ್ಟೆ ಧರಿಸುವುದಿಲ್ಲ. ಸಂತಾನ ನಿಯಂತ್ರಣ ಕ್ರಮವನ್ನು ಅನೈಸರ್ಗಿಕ ವಿಧಾನದಲ್ಲಿ ಬಳಸುವುದಿಲ್ಲ. ಈ ಅನೈಸರ್ಗಿಕ ಪದ್ಧತಿಯಿಂದಲೇ ಋತುಸ್ರಾವದಲ್ಲಿ ಏರು-ಪೇರು, ರಕ್ತಸ್ರಾವ - ಅಧಿಕ, ಪ್ರಸವ ಅವಧಿಯಲ್ಲಿ ರಕ್ತ ಹೋಗುವಿಕೆ, ಮಕ್ಕಳ ಹೊಕ್ಕಳು ಬಳ್ಳಿಯನ್ನು ಕತ್ತರಿಸಬೇಕಾಗುವುದು, ದಂತಕ್ಷಯ, ಲೈಂಗಿಕ ಹಾಗೂ ಮಾನಸಿಕ ರೋಗಗಳು ಹೊಸದಾಗಿ ಹುಟ್ಟಿಕೊಂಡಿವೆ. ಸಾಮಾಜಿಕ ಕಟ್ಟುಪಾಡುಗಳು ಜಾಸ್ತಿಯಾಗಿವೆ. ಬೆಂಕಿ ಮತ್ತು ಬಟ್ಟೆ ಆವಿಷ್ಕಾರಗಳು ಮನುಷ್ಯನ ಜೀವನಕ್ರಮ ಮತ್ತು ಜೈವಿಕ ಸ್ಥಿತಿ-ಗತಿಗಳ ಮೇಲೆ ಅಪಾರ ಪರಿಣಾಮವನ್ನು ಉಂಟುಮಾಡಿವೆ.

ಆದ್ದರಿಂದ ಋತುಬಂಧ ಸ್ತ್ರೀಯರನ್ನು ಸಾಮಾಜಿಕವಾಗಿ ಮತ್ತು ವೈಜ್ಞಾನಿಕವಾಗಿ ಸರಿಯಾಗಿ ಅರ್ಥಮಾಡಿಕೊಂಡು, ಕುಟುಂಬದವರು ಮತ್ತು ಸಮಾಜ ಅವರನ್ನು ಗೌರವದಿಂದ ಪ್ರೀತಿ ವಿಶ್ವಾಸದಿಂದ ಕಾಣಬೇಕು. ಶುಭ-ಅಶುಭ ಕಾರ್ಯಗಳಲ್ಲಿ ಅವರನ್ನು ಪ್ರತ್ಯೇಕಿಸಿ ನೋಡುವ, ಕೆಲವು ಸಾಮಾಜಿಕ ಕಾರ್ಯಕ್ರಮಗಳಲ್ಲಿ ನಿರ್ಬಂಧಿಸುವ ಮತ್ತು ಅವರನ್ನು ಋತುಬಂಧದ ನಂತರ ಅನರ್ಹ ಅಥವಾ ಅಪ್ರಯೋಜಕಳೆಂದು ಭಾವಿಸುವುದಾಗಲಿ ಭೇದಿಸುವುದಾಗಲಿ ಸರ್ವಥಾ ತಪ್ಪು.

★

ನಾಗ ಪವಾಡ ~~~~~~~~~~~~~~~~~~~~~~~~~~~~~~~

ಸಾರ್ವಜನಿಕ ಮತ್ತು ಮಾಧ್ಯಮ ವಲಯಗಳಲ್ಲಿ ಬಿರುಗಾಳಿಯಂತೆ ಸುದ್ದಿಯೊಂದು ಹರಡಿತು. ಸಾವಿರಾರು ಜನರು ಘಟನೆಯ ಸ್ಥಳಕ್ಕೆ ಧಾವಿಸತೊಡಗಿದರು. ದಿನದಿನಕ್ಕೆ ಈ ಕುತೂಹಲದ ಪವಾಡ ವೀಕ್ಷಿಸಲು ಆಗಮಿಸುವ ಜನರ ಸಂಖ್ಯೆ ಅಧಿಕಗೊಳ್ಳುತ್ತಿತ್ತು. ಪತ್ರಿಕೆ ಮತ್ತು ಟಿ.ವಿ. ಮಾಧ್ಯಮ ಸಮೂಹ ಸ್ಥಳಕ್ಕೆ ಭೇಟಿ ನೀಡಿ, ಈ ಕೌತುಕವನ್ನು ವೈಭವೀಕರಿಸಿ ಆಗತ್ಯಕ್ಕಿಂತ ಹೆಚ್ಚಿನ ಪ್ರಚಾರ ನೀಡಿದರು. ಕೋಲಾಹಲದ ಸುದ್ದಿಯನ್ನಾಗಿಸಿದರು. ರಾಜ್ಯ ಸರ್ಕಾರದ ಮಂತ್ರಿವರ್ಯರು ಸ್ಥಳಕ್ಕೆ ಭೇಟಿ ನೀಡಿ , ಧಾರ್ಮಿಕದತ್ತಿ ಇಲಾಖೆಯ ವತಿಯಿಂದ ೪ ಲಕ್ಷ ರೂಪಾಯಿಗಳ ನೆರವು ಮಂಜೂರು ಮಾಡುವ ಆಶ್ವಾಸನೆ ನೀಡಿದರು.

ಮಾನ್ವಿ ತಾಲ್ಲೂಕಿನ ಚಿಮಲಾಪುರ ಗ್ರಾಮದ ಶರಣಪ್ಪಗೌಡ ಹಾವು ಹಿಡಿಯುವುದರಲ್ಲಿ ನಿಷ್ಣಾತ. ಆತನನ್ನು ಪಕ್ಕದ ಊರಾದ ಕರಡಿಗುಡ್ಡ ಗ್ರಾಮದ ರಾಮಣ್ಣ ನಾಯಕ ತನ್ನ ಮನೆಯೊಳಗೆ ನುಸುಳಿದ ಹಾವೊಂದನ್ನು ಹಿಡಿದುಕೊಂಡು ಹೋಗಲು ಈತನನ್ನು ಕರೆಸಿದ. ಶರಣಪ್ಪ ಗೌಡ ಆತನ ಮನೆಗೆ ಬಂದು, ಹಾವು ಹಿಡಿಯುವ ಸೋಗುಹಾಕಿ ಮಧ್ಯೆ-ಮಧ್ಯೆ ಅದು ಆತನ ಕೈಯಿಂದ ತಪ್ಪಿಸಿಕೊಳ್ಳುವಂತೆ ಮಾಡಿ ಅದು ಪವಾಡ ಸದೃಶವಾಗಿ ಆತನ ಕೈಯಿಂದ ಮಾಯವಾಗಿ ಮತ್ತೊಂದೆಡೆ ಕಾಣಿಸಿಕೊಳ್ಳುವ ಕುತೂಹಲವನ್ನು ಪ್ರದರ್ಶಿಸಿದ. ಜೊತೆಗೆ ಆತನ ಮೈಮೇಲೆ ಆ ಪ್ರದೇಶಗಳಲ್ಲಿ ಪವಾಡ ಪ್ರವಾದಿಯೆಂದು ಆರಾಧಿಸಿಕೊಳ್ಳುವ 'ಉಟಕನೂರು ತಾತ' ಕಾಣಿಸಿಕೊಂಡಂತೆ ನಟಿಸಿ, ಪ್ರಸಿದ್ಧ ಪವಾಡ ಪುರುಷ, 'ಉಟಕನೂರು ತಾತ' ಈ ಹಾವಿನ ರೂಪದಲ್ಲಿ ನಿಮ್ಮ ಮನೆಗೆ ಆಗಮಿಸಿದ್ದಾನೆಂದು ನಂಬಿಸಿದ. ಸ್ಥಳೀಯ ಸುತ್ತಮುತ್ತ ಗ್ರಾಮಗಳಲ್ಲಿ ಉಟಕನೂರು ತಾತ ಎಂದರೆ ತುಂಬಾ ಭಯಭಕ್ತಿ. ಆ ಪ್ರವಾದಿ ೬೦ ವರ್ಷಗಳ ಹಿಂದೆ ತೀರಿಹೋಗಿ ಆತನ ನೆನಪಿನಲ್ಲಿ ಉಟಕನೂರಿನಲ್ಲಿ ಗದ್ದುಗೆ ಕಟ್ಟಿಸಿ, ಭಕ್ತಾದಿಗಳು ಭೇಟಿನೀಡಿ ಪೂಜೆ ಸಲ್ಲಿಸುತ್ತಾರೆ. ಪ್ರತಿ ನಾಗರಪಂಚಮಿಗೊಮ್ಮೆ ಹಾವಿನ ರೂಪದಲ್ಲಿ ಬಂದು ಭಕ್ತಾದಿಗಳಿಗೆ 'ದರ್ಶನ' ನೀಡುವನೆಂದು ಸ್ಥಳೀಯರ ನಂಬಿಕೆ.

ಶರಣಪ್ಪ ಗೌಡ ಜನರ ಈ ನಂಬಿಕೆಯನ್ನೇ ಬಂಡವಾಳ ಮಾಡಿಕೊಂಡು ಕಾರ್ಯಯೋಜನೆಯೊಂದನ್ನು ರೂಪಿಸಿ ಹಣಗಳಿಸುವ ತಂತ್ರವನ್ನು ಅಳವಡಿಸಿಕೊಂಡ. ಈ ರೀತಿ ಭಯಭಕ್ತಿಯನ್ನು ರಾಮಣ್ಣ ನಾಯಕರ ಮನೆಯವರಿಗೆ ಹುಟ್ಟಿಸಿ ಸಾಕಷ್ಟು ಹಣ ಕಿತ್ತುಕೊಂಡು ಕೊನೆಗೆ ಹಾವು ಹಿಡಿದ. ಜೊತೆಗೆ ಕಾಲುಭಾಗ ನೀರು ತುಂಬಿದ ಒಂದು ಸ್ಟೀಲ್ ಡ್ರಮ್‌ನಲ್ಲಿ ಅದನ್ನು ಹಾಕಿ ಅದು ಸಾಯುವವರೆವಿಗೂ ನಿತ್ಯ ಪೂಜೆ ಮಾಡಲು ಊರಿನವರಿಗೆ

ಆಜ್ಞಾಪಿಸಿದ. ಅದು ಸತ್ತನಂತರ ಹರಕೆ ತೀರಿಸುವಂತೆ ಉಟಕನೂರಿನ ತಾತನ ಹೆಸರಿನಲ್ಲಿ ಅದಕ್ಕೆ ಸಮಾಧಿ ನಿರ್ಮಿಸಲು ಆಗ್ರಹಿಸಿದ.

ಅದರಂತೆ ಭಯಗ್ರಸ್ಥನಾದ ರಾಮಣ್ಣ ನಾಯಕ ಹಾವು ಸತ್ತನಂತರ ಸಮಾಧಿ ನಿರ್ಮಿಸಿಕೊಟ್ಟ. ಇದನ್ನೇ ಉಪಯೋಗಿಸಿಕೊಂಡು 'ಪವಾಡವನ್ನು ಪ್ರಚುರಪಡಿಸಿದ ಶರಣಗೌಡ, ಕರಡಿಗುಡ್ಡ ಗ್ರಾಮವನ್ನು ತನ್ನ ಪವಾಡದ ಕೇಂದ್ರ ಸ್ಥಳವನ್ನಾಗಿ ಪರಿವರ್ತಿಸಿದ. ಗ್ರಾಮದ ಹಳೇ ಹನುಮನ ಗುಡಿಯನ್ನು ಪವಾಡ ಪ್ರದರ್ಶನದ ಪ್ರಾತ್ಯಕ್ಷತೆಗೆ ಆಯ್ಕೆಮಾಡಿಕೊಂಡ.

ಆ ಸಂದರ್ಭದಲ್ಲಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಎಲ್ಲಿಯೇ ಹಾವು ಕಾಣಿಸಿಕೊಂಡರೂ ತಕ್ಷಣ ಜನರು ಬಂದು ಈತನಿಗೆ ತಿಳಿಸುತ್ತಿದ್ದರು. ಈತ ತನ್ನ ಸಂಗಡಿಗರೊಡನೆ ಹೋಗಿ ಅದನ್ನು ಹಿಡಿದು ಉಟಕನೂರು ತಾತನ ಹೆಸರಿನಲ್ಲಿ ಅದನ್ನು ಮೆರವಣಿಗೆ ಮೂಲಕ ಕರಡಿಗುಡ್ಡದ ಹನುಮದೇವರ ಗುಡಿಗೆ ತರುತ್ತಿದ್ದ. ಅದನ್ನು ಮತ್ತೊಂದು ನೀರಿನ ಡ್ರಮ್ಮಿಗೆ ಹಾಕಿ ಸದಾ ಪೂಜಿಸಿ, ಅದು ಸತ್ತ ನಂತರ ಮತ್ತೊಬ್ಬ ಭಕ್ತರ ಮೂಲಕ ಸಮಾಧಿ ನಿರ್ಮಿಸುತ್ತಿದ್ದ. ಅದೇ ರೀತಿ ೧೦೧ ಸಮಾಧಿಗಳನ್ನು ನಿರ್ಮಿಸಿ ಪೂಜಿಸುವ ಮತ್ತು ಅವುಗಳನ್ನೊಳಗೊಂಡಂತೆ ಒಂದು ಭವ್ಯ ದೇವಾಲಯ ನಿರ್ಮಿಸುವ ಹುನ್ನಾರ ಶರಣಪ್ಪ ಗೌಡನದು.

ಈ ಹುನ್ನಾರದಲ್ಲಿ ಆತ ಹಿಡಿದು ತರುತ್ತಿದ್ದುದು ಹೆಚ್ಚಾಗಿ ವಿಷರಹಿತ ಹಾವುಗಳನ್ನು ಮಾತ್ರ. ವಿಷಪೂರಿತ ಮಿಡಿ ನಾಗರ ಅಥವಾ ಕಾಳಿಂಗ ಸರ್ಪ ಇಂತಹವುಗಳನ್ನು ಜಾಣ್ಮೆಯಿಂದ ಹಿಡಿಯುತ್ತಿರಲಿಲ್ಲ. ಆದರೂ ಭಕ್ತಾದಿಗಳಿಗೆ ನಂಬಿಸಲು ಯಾರಿಗೂ ಕಾಣದ ಹಾಗೆ ವೃತ್ತಿನಿರತ ಹಾವಾಡಿಗರಿಂದ ಹಲ್ಲುಕಿತ್ತ ನಾಗರ ಹಾವುಗಳ ಒಂದೆರಡನ್ನು ತಂದು ನೀರಿನ ಡ್ರಮ್ಮಿನಲ್ಲಿ ಬಿಟ್ಟು ಜನರಿಗೆ ತೋರಿಸುತ್ತಿದ್ದ. ಬಂದ ಭಕ್ತಾದಿಗಳಿಗೆ ಅವರ ಕಾಣಿಕೆ ಪ್ರಮಾಣ ಆಧರಿಸಿ ಅವರಿಗೆ ನೀರಿನ ಡ್ರಮ್ಮಿನಲ್ಲಿ ಮುಚ್ಚಲ್ಪಟ್ಟ ಹಾವುಗಳನ್ನು ಮುಚ್ಚಳ ತೆಗೆದು 'ತಾತನ ದರ್ಶನ'ವೆಂದು ತೋರಿಸುತ್ತಿದ್ದ. ತಾತನ ಹೆಸರನ್ನು ಮಂತ್ರಿಸಿ ಪುನರುಚ್ಚರಿಸಿದರೆ ಅವು ಕಚ್ಚುವುದಿಲ್ಲವೆಂದು ಎತ್ತಿ ತೋರಿಸುತ್ತಿದ್ದ. ಹೆಚ್ಚು ಹಣಕೊಟ್ಟವರಿಗೆ ಮತ್ತು ಗಣ್ಯರಿಗೆ ಭುಜದ ಮೇಲೆ ಹಾವೊಂದನ್ನು ಹಾಕಿ 'ತಾತ'ನ ಹೆಸರೇಳುವಂತೆ ಮಾಡಿ ಆದರಿಂದ ಅವರ ಇಷ್ಟಾರ್ಥಗಳು ಈಡೇರುವುದೆಂದು ಕಾಣಿಕೆ ಕೀಳುತ್ತಿದ್ದ. ನೀರಿನ ಡ್ರಮ್ಮಿನಲ್ಲಿ ಕೂಡಿಹಾಕಿದ ಹಾವುಗಳು ಆಹಾರವಿಲ್ಲದೆ ಉಸಿರಾಟ ತೊಂದರೆಯಿಂದ ಊದಿಕೊಂಡು ಬೂದು(ಕಂದು ಮಿಶ್ರಿತ) ಬಣ್ಣಕ್ಕೆ ತಿರುಗಿಕೊಂಡಿದ್ದವು. ಮನುಷ್ಯರ ದೇಹದ ಮೇಲೆ ಬಿಟ್ಟಾಗ ಅರೆಜೀವದಿಂದ ತುಸುವೇ ತೆವಳುತ್ತಿದ್ದವು. ಒಂದೆರಡು ವಾರಗಳಲ್ಲಿ ಸತ್ತುಹೋಗುತ್ತಿದ್ದವು.

ಆ ತರಹ ಹಾವುಗಳಿದ್ದ ಡ್ರಮ್ಮುಗಳು ಕೇವಲ ಹತ್ತು ಹದಿನೈದಿದ್ದು ಉಳಿದ ಅನೇಕ

ಡ್ರಮ್ಮುಗಳು ಖಾಲಿಯಾಗಿರುತ್ತಿದ್ದವು. ಅವುಗಳನ್ನು ಮುಚ್ಚಳ ತೆಗೆದು ತೋರಿಸುತ್ತಿರಲಿಲ್ಲ. ಅಪಾಯದ ಹಾವುಗಳಿವೆಯೆಂದು ಜನರಿಗೆ ನಂಬಿಸಿ ಹೆದರಿಸುತ್ತಿದ್ದ. ಎಷ್ಟೋ ಸಂದರ್ಭಗಳಲ್ಲಿ ತನ್ನ ಸಹಾಯಕರ ಮೂಲಕ ಸತ್ತ ಹಾವುಗಳನ್ನು ರಾತ್ರೋರಾತ್ರಿ ತರಿಸಿ ಡ್ರಮ್ಮಿನಲ್ಲಿರಿಸಿ ಬೆಳಿಗ್ಗೆ ಜನರಿಗೆ ತೋರಿಸಿ ಸಮಾಧಿ ನಿರ್ಮಿಸಲು ಆಣತಿ ನೀಡುತ್ತಿದ್ದ. ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ತಿಳುವಳಿಕೆಯಿದ್ದ ಜನರೂ ಭಯಗ್ರಸ್ಥರಾಗಿ ಆತ ಹೇಳಿದಂತೆ ನಡೆದುಕೊಳ್ಳುತ್ತಿದ್ದರು.

ಈ ಪವಾಡ ಪ್ರದರ್ಶನದ ದೊಡ್ಡ ಮೇಳವೇ ಕುಗ್ರಾಮವಾದ ಕರಡಿಗುಡ್ಡದಲ್ಲಿ ಜರುಗಿ, ದಿನನಿತ್ಯ ಅಸಂಖ್ಯಾತ ಭಕ್ತಾದಿಗಳು, ಕುತೂಹಲಿಗಳು ಆಗಮಿಸಿ ಜಾತ್ರೆಯಾಗುತ್ತಿತ್ತು. ಅಂಗಡಿ ಮುಗ್ಗಟ್ಟುಗಳು ತೆರೆದು, ಮಾನ್ವಿಯಿಂದ ಆ ಹಳ್ಳಿಗೆ ವಿಶೇಷ ಬಸ್ಸುಗಳನ್ನು ರಾಜ್ಯ ರಸ್ತೆ ಸಾರಿಗೆ ಮತ್ತು ಖಾಸಗಿಯವರು ಒಂದಾದ ಮೇಲೆ ಮತ್ತೊಂದು ಬಿಡುವ ವ್ಯವಸ್ಥೆಗೊಳಿಸಿದರು. ಮಾನ್ವಿಯಿಂದ ಕರಡಿಗುಡ್ಡ ಗ್ರಾಮದ ರಸ್ತೆ ರಿಪೇರಿ, ದೇವಸ್ಥಾನದ ನವೀಕರಣ; ದೀಪಾಲಂಕಾರ, ಧ್ವನಿವರ್ಧಕಗಳ ಏರ್ಪಾಟುಗಳು ದಿಢೀರನೆ ಕಾಣಿಸಿಕೊಂಡವು. ಸ್ಥಳಕ್ಕೆ ಆಗಮಿಸುವವರ ಸಂಖ್ಯೆಯನ್ನು ನಿಯಂತ್ರಿಸುವುದು ತಾಲ್ಲೂಕ ಆಡಳಿತ ವರ್ಗವರಿಗೆ ಕಷ್ಟಸಾಧ್ಯವಾಯಿತು. ಹೋಟೆಲ್ ಮತ್ತು ಪೂಜಾ ಸಾಮಗ್ರಿ ಮಾರಾಟಗಾರರಿಗೆ ಸುಗ್ಗಿಯಾಯಿತು. ಕಾಣಿಕೆಗಳ ಮಹಾಪೂರವೇ ಹರಿದು ಬಂದಿತು. ಉಟಕನೂರು ತಾತ ಸಮಾಧಿ ಸಮಿತಿ ರಚನೆಯಾಯಿತು. ಶರಣಪ್ಪಗೌಡನ ಮೈ ಮೇಲೆ 'ತಾತ' ಬರುವುದು. ರಾತ್ರಿ ಭಜನೆ ಮತ್ತು ಮದ್ಯಪಾನ ಸಮಾರಾಧನೆ ಅವ್ಯಾಹತವಾಗಿ ಸಾಗಿತು. ದಿನಾಂಕ ೧೧.೮.೧೯೯೬ ರಿಂದ ೧೯.೮.೧೯೯೬ ರ ವರೆಗೆ ಈ ಟಿ.ವಿ. ಸಹಿತ ಎಲ್ಲಾ ಮಾಧ್ಯಮದವರು ವಿಶೇಷ ಸುದ್ದಿ ಪ್ರಸಾರದಲ್ಲಿ ತೊಡಗಿದರು. ರಾಜ್ಯದ ಅಂದಿನ ಜವಳಿ ಮಂತ್ರಿ ಮತ್ತು ಧಾರ್ಮಿಕ ದತ್ತಿ ಇಲಾಖೆಯ ಮಂತ್ರಿಯವರು ದಿನಾಂಕ ೧೭.೮.೧೯೯೬ ರಂದು ಭೇಟಿ ನೀಡಿ ರೂ. ೪ ಲಕ್ಷ ಅನುದಾನ ನೀಡುವ ಭರವಸೆಯಿತ್ತರು.

ಈ ಮಧ್ಯೆ ಮಾನ್ವಿ ಪೋಲಿಸ್ ಸರ್ಕಲ್ ಇನ್‌ಸ್ಪೆಕ್ಟರ್‌ರವರು ಭೇಟಿ ನೀಡಿ, ಶರಣಪ್ಪಗೌಡನ ಈ 'ದಂಧೆ' ಬಗ್ಗೆ ಸಂಶಯ ವ್ಯಕ್ತಪಡಿಸಿ, ಜನಮನದಲ್ಲಿ ವಿಚಾರಮೂಡಿಸಲು ಪ್ರಯತ್ನಿಸಿದರು. ಮಾರನೆ ದಿನದ ಮುಂಜಾನೆಯೇ ಮಾನ್ವಿಯ ಅವರ ನಿವಾಸದ ಆವರಣದಲ್ಲಿ ದುತ್ತನೆ ನಾಗರ ಹಾವೊಂದು ಕಾಣಿಸಿತು. (ನಿಸ್ತೇಜ ಸ್ಥಿತಿಯಲ್ಲಿ ಎಂಬುದು ಬೇರೆ ಮಾತು). ತೀರ ಭಯ ವಿಹ್ವಲರಾದ ಇನ್‌ಸ್ಪೆಕ್ಟರ್‌ರವರು ಶರಣಪ್ಪಗೌಡರನ್ನು ಕರೆಸಿ ಹಾವನ್ನು ಹಿಡಿಸಿ, ಮಾನ್ವಿಯಿಂದ ಕರಡಿಗುಡ್ಡದವರೆಗೆ ೧೨ ಕಿ.ಮೀ. ವರೆಗೆ ಮೆರವಣಿಗೆಯಲ್ಲಿ ಆ ಹಾವನ್ನು ಕರೆದೊಯ್ಯಲಾಯಿತು. ಇನ್‌ಸ್ಪೆಕ್ಟರ್‌ರವರು ಸಂಪೂರ್ಣ ಖರ್ಚನ್ನು ಭರಿಸಿದರಲ್ಲದೆ 'ತಪ್ಪುದಂಡ' ತೆತ್ತರು. ತಮ್ಮ ಕುಟುಂಬ ಸಮೇತ

ಕರಡಿಗುಡ್ಡಕ್ಕೆ ಮತ್ತೊಮ್ಮೆ ಭೇಟಿ ನೀಡಿ ಹಾವುಗಳನ್ನು ಪೂಜಿಸಿ ಬಂದರು. ನಿಮ್ಮ ಸಹವಾಸಕ್ಕೆ ಮತ್ತೊಮ್ಮೆ ಬರುವುದಿಲ್ಲವೆಂಬ ಕ್ಷಮಾಪಣೆ ಬೇಡಿದರು. ಮುಂದೆ ಗೊತ್ತಾಯಿತೆಂದರೆ ಶರಣಪ್ಪಗೌಡನೇ ಯಾರಿಗೂ ಕಾಣದಂತೆ ಕರಡಿಗುಡ್ಡದಿಂದ ಮಾನ್ವಿಗೆ ಹೋಗಿ ಇನ್‌ಸ್ಪೆಕ್ಟರ್ ಮನೆ ಆವರಣದಲ್ಲಿ ಹಲ್ಲುಕಿತ್ತ ಪಳಗಿಸಿದ ನಾಗರ ಹಾವೊಂದನ್ನು ನಸುಕಿನಲ್ಲಿ ಬಿಟ್ಟು ಬಂದಿದ್ದ.

ಜಿಲ್ಲಾ ಕೇಂದ್ರವಾದ ರಾಯಚೂರಿನಿಂದ ಪ್ರಾಣಿ ತಜ್ಞರೊಬ್ಬರು ಸ್ಥಳಕ್ಕೆ ಬೇಟಿ ನೀಡಿ ಅಲ್ಲಿಯ ೩-೪ ಹಾವುಗಳನ್ನು ಬಿಟ್ಟರೆ ಉಳಿದವುಗಳೆಲ್ಲಾ ವಿಷರಹಿತವುಗಳೆಂದು ಅಭಿಪ್ರಾಯ ಮಂಡಿಸಿದರು. ಆ ೩-೪ ವಿಷಪೂರಿತ ಜಾತಿ ಹಾವುಗಳನ್ನು ಮತ್ತು ಇತರೆ ಡ್ರಮ್ಮಿನಲ್ಲಿ ಹಾವುಗಳಿವೆ ಎಂದು ನಂಬಿಸಿದವುಗಳನ್ನು ಪರೀಕ್ಷಿಸಲು ಅವರಿಗೆ ಬಿಡಲಿಲ್ಲ.

ದಿನಾಂಕ ೨೦.೮.೧೯೯೬ ರಂದು ನಾನು ಖುದ್ದಾಗಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸದಸ್ಯನಾಗಿ ಸ್ಥಳಕ್ಕೆ ಭೇಟಿ ನೀಡಿದೆ. ನಾನು ಉದ್ಯೋಗ ಮಾಡುವ ಬ್ಯಾಂಕಿನ ಮಾನ್ವಿ ಶಾಖೆಯ ಮ್ಯಾನೇಜರ್ ರವರು ನನ್ನ ಜೊತೆಗೆ ಬಂದಿದ್ದರು. ಅವರೂ ವೈಜ್ಞಾನಿಕ ಮನೋಭಾವದ ವ್ಯಕ್ತಿಗಳು. ವೈಜ್ಞಾನಿಕವಾಗಿ ವಿಶ್ಲೇಷಿಸುವಂತವರು. ನಾವು ಸಾಯಂಕಾಲದ ಸಮಯದಲ್ಲಿ ಆ ಗ್ರಾಮಕ್ಕೆ ಭೇಟಿನೀಡಿ ದೇವಸ್ಥಾನಕ್ಕೆ ನೇರವಾಗಿ ಹೋಗುವ ಮೊದಲು ವಿಜ್ಞಾನ ಅಭ್ಯಾಸದ ಹಿನ್ನೆಲೆಯಿರುವ ಊರಿನ ಕೆಲವು ಯುವಕರನ್ನು ಭೇಟಿಮಾಡಿ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಕೂಲಂಕುಷವಾಗಿ ಸಂಗ್ರಹಿಸಿದೆವು. ಪ್ರಾರಂಭದಲ್ಲಿ ಎಲ್ಲರೂ ದೈವಿಕ ಭಾವನೆಗೆ ಒಳಪಟ್ಟವರಂತೆ ಅತ್ಯಂತ ಭಾವುಕರಾಗಿ ಘಟನೆಯನ್ನು ವೈಭವೀಕರಿಸಿ ಹೇಳಲು ಪ್ರಾರಂಭಿಸಿದರು. ವಾಸ್ತವಿಕವಾಗಿ ಮತ್ತು ವೈಜ್ಞಾನಿಕವಾಗಿ ಹಿನ್ನೆಲೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವಾಗ ಅವರು ವಾಸ್ತವ ದೃಷ್ಟಿಯಿಂದ ವಿಷಯ ತಿಳಿಸಲು ಮುಂದಾದರು.

ನಂತರ ನಾನು ಹನುಮದೇವರ ದೇವಸ್ಥಾನಕ್ಕೆ ಹೋಗಿ ನೋಡಿದಾಗ ಶರಣಪ್ಪ ಗೌಡ ಮತ್ತು ಅವನ ಸಹಚರರು ತಂಡೋಪತಂಡವಾಗಿ ಬರುತ್ತಿದ್ದ ಭಕ್ತಾದಿಗಳಿಗೆ ಡ್ರಮ್ಮಿನಿಂದ ಹೊರತೆಗೆದು ಹಿಡಿದುಕೊಂಡು ಕೊರಳಿಗೆ ಸುತ್ತಿಕೊಳ್ಳುತ್ತಿದ್ದ 'ಪವಾಡ' ಪ್ರದರ್ಶನದಲ್ಲಿ ನಿರತರಾಗಿದ್ದರು. ಬ್ಯಾಂಕಿನ ಮೇಲಧಿಕಾರಿಗಳೆಂದು ತಿಳಿದಾಗ ಗಣ್ಯರಿಗೆ ನೀಡುವ ಪರವಾನಿಗೆ ದೊರೆಯಿತು. ದೇವಸ್ಥಾನದ ಒಳಾಂಗಣದ ಕಟ್ಟೆಯ ಮೇಲೆ ಹೋಗಿ ಡ್ರಮ್ಮುಗಳಲ್ಲಿ ಶೇಖರಿಸಿರುವ ಹಾವುಗಳನ್ನು ಖುದ್ದಾಗಿ ನೋಡಲು ಅನುವು ಮಾಡಿಕೊಟ್ಟರು. ನಮಗೆ ವಿವರಿಸಲು ತಡವಾಗಿ ಬಂದರು. ಅಷ್ಟರಲ್ಲಿ ನಾನು ಖಾಲಿಯಿರುವ ಸ್ಟೀಲ್ ಡ್ರಮ್ಮುಗಳನ್ನು ತೆಗೆದು ನೋಡಿ ಶರಣಪ್ಪಗೌಡನ 'ಪವಾಡ' ಬಯಲು ಮಾಡಿದೆ. ಜೊತೆಗೆ ೧೧೦ ಡ್ರಮ್ಮುಗಳಲ್ಲಿ ಕೇವಲ ೩೦-೪೦ ರಲ್ಲಿ ಮಾತ್ರ ಹಾವುಗಳಿದ್ದವು. ಅವುಗಳಲ್ಲಿ ೩-೪ ಮಾತ್ರ ವಿಷಕಾರಿ ಜಾತಿಯ ಹಾವುಗಳು. ಅವುಗಳಿಗೆ

ಹಲ್ಲುಕಿತ್ತಿರುವುದರಿಂದ ಮತ್ತು ನೀರಿನಲ್ಲಿ ಹಾಕಿ ಉಸಿರುಗಟ್ಟಿಸಿರುವುದರಿಂದ ಅವುಗಳೆಲ್ಲಾ ಊದಿಕೊಂಡು ಕಂದು ಬಣ್ಣಕ್ಕೆ ತಿರುಗಿ ನಿಸ್ತೇಜವಾಗಿದ್ದವು. ಇಂದೋ ನಾಳೆಯೋ ಸಾಯುವ ಶೋಚನೀಯ ಸ್ಥಿತಿಗೆ ತಲುಪಿದ್ದವು. ನಂತರ ನನ್ನ ಬಳಿಗೆ ಬಂದ ಶರಣಪ್ಪ ಗೌಡ ಮತ್ತು ಸಹಚರರು ಡ್ರಮ್ಮಿನಿಂದ ಹೊರತೆಗೆದು ೨-೩ ಹಾವುಗಳನ್ನು ಮುಟ್ಟಲು ನಮ್ಮ ಕೈಗೆ ನೀಡಿದರು. ಅವುಗಳ ದೇಹ ತಣ್ಣಗೆ ನಿಷ್ಕ್ರಿಯವಾಗಿದ್ದವು. ದಯಾನೀಯ ಸ್ಥಿತಿಗೆ ತಲುಪಿದ್ದವು. ಇವುಗಳು ಸತ್ತಾಗ ಸಮಾಧಿ ಕಟ್ಟಿಸಲು ಮುಂಗಡವಾಗಿ ಹೆಸರನ್ನು ನೋಂದಾಯಿಸಿದ ಗಣ್ಯ ಭಕ್ತಾದಿಗಳ ಯಾದಿಯಿತ್ತು.

ಅದೇ ಸಮಯದಲ್ಲಿ ಹೊಸ ನಾಗರ ಹಾವೊಂದನ್ನು ಪಕ್ಕದ ಶ್ರೀನಿವಾಸ ಕ್ಯಾಂಪ್‌ನಿಂದ ಆಗತಾನೆ ಹಿಡಿದು ತಂದಿದ್ದ ತಂಡವೊಂದು ಬಾಜ-ಭಜಂತ್ರಿ ಸಮೇತ ಮೆರವಣಿಗೆಯಲ್ಲಿ ತಂದರು. ಈಗೀಗ ಶರಣಪ್ಪ ಗೌಡ ಮತ್ತು ಸಹಚರರು ಇಲ್ಲಿಯೇ ಬ್ಯುಸಿಯಾಗಿರುವುದರಿಂದ ಹಾವು ಸಿಕ್ಕಿದ ಊರ ಜನರೇ ಹಿಡಿದು ತರುತ್ತಿದ್ದರೆಂದು ತಿಳಿದು ಬಂತು. ವಿಷಕಾರಿಯಾದ ಆ ಹಾವು ಕ್ಯಾಂಪ್‌ನ ರೈತನೊಬ್ಬನ ಮನೆಗೆ ನುಗ್ಗಿ ಮನೆ ಮಂದಿಯ ಆರ್ಭಟಕ್ಕೆ ಹೆದರಿ ಟಿ.ವಿ.ಯ ಖಾಲಿ ಪೇಪರ್ ಬಾಕ್ಸ್ ಒಳಗೆ ನುಸುಳಿಕೊಂಡಿತ್ತು. ಅದನ್ನು ಮುಚ್ಚಿ ಮೇಲೆ ದಪ್ಪನೆಯ ಬಟ್ಟೆಯನ್ನು ಚೆನ್ನಾಗಿ ಸುತ್ತಿ ತಂದಿದ್ದರು. ಅನಿರೀಕ್ಷಿತವಾಗಿ ತಂದ ಆ ಹಾವಿನ ಬಾಕ್ಸನ್ನು ತೆಗೆಯಲು ಶರಣಪ್ಪ ಗೌಡ ಮೀನ ಮೇಷ ಎಣಿಸಿದ. ಆದರೂ ಮಿತಿಮೀರಿದ ಮದ್ಯಪಾನಮತ್ತನಾದ ಅವನು ಸಂದರ್ಭದಲ್ಲಿ ಸೇರಿದ ಗಣ್ಯ ಭಕ್ತಾದಿಗಳ ಮುಂದೆ ಅಧೈರ್ಯ ತೋರಲು ಆಗದೆ ಭಂಡತನದಿಂದ ಬಾಕ್ಸ್‌ನ ಬಟ್ಟೆ ಬಿಚ್ಚಿ ಉಟಕನೂರು ತಾತನ ಹೆಸರನ್ನು ಉಚ್ಚರಿಸುತ್ತಾ ಬಾಕ್ಸ್‌ನ ಮುಚ್ಚಳವನ್ನು ನಮ್ಮೆದುರಿಗೆ ಧೈರ್ಯಮಾಡಿ ತೆಗೆದ. ತಕ್ಷಣವೇ ರಭಸದಿಂದ ಹಾವು ಬುಸುಗುಟ್ಟುತ್ತಾ ಎಗರಲು ಪ್ರಾರಂಭಿಸಿತು. ಆತನಿಗೆ ಹೆದರಿಕೆಯಾದರೂ ತೋರ್ಪಡಿಸದೆ 'ತಾತ 'ನ ಫೋಟೊ ಎದುರಿಗಿನ ಕುಂಕುಮ ಅರಿಷಿಣವನ್ನು ಹಣೆಗೆ ಹಚ್ಚಿಕೊಂಡು, ಒಂದು ಟವೆಲ್ ಸಹಾಯದಿಂದ ಹಾವಿನ ಕತ್ತನ್ನು ಬಿಗಿಯಾಗಿಡಿದು ಮೇಲಕ್ಕೆತ್ತಿದ. ರೋಷದಿಂದ ಬಸವಳಿದ ಹಾವು ಟವೆಲ್ ಸಮೇತ ಮುಷ್ಟಿಯಲ್ಲಿಡಿದ ಬಿಗಿಯನ್ನು ಮೀರಿ ಬಲವಾಗಿ ನುಸುಳಿಕೊಂಡು ಶರಣಪ್ಪನ ಮುಷ್ಟಿಯಿಂದ ಸಡಿಲಿಸಿಕೊಂಡು ತನ್ನ ಕತ್ತನ್ನು ಹೊರಚಾಚಿ ಆತನ ಮುಂಗೈಯಿಗೆ ಬಲವಾಗಿ ಕಚ್ಚಿಯೇ ಬಿಟ್ಟಿತು. ಕಚ್ಚಿದಾಕ್ಷಣ ಶರಣಪ್ಪ ಗೌಡ ಅನಾಹುತವನ್ನು ಗ್ರಹಿಸಿ ಹಾವನ್ನು ಬಿಸಾಕಿದ. ಅದು ಓಡಲು ಪ್ರಯತ್ನಿಸಿದಾಗ ಇತರರು ಖಾಲಿ ಡ್ರಮ್ಮೊಂದನ್ನು ಬೋರಲಾಕಿ ಅದರಲ್ಲಿ ಬಂಧಿಸಿದರು. ಕಡಿಸಿಕೊಂಡ ಶರಣಪ್ಪ ಗೌಡ ಭಯವನ್ನು ತೋರ್ಪಡಿಸಲಾಗದೆ ಕಡಿದ ಭಾಗಕ್ಕೆ ನಮ್ಮೆದುರೇ 'ತಾತ ' ನ ಭಂಡಾರವೆಂದು ಕುಂಕುಮವನ್ನು ಹಚ್ಚಿ ಇತರೆ ಹಾವಿನ ಡ್ರಮ್ಮಿನೊಳಗೆ ಕೈಹಾಕಿ ಆ ನೀರನ್ನು ಬಾಯೊಳಗೆ ಬಿಟ್ಟುಕೊಂಡು 'ತಾತ' ನ ಕರುಣೆಯಿಂದ ನನಗೇನು ಆಗುವುದಿಲ್ಲವೆಂದು ಭಕ್ತಾದಿಗಳ ಮುಂದೆ ಸಾರಿ ಸಾರಿ ಹೇಳಿದ.

ನಾವೆಲ್ಲಾ ಆತನನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಲು ಸಲಹೆ ನೀಡಿದೆವು. ನಮ್ಮ ಸಲಹೆಯನ್ನು ಕೇಳುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಕಾರಣ ಅವರ ದೃಷ್ಟಿಯಲ್ಲಿ ಆತ 'ಪವಾಡ ಪುರುಷ'.

ಆ ಘಟನೆಯ ನಂತರ ನನ್ನ ಅಂದಿನ ಕೇಂದ್ರ ಸ್ಥಾನವಾದ ಅದೇ ರಾಯಚೂರು ಜಿಲ್ಲೆಯ ಸಿಂಧನೂರಿಗೆ ವಾಪಸ್ಸಾದೆ. ಮರುದಿನ ಸಿಂಧನೂರಿನ ಪ್ರವಾಸಿ ಮಂದಿರದಲ್ಲಿ ಈ ಬಗ್ಗೆ ಪತ್ರಿಕಾಗೋಷ್ಠಿ ಕರೆದು ಘಟನೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ತಿಳಿಸಿದೆ. ಆ ಸಂದರ್ಭದಲ್ಲಿ ಅಂದಿನ ಸಿಂಧನೂರಿನ ಎಂ.ಎಲ್.ಎ. ರವರು ಹಾಜರಿದ್ದರು.

ಈ ಘಟನೆಗೆ ಸಂಬಂಧಿಸಿದಂತೆ ನನ್ನ ವೈಜ್ಞಾನಿಕ ವಿಶ್ಲೇಷಣೆ ಎಂದರೆ, ವಸಂತ ಋತುವಿನ ಆಗಮನದ ಸಂದರ್ಭದಲ್ಲಿ ಯುಗಾದಿ ಹಬ್ಬ; ಬೆಳೆದ ಉತ್ಪನ್ನ ಬರುವಾಗ ಸಂಕ್ರಾಂತಿ ಹಬ್ಬ. ಹೀಗೆ ನೈಸರ್ಗಿಕ ಕ್ರಿಯೆಗಳಲ್ಲಿನ ವಿಶೇಷತೆ ಸೂಚಕವಾಗಿ ಹಬ್ಬಗಳ ಆಚರಣೆ ರೂಢಿಗೆ ಬಂದಿವೆ. ಅದರಂತೆ, ನಾಗರಪಂಚಮಿ ಹಬ್ಬವು ಹಾವು ಮತ್ತು ಇತರೆ ಸರೀಸೃಪ ವರ್ಗಗಳು ಭೂಮಿಯಲ್ಲಿನ ಬಿಲಗಳಿಂದ ಹೊರಬರುವ ಸಂದರ್ಭದಲ್ಲಿ ಆಚರಿಸಲಾಗುವುದು. ನಮ್ಮ ಪೂರ್ವಿಕರು ಒಮ್ಮೆಲೆ ಹಾವುಗಳೆಲ್ಲಾ ಹೊರಬರುವ ಈ ವಿದ್ಯಮಾನವನ್ನು ಕಂಡು ಭಯಭೀತರಾಗಿ ಅವುಗಳು ತಮಗೆ ಏನೂ ತೊಂದರೆ ಮಾಡದಿರಲೆಂದು ಅವುಗಳ ಆಗಮನದ ಸಂಕೇತವೆಂದು ಈ ಹಬ್ಬ ಆಚರಣೆಗೆ ತಂದಿದ್ದಾರೆ. ನಾಗಪಂಚಮಿಯ ಸಮಯದಲ್ಲಿ ಭೂಮಿಗೆ ಮೊದಲ ಮಳೆ ಬಂದು, ಈಗಾಗಲೇ ಕಾದು ಬಾಣಲೆಯಾಗಿದ್ದ ಭೂಮಿಗೆ ಮಳೆನೀರು ಇಳಿದಾಗ ಮಣ್ಣಿನಲ್ಲಿನ ಕ್ಯಾಲ್ಸಿಯಂ ಹಬೆಯಾಡಿ ಸುಟ್ಟ ಸುಣ್ಣದಿಂದ ಹೊರಬಂದ ಕಾವಿನಿಂದ ಬಿಲದಲ್ಲಿ ಈಗಾಗಲೇ ಸರೀಸೃಪಗಳು ಮೊಟ್ಟೆಯಿಟ್ಟಿರುವುದನ್ನು ನೈಸರ್ಗಿಕವಾಗಿ ಮೊಟ್ಟೆ ಹೊಡಿಸಿ ಮರಿ ಹೊರಬರುತ್ತವೆ. ನೈಸರ್ಗಿಕ ಕಾವು ನೀಡುವ (Natural incubation) ಕ್ರಿಯೆ. ಬಿಲದಲ್ಲಿ ಸಾಕಷ್ಟು ಸ್ಥಳಾವಕಾಶವಿರದ ಕಾರಣ ಮೊಟ್ಟೆಯಿಂದ ಹೊರಬಂದ ಮರಿಗಳೆಲ್ಲಾ ಬಿಲದಿಂದ ಹೊರಬಂದು ಎಲ್ಲೆಂದರಲ್ಲಿ ಓಡಾಡುತ್ತವೆ. ಸ್ಥಳವಿಲ್ಲದ ಕಾರಣ ಮರಿ ಹಾವುಗಳ ಜೊತೆ ದೊಡ್ಡ ಹಾವುಗಳು ಸಹ ಆ ಸಮಯದಲ್ಲಿ ಹೊರಬಂದು ನೆಲದ ಮೇಲೆ ಅಡ್ಡಾಡುತ್ತವೆ. ಇಂಥಹ ಸಂದರ್ಭಗಳನ್ನು ಶರಣಪ್ಪ ಗೌಡರಂಥ ಜನರು ಅಮಾಯಕರನ್ನು ದೈವಿಕ ಪವಾಡಗಳೆಂದು ನಂಬಿಸಿ ಸಂದರ್ಭವನ್ನು ನಗದೀಕರಿಸಲು ಪ್ರಯತ್ನಿಸುತ್ತಾರೆ.

ಇದನ್ನು ಪತ್ರಕರ್ತರಿಗೆ ವಿವರಿಸಿ ಹೇಳುತ್ತಿದ್ದ ಸಮಯದಲ್ಲೇ ನಿನ್ನೆ ಹಾವಿನ ಕೈಲಿ ಕಚ್ಚಿಸಿಕೊಂಡಿದ್ದ ಶರಣಪ್ಪಗೌಡ ಈ ದಿನ ಮುಂಜಾನೆ ಸತ್ತು ಹೋದನೆಂಬ ಸಾವಿನ ಸುದ್ದಿ ನಮಗೆ ತಲುಪಿತು. ನಾನೇಳಿದ ವಿಷಯ ಪತ್ರಕರ್ತರಿಗೆ ಮನದಟ್ಟಾಯಿತು. ರಾಯಚೂರಿನ ಜಿಲ್ಲಾಧಿಕಾರಿಗಳು ಅಂಥ ಪವಾಡ ಪ್ರದರ್ಶನಗಳನ್ನು ನಿಷೇಧಿಸಿ ಆಜ್ಞೆ ಹೊರಡಿಸಿದರು. ಜೊತೆಗೆ ವನ ಮತ್ತು ವನ್ಯ ಜೀವಿಗಳ ರಕ್ಷಣೆ ಕಾನೂನು ಅಡಿಯಲ್ಲಿ ಶರಣಪ್ಪ ಗೌಡ

ಹಿಡಿದಿಟ್ಟಿದ್ದ ಹಾವುಗಳನ್ನೆಲ್ಲಾ ಬಿಡುಗಡೆಮಾಡಿ ಕಾಡಿನಲ್ಲಿ ಬಿಡಲು ಆಜ್ಞಾಪಿಸಿದರು. ಇನ್ನು ಮುಂದೆ ಮನರಂಜನೆ ಹೆಸರಿನಲ್ಲಿ, ದೈವಿಕ ಪವಾಡದ ಹೆಸರಿನಲ್ಲಿ ಅಥವಾ ಪ್ರದರ್ಶನದ ಹೆಸರಿನಲ್ಲಿ, ಪ್ರಾಣಿಗಳನ್ನು ಹಿಂಸಿಸದಂತೆ ಎಚ್ಚರಿಸಿದರು.

ಈ ರೀತಿ 'ಪವಾಡ' ವೊಂದು ಠುಸ್ಸೆಂದಿತು. ಶರಣಪ್ಪಗೌಡನ 'ಪವಾಡ ಪುರುಷ' ರಹಸ್ಯ ಬಯಲಾಯಿತು. ಕೊನೆಗೆ ಆ ಹುನ್ನಾರದ ಯಜ್ಞದಲ್ಲಿ ಆತನೇ ಬಲಿಯಾದ.

★

ವೈಜ್ಞಾನಿಕ ಮನೋಭಾವ

ವಿಜ್ಞಾನವನ್ನು ಅಭ್ಯಾಸ ಮಾಡಿದವರೆಲ್ಲಾ, ಸದಾ ವಿಜ್ಞಾನ ಪಾಠ ಮಾಡುವ ಅಧ್ಯಾಪಕರುಗಳೆಲ್ಲಾ ಕಡ್ಡಾಯವಾಗಿ ವೈಜ್ಞಾನಿಕ ಮನೋಭಾವದವರಾಗಿರುತ್ತಾರೆಂದು ಎಣಿಸಬೇಕಿಲ್ಲ. ಎಷ್ಟೋ ಮಂದಿ ವಿಜ್ಞಾನ ಪದವೀಧರರು, ವಿಜ್ಞಾನ ಅಧ್ಯಾಪಕರು ಅಷ್ಟೇ ಏಕೆ ವಿಜ್ಞಾನ ಸಂಶೋಧನಾ ಕ್ಷೇತ್ರದಲ್ಲಿ ತೊಡಗಿರುವ ಅನೇಕ ವಿಜ್ಞಾನಿಗಳಲ್ಲೂ ವೈಜ್ಞಾನಿಕ ಮನೋಭಾವದ ಅಭಾವ ಕಂಡುಬರುತ್ತದೆ.

ಪ್ರಶ್ನಿಸುವ ಮನೋಭಾವವನ್ನು ವೈಜ್ಞಾನಿಕ ಮನೋಭಾವವೆಂದು ಸರಳವಾಗಿ ವ್ಯಾಖ್ಯಾನಿಸಿದರೂ ಸ್ಥೂಲವಾಗಿ ವಿವೇಚಿಸಿದಾಗ ಅದು ಅನುಭವಕ್ಕೆ ಬಂದ ಯಾವುದೇ ಘಟನೆಯನ್ನು ವಾಸ್ತವಿಕ ದೃಷ್ಟಿಯಿಂದ ಪರಾಂಬರಿಸಿ, ವಸ್ತುನಿಷ್ಠವಾಗಿ ವಿಶ್ಲೇಷಿಸುವುದು ಎಂಬ ವಿವರಣೆಯಾಗುತ್ತದೆ.

ಅನೇಕ ಸಂದರ್ಭಗಳಲ್ಲಿ ನಮಗೆ ಎದುರಾಗುವ ಸಾಮಾನ್ಯ ಘಟನೆಗಳನ್ನು ನಾವು ವಿಶ್ಲೇಷಿಸದೆ ಸಾಂಪ್ರದಾಯಿಕ ನಂಬಿಕೆಗಳಿಗೆ ಶರಣಾಗಿ ದೇವರು ಇಲ್ಲವೇ ಅತೀಂದ್ರಿಯ ಶಕ್ತಿಯ ಪವಾಡವೆಂದು ಕುರುಡು ಭಾವನೆಯಿಂದ ಮೌಢ್ಯ ಪ್ರದರ್ಶಿಸುವುದೇ ಹೆಚ್ಚು. ಇದಕ್ಕೆ ವಿದ್ಯಾವಂತರು ಹೊರತೇನಿಲ್ಲ. ಆದ್ದರಿಂದಲೇ ಪ್ರಖ್ಯಾತ ವಿಚಾರವಾದಿ ಡಾ। ಹೆಚ್. ನರಸಿಂಹಯ್ಯನವರು ಹೇಳಿರುವುದು, 'ಶಿಕ್ಷಿತ ಕಂದಾಚಾರಿ ಅಶಿಕ್ಷಿತ ಕಂದಾಚಾರಿಗಿಂತ ತೀರ ಅಪಾಯಕಾರಿ'.

ನಾವು ವೈಚಾರಿಕ ದೃಷ್ಟಿಯಿಂದ, ವೈಜ್ಞಾನಿಕವಾಗಿ ವಿಶ್ಲೇಷಿಸುವ ವಿಪುಲ ಅವಕಾಶಗಳು ದೊರೆಯುತ್ತವೆ. ಆವಕ್ಕೆ ಸ್ಪಂದಿಸುವ ಕಾರಣ ಏನಿರಬೇಕೆಂದು ಹುಡುಕುವ ಇಲ್ಲವೇ ಪ್ರಶ್ನಿಸಿ ತಿಳಿದುಕೊಳ್ಳುವ ಮನೋಭಾವ ಬೇಕಷ್ಟೆ

ಉದಾಹರಣೆಗೆ, ೧೯೩೭ ರಲ್ಲಿ ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ನಗರದ ಬಡಾವಣೆಯೊಂದರ ಬೇವಿನ ಮರ ಒಂದರಲ್ಲಿ ಮರದ ಬಲಿತ ರಂಬೆಯ ಕವಲಿನಿಂದ ಸಿಹಿಹಾಲು ಒಸರುವುದನ್ನು ಗಮನಿಸಿದ ಜನರು ಆ ಮರಕ್ಕೆ ಪೂಜೆ ಪುನಸ್ಕಾರಗಳನ್ನು ಆರಂಭಿಸಿದರು; ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನ ಜಾತ್ರೆಯೋಪಾದಿಯಲ್ಲಿ ಆ ಸ್ಥಳಕ್ಕೆ ಧಾವಿಸಿ ಭಕ್ತಿಯಿಂದ ಭೇಟಿಕೊಟ್ಟು ಸಿಹಿ ಹಾಲು ಸ್ವೀಕರಿಸಿ ಕೃತಾರ್ಥರಾದರು. ದಿಢೀರನೆ ಒಂದು ದಿನ ಬೇವಿನ ಮರದಿಂದ ಒಸರುತ್ತಿದ್ದ ಸಿಹಿ ಹಾಲು ನಿಂತೇ ಹೋಯಿತು.

ಕೆಲವು ವರ್ಷಗಳ ಹಿಂದೆ ಬೆಂಗಳೂರು ನಗರದ ಬಿ.ಕೆ.ಎಸ್. ಅಯ್ಯಂಗಾರ್ ರಸ್ತೆಯಲ್ಲಿನ ಅರಳೀಕಟ್ಟೆಯ ಬೇವಿನ ಮರದಲ್ಲಿಯೂ ಇಂತಹ ವಿಚಿತ್ರ ರಾಸಾಯನಿಕ

ಕ್ರಿಯೆಯಿಂದ ಸಿಹಿ ಹಾಲು ಒಸರತೊಡಗಿದಾಗ ಜನರಲ್ಲಿ ದೈವಿಕ ಭಾವನೆ ಜಾಗೃತವಾಗಿ, ಜನ ತಂಡೋಪತಂಡವಾಗಿ ಹೋಗಿ ಬೇವಿನ ಮರಕ್ಕೆ ಅನನ್ಯ ಭಕ್ತಿಯಿಂದ ಪೂಜೆ ಸಲ್ಲಿಸಿ ನಮಸ್ಕರಿಸಿದ್ದರು. ಸಾಮಾನ್ಯ ವೈಜ್ಞಾನಿಕ ಕ್ರಿಯೆಗಳಾದ ಇವು ಪ್ರಕೃತಿದತ್ತವಾಗಿ ಸಂಭವಿಸುತ್ತಿದ್ದರೂ ಜನರ ಆಧಾರರಹಿತ ದೈವಿಕ ಭಾವನೆ ಇಂಥ ಮೌಢ್ಯಗಳನ್ನು ಸೊಂಪಾಗಿ ಬೆಳೆಸುತ್ತಲೇ ಇರುತ್ತದೆ. ವೈಜ್ಞಾನಿಕವಾಗಿ ಸಂಬಂಧಪಟ್ಟ ರಾಸಾಯನಿಕ ಕ್ರಿಯೆಯ ಕಾರಣವನ್ನು ತಿಳಿದುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಈ ಪ್ರಯತ್ನವನ್ನು ವಿಜ್ಞಾನ ಬಲ್ಲ ಅನೇಕ ಜನ ಮಾಡುವುದಿಲ್ಲ.

ಮೇಲಿನ ಘಟನೆಗಳಿಗೆ ಮುಖ್ಯವಾದ ರಾಸಾಯನಿಕ ಕ್ರಿಯೆಯೆಂದರೆ ಬೇವಿನ ಮರದ ಎಲೆಗಳಲ್ಲಿ ದ್ಯುತಿ ಸಂಶ್ಲೇಷಣ ಕ್ರಿಯೆಯಲ್ಲಿ ಗ್ಲುಕೋಸ್ ತಯಾರಾಗಿ ಸಸ್ಯದ ಎಲ್ಲಾ ಭಾಗಗಳಿಗೂ ಆಹಾರಗೊಳವೆಯ ಮೂಲಕ ಸರಬರಾಜಾಗುತ್ತದೆ. ಕೀಟವು ಮರವನ್ನು ಕೊರೆದಾಗ, ಗಾಳಿಯ ರಭಸಕ್ಕೆ ರಂಬೆಗಳು ಸೀಳಿ ಅಥವಾ ನುಲುಚಿಕೊಂಡಾಗ ಈ ಗ್ಲುಕೋಸ್ ಬಿಳಿಯ ದ್ರವದ ರೂಪದಲ್ಲಿ ಸೋರುತ್ತದೆ. ಇದಕ್ಕೆ 'ಹುದುಗುವಿಕೆ' ಅಂದರೆ ಗ್ಲುಕೋಸ್ ವಿಭಜನೆಗೊಂಡು ಆಲ್ಕೊಹಾಲ್ ಮತ್ತು ಇಂಗಾಲದ ಡೈ ಆಕ್ಸೈಡ್ ಆಗಿ ರೂಪ ಹೊಂದುವುದು.

ಆ ರೀತಿ ವಿಭಜನೆಗೊಂಡ ಇಂಗಾಲದ ಡೈ ಆಕ್ಸೈಡ್ ಹೊರಹೋಗುವ ರಭಸದಲ್ಲಿ ಆಲ್ಕೋಹಾಲನ್ನು ನೂಕಿ ರಂಧ್ರಗಳ ಮೂಲಕ ಹೊರಹಾಕುತ್ತದೆ. ಬಿಸಿಲೇರಿದಂತೆ ಈ ಹುದುಗುವಿಕೆ ಜಾಸ್ತಿಯಾಗುತ್ತದೆ. ಈ ರೀತಿಯ ವೈಜ್ಞಾನಿಕ ಅರಿವಿನಿಂದ ಅನೇಕ ಮೌಢ್ಯತೆಗಳಿಂದ ಮುಕ್ತರಾಗಬಹುದು.

ರಾಮನಗರ ತಾಲ್ಲೂಕಿನ ಅವ್ವೇರಹಳ್ಳಿಯ ರೇವಣಸಿದ್ದೇಶ್ವರನ ಬೆಟ್ಟದ ''ಸೊಣೆ''(ಹೊಂಡ)ಯಲ್ಲಿ ಬಿಟ್ಟ ವಸ್ತುವಾಗಲೀ, ಮುಳುಗಿ ಸತ್ತ ವ್ಯಕ್ತಿಯಾಗಲೀ ಸುಮಾರು೧೦೦ ಕಿ.ಮೀ. ಅಂತರದಲ್ಲಿರುವ ಆದಿಚುಂಚನಗಿರಿಯಲ್ಲಿರುವ ಹೊಂಡದಲ್ಲಿ ಕಾಣಿಸಿಕೊಳ್ಳುತ್ತವೆ ಎಂಬ ಪ್ರತೀತಿಯಿದೆ. ರೇವಣ ಸಿದ್ದೇಶ್ವರನ 'ಸೊಣೆ' ಯಲ್ಲಿ ಕೈ ತಪ್ಪಿ ಬಿದ್ದ ವಸ್ತುಗಳೇ (ಸಾಮಾನ್ಯವಾಗಿ ಪೂಜಾಸಾಮಗ್ರಿಗಳಾದ ಬಾಳೆಹಣ್ಣು, ಹೂಗಳು, ಅರಿಶಿಣದ ಬಟ್ಟೆ ಬಿಲ್ವಪತ್ರೆ; ತೊಟ್ಟಿಲಾಕಾರದ ಬೆಳ್ಳಿ ತಗಡು ಇತ್ಯಾದಿ) ಆದಿ ಚುಂಚನಗಿರಿಯ ಹೊಂಡದಲ್ಲಿ ಇತರೆ ವಿಭಿನ್ನ ವಸ್ತುಗಳ ಜೊತೆ ಆಗಿಂದಾಗ್ಗೆ ತೇಲಿ ಬರುತ್ತವೆ.

ಅದೇ ರೀತಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿ ಹಾಲು-ರಾಮೇಶ್ವರನ ಹೊಂಡದಲ್ಲಿಯೂ ಈ ರೀತಿಯ ವಸ್ತುಗಳು ತೇಲಿ ಬರುತ್ತವೆ. ತೇಲಿಬಂದ ವಸ್ತುವನ್ನು ಆಧರಿಸಿ ಫಲ ನಿರ್ಣಯಿಸುತ್ತಾರೆ. ಕೈಮುಗಿದು ಕುಳಿತ ಭಕ್ತನ ಮುಂದೆ ಅರಿಶಿಣದ ಬಟ್ಟೆ ತೇಲಿ ಬಂದರೆ ಕಂಕಣ ಭಾಗ್ಯ; ಬಾಳೆಹಣ್ಣು ಬಂದರೆ ಭರ್ಜರಿ ಫಸಲು; ಹೂ

ಬಂದರೆ ಗರ್ಭವತಿಯಾಗುವ ಸೂಚನೆ; ಬಿಲ್ವ ಪತ್ರೆ ಬಂದರೆ ರೋಗ ಗುಣವಾಗುವ ಸೂಚನೆ; ಬೆಳ್ಳಿ ತಗಡಿನ ತೊಟ್ಟಿಲು ಬಂದರೆ ಗಂಡು ಸಂತಾನ ಇತ್ಯಾದಿ.

ನೈಸರ್ಗಿಕವಾದ ಈ ವಿದ್ಯಮಾನವನ್ನು ವಿಶ್ಲೇಷಿಸೋಣ. ಮಳೆಯ ನೀರು ಭೂಮಿಯ ಮೇಲೆ ಸುರಿದಾಗ ಶಿಲಾಪದರುಗಳು ಸಂದಿಯಲ್ಲಿನ ಮಣ್ಣಿನಲ್ಲಿ ಇಂಗಿ ಎಲ್ಲಿಯೋ ಒಂದು ಕಡೆ ಹೊರಹರಿಯುವುದು. ಇದರಿಂದ ನೀರಿನ ಬುಗ್ಗೆಗಳು ಉಂಟಾಗುತ್ತವೆ. ಚಿಮ್ಮು ಬುಗ್ಗೆಗಳು, ತಿರುಗು ಬುಗ್ಗೆಗಳು, ಹರಿಯುವ ಬುಗ್ಗೆಗಳೆಂಬ ವಿವಿಧ ಬುಗ್ಗೆಗಳುಂಟಾಗುತ್ತವೆ.

ಆದಿ ಚುಂಚನಗಿರಿಯಲ್ಲಾಗಲೀ, ಹಾಲು ರಾಮೇಶ್ವರದಲ್ಲಾಗಲೀ ನಾವು ಕಾಣುವುದು ತಿರುಗು ಬುಗ್ಗೆಗಳು. ಅಲ್ಲಿಯ ಹೊಂಡಗಳು ಬೆಟ್ಟದ ಸಾಲುಗಳಿಗೆ ಅಂಟಿಕೊಂಡಿವೆ. ಕಲ್ಲಿನ ಸಂದಿಯಲ್ಲಿ ಇಳಿದ ನೀರು ಒಳಸುರುಳಿಯ ಮೂಲಕ ಹೊಂಡದ ಟೊಳ್ಳು ಜಾಗದಲ್ಲಿ ಹೊರನುಗ್ಗುತ್ತದೆ. ಒತ್ತರಿಸಿದ ನೀರು ತಿರುಗು ಹಾಕುವಾಗ ಹೊಂಡದ ಒಳಗೆ ಮುಳುಗಿರುವ ವಸ್ತುಗಳು ನೀರಿನ ಜೊತೆ ತಿರುಗುತ್ತಾ ಮೇಲೆ ಬಂದು ಪುನಃ ಒಳಸರಿಯುತ್ತವೆ. ಈ ನೀರಿನ ತಿರುಗಾಟ ಮೇಲ್ಮೈಯಲ್ಲಿ ಕಾಣಿಸುವುದಿಲ್ಲ. ನೀರಿನಲ್ಲಿ ಮುಳುಗುವ ಪ್ಲಾಸ್ಟಿಕ್ ಮಣಿಯೊಂದನ್ನು ಹಾಕಿ ತೇಲುವವರೆಗೂ ನೋಡುತ್ತಾ ಕೂತರೆ, ತೇಲಿ ಬಂದ ಮಣಿಯ ಚಲನೆ ನೀರಿನ ಚಲನೆಯಾಗಿರುತ್ತದೆ. ನಾವು ಹಾಕಿದ ವಸ್ತುಗಳನ್ನು ಬಿಟ್ಟು ಬೇರೆ ಯಾವುದೇ ವಸ್ತುಗಳು ಹೊಂಡದಲ್ಲಿ ಬರುವುದಿಲ್ಲ. ರೇವಣಸಿದ್ದೇಶ್ವರ ಬೆಟ್ಟದ 'ಸೋಣೆ' ಯಿಂದ ಬಿಟ್ಟ ವಸ್ತು ಆದಿಚುಂಚನಗಿರಿ ಹೊಂಡಕ್ಕೆ ರವಾನಿಸಲ್ಪಡುವುದಿಲ್ಲ. ಇದೊಂದು ಕಟ್ಟುಕಲ್ಪನೆಯಷ್ಟೇ. ಜೊತೆಗೆ ಅಂಥ ದೈವೀ ನಂಬಿಕೆ.

ನಾವು ಚಿಕ್ಕಂದಿನಿಂದ ನೋಡುವ ದೃಶ್ಯ, ಮೈಮೇಲೆ 'ದೇವರು' ಬಂದವರು ಉರಿವ ಪಂಜನ್ನು ಮೈಮೇಲೆ ಹಾಯಿಸಿಕೊಳ್ಳುವುದು, ಕೆಂಡದಲ್ಲಿ ನಡೆಯುವುದು ಇವೆಲ್ಲಾ ದೈವೀ ಪವಾಡಗಳಲ್ಲ. ಸಾಮಾನ್ಯ ಭೌತಶಾಸ್ತ್ರದ ಪರಿಣಾಮಗಳು, ತೇವಾಂಶವಿರುವ ದೇಹದ ಅಂಗವು ಶಾಖದ ಮೇಲ್ಮೈಯನ್ನು ಸ್ಪರ್ಶಿಸಿದಾಗ ಅಂಗದಲ್ಲಿರುವ ನೀರಿನ ಅಂಶ(ಪಸೆ) ಆವಿಯಾಗಿ ಈ ಎರಡು ಮೇಲ್ಮೈಗಳ ಮಧ್ಯೆ ಶಾಖ ನಿರೋಧಕ ಪದರವಾಗಿ ಕಾರ್ಯ ನಿರ್ವಹಿಸುತ್ತದೆ. ಈ ಪರಿಣಾಮವನ್ನು ಭೌತಶಾಸ್ತ್ರದಲ್ಲಿ 'ಲೈಡನ್ ಫ್ರಾಸ್ಟ್' ಪರಿಣಾಮ ಎನ್ನುವರು.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೇನೆಂದರೆ ಈ 'ಲೈಡನ್ ಫ್ರಾಸ್ಟ್' ನ ಪರಿಣಾಮದ ಶಾಖ ನಿರೋಧಕ ಪದರವು ಕೆಲವು ಸೆಕೆಂಡುಗಳ ಕಾಲ ಮಾತ್ರ ಅಸ್ತಿತ್ವದಲ್ಲಿರುತ್ತದೆ. ಆ ಬಳಿಕ ಬೆಂಕಿ ಸುಡಲು ಆರಂಭಿಸುತ್ತದೆ. ಆ ಬೆಂಕಿ ಸುಡದಿರಬೇಕಾದರೆ ಬೆಂಕಿ ಚಲಿಸುತ್ತಿರಬೇಕು. ಇಲ್ಲವೇ ಪಾದ ಮೈಭಾಗ ಚಲಿಸುತ್ತಿರಬೇಕು. ಮೈಕೈ ಮುಖದ ಮೇಲೆ ಬೆಂಕಿಯ ಪಂಜನ್ನು ಉಜ್ಜಿಕೊಳ್ಳುವವರು ಬೆಂಕಿಯಲ್ಲಿ ಚಲಿಸುತ್ತಿರುತ್ತಾರೆ. ಕೆಂಡದ

ಮೇಲೆ ನಡೆಯುವಾಗ ಬೆಂಕಿ ಸ್ಥಿರವಾಗಿರುತ್ತದೆ. ನಡೆಯುವವರು ಚಲಿಸುತ್ತಿರುತ್ತಾರೆ. ಕರ್ಪೂರದಾರತಿ ಮಾಡುವವರು ಉರಿಯುತ್ತಿರುವ ಕರ್ಪೂರವನ್ನು ಇದೇ ಕಾರಣದಿಂದ ಕೈಯಿಂದ ಕೈಗೆ ವರ್ಗಾಯಿಸಿಕೊಳ್ಳುವುದು, ನಿಂಬೆಹಣ್ಣನ್ನು ಕೊಯ್ದು ರಕ್ತ ತೋರಿಸಿ 'ತಡೆ' ಮಾಡಿಸಿದ್ದಾರೆ ಎಂಬ ಭಯ ಹುಟ್ಟಿಸುತ್ತಾರೆ. ಕೊಯ್ಯುವ ಚಾಕುವಿಗೆ ಕಾಣದಂತೆ ಅರಿಶಿಣ ಮಿಶ್ರಿತ ಸುಣ್ಣವನ್ನು ಲೇಪಿಸಿಟ್ಟಿರುತ್ತಾರೆ. ನಿಂಬೆ ಹಣ್ಣಿನಲ್ಲಿರುವ ಸಿಟ್ರಿಕ್ ಆಮ್ಲದ ಜೊತೆ ಅರಿಶಿಣ ಮಿಶ್ರಿತ ಸುಣ್ಣದ ಪ್ರತ್ಯಾಮ್ಲಸೇರಿ ಕೆಂಪು ಬಣ್ಣವಾಗುವುದು. ಸಾಮಾನ್ಯ ರಾಸಾಯನಿಕ ಕ್ರಿಯೆ, 'ತಡೆ' ಹೊಡಿದಿದೆ ಎಂದು ತೋರಿಸುವಾಗ ಚಾಕುವನ್ನು ಚೆನ್ನಾಗಿ ತೊಳೆದಿರುವುದರಿಂದ ರಕ್ತದ ವರ್ಣ ಉಂಟಾಗದು.

ತಲೆ ನೋವು, ಹೊಟ್ಟೆ ನೋವು ಮತ್ತು ಅಜೀರ್ಣತೆಯಿಂದ ಹೊಟ್ಟೆಯಲ್ಲಿ ಗುಡು-ಗುಡು ಶಬ್ದ ಮಾಡುವ ಅಸ್ವಸ್ಥತೆಯುಂಟಾದಾಗ 'ಮೊಗೆ' ಹಾಕುವುದು ಹಳೆ ಮೈಸೂರಿನ ಕಡೆ ಸರ್ವೆ ಸಾಮಾನ್ಯ. ಇದಕ್ಕೆ 'ಕಾಲರಂಜ' ಹಾಕುವುದು ಎಂದೂ ಸಹ ಕರೆಯುತ್ತಾರೆ. ಈ ಪ್ರಯೋಗದಿಂದ ಮೇಲೆ ತಿಳಿಸಿರುವ ಅಸ್ವಸ್ಥತೆಗಳು ಪರಿಹಾರ ವಾಗುವುದೆಂಬ ಕುರುಡು ನಂಬಿಕೆ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಪ್ರಚಲಿತವಿದೆ. ಇದೂ ಸಹ ಸಾಮಾನ್ಯ ವಿಜ್ಞಾನಕ್ಕೆ ಸಂಬಂಧಪಟ್ಟಿದ್ದೇ.

ಒಂದು ಊಟದ ತಟ್ಟೆಯಲ್ಲಿ ಸ್ವಲ್ಪ ನೀರನ್ನು ಸುರುವಿ, ಅದರಲ್ಲಿ ಪಾತ್ರೆಯ ಮಸಿಯನ್ನು ಹಾಕಿ, ಕಪ್ಪು ನೀರು ಮಾಡುವುದು. ಇಲ್ಲವೇ, ಮಸಿಗೆ ಬದಲಾಗಿ ಅರಿಶಿಣದ ಪುಡಿಹಾಕಿ ಅರಿಶಿಣದ ನೀರನ್ನು ಮಾಡುವುದು. ಅರಿಶಿಣದ ನೀರಿಗೆ ಬದಲಾಗಿ ಕೆಂಪು ನೀರು ಮಾಡಬೇಕೆಂದಾಗ ಸ್ವಲ್ಪ ಸುಣ್ಣವನ್ನು ಹಾಕಿ ಕಲಕಿದಾಗ, ಅರಿಶಿಣದ ನೀರು ಕೆಂಪಾಗುತ್ತದೆ. ಮೇಲಿನ ಮೂರು ಅಸ್ವಸ್ಥತೆಗಳನ್ನು ಆಧರಿಸಿ ಆಯಾಯ ಬಣ್ಣದ ನೀರನ್ನು ಮಾಡುತ್ತಾರೆ. ಈ ಪ್ರಯೋಗದಲ್ಲಿ ತಾಮ್ರದ ಊಟದ ತಟ್ಟೆಯನ್ನು ಬಳಸುವುದು ಹೆಚ್ಚು.

ಈ ರೀತಿ ತಯಾರಾದ ಬಣ್ಣದ ನೀರಿನ ತಟ್ಟೆಯ ಮುಂದೆ ಅಸ್ವಸ್ಥ ವ್ಯಕ್ತಿಯನ್ನು ಕುಳ್ಳಿರಿಸುತ್ತಾರೆ. ಪ್ರಯೋಗಿಸುವ ವ್ಯಕ್ತಿ ಸಾಮಾನ್ಯವಾಗಿ ಮನೆಯ ಹಿರಿಯಾಕೆಯಾಗಿರುತ್ತಾಳೆ. ಒಂದು ಖಾಲಿ ತಂಬಿಗೆ ಅಥವಾ ಸೇರಿನ ಆಕಾರದ 'ಪಡಿ' ಯನ್ನು ತೆಗೆದುಕೊಂಡು, ಅದರೊಳಗೆ ಸುಟ್ಟು ಹೋಗುತ್ತಿರುವ ಹಳೆಯ ಬಟ್ಟೆಯ ತುಂಡುಗಳನ್ನು ಹಾಕುತ್ತಾಳೆ. ಆ ಪಾತ್ರೆ ಒಳಗೆ ಬಟ್ಟೆ ಸುಡುತ್ತಿರುವಾಗ ತಕ್ಷಣ ಆ ಪಾತ್ರೆಯನ್ನು ತಟ್ಟೆಯಲ್ಲಿರುವ ಬಣ್ಣದ ನೀರಿನ ಮೇಲೆ ಬೋರಲಾಕುತ್ತಾಳೆ. ತಟ್ಟೆಯಲ್ಲಿರುವ ನೀರೆಲ್ಲಾ ಬೋರಲಾಕಿರುವ ಪಾತ್ರೆಯೊಳಕ್ಕೆ ಊರ್ಧ್ವಮುಖವಾಗಿ ಹೀರಲ್ಪಟ್ಟು ತಟ್ಟೆಯಲ್ಲಿನ ನೀರೆಲ್ಲಾ ಸಂಪೂರ್ಣವಾಗಿ ಖಾಲಿಯಾಗುತ್ತದೆ. ಅಂದರೆ ಬಣ್ಣದ ನೀರೆಲ್ಲಾ ಬೋರಲಾಕಿದ ಪಾತ್ರೆ ತಳ ಸೇರಿಕೊಳ್ಳುತ್ತದೆ. ಈ ರೀತಿ ಪಾತ್ರೆಯಲ್ಲಿ ನೀರು ಹೀರಿಕೊಳ್ಳುವ ಸಮಯದಲ್ಲಿ 'ಗುಡು-ಗುಡು' ಶಬ್ದ ಮಾಡುತ್ತಾ

ಇರುತ್ತದೆ. ಹೊಟ್ಟೆಯಲ್ಲಿ ಕಂಡು ಬರುವ ''ಗುಡು-ಗುಡು'' ಶಬ್ದಕ್ಕೆ ಇದನ್ನು ಹೋಲಿಸಿಕೊಂಡು ಬೇನೆ ಹೋಯಿತೆಂದು ಸಮಾಧಾನ ಪಟ್ಟುಕೊಳ್ಳುತ್ತಾರೆ.

ವೈಜ್ಞಾನಿಕ ಕಾರಣವೇನೆಂದರೆ, ಸುಡುವ ಬಟ್ಟೆ ದಹನಕ್ರಿಯೆಯಲ್ಲಿ ಖಾಲಿ ಪಾತ್ರೆಯೊಳಗಿನ ಗಾಳಿಯಲ್ಲಿರುವ ಆಮ್ಲಜನಕವನ್ನೆಲ್ಲಾ ಉಪಯೋಗಿಸಿಕೊಂಡು ಪಾತ್ರೆಯಲ್ಲಿನ ಒತ್ತಡ ಗಣನೀಯವಾಗಿ ಕಡಿಮೆಯಾಗುತ್ತದೆ. ಇಳಿಮುಖಗೊಂಡ ಒತ್ತಡದ ಖಾಲಿಯಾದ ಸ್ಥಳವನ್ನು, ಹೊರಗಿನ ಹೆಚ್ಚು ಪ್ರಮಾಣದ ಒತ್ತಡದ ಸಂಪೀಡಿತನ (Compression) ಕ್ಕೆ, ಒಳಪಟ್ಟು ನೀರು ತಟ್ಟೆಯಿಂದ ಪಾತ್ರೆಗೆ ನೂಕಲ್ಪಡುತ್ತದೆ. ಹೊರಗಿನ ಒತ್ತಡ ಜಾಸ್ತಿಯಾಗಿರುವಾಗ ಈ ಕ್ರಿಯೆ ಸಹಜವಾಗಿ ಜರುಗುತ್ತದೆ. ಇದೇನು ವಿಶೇಷ ಕ್ರಿಯೆಯಾಗಲೀ, ಪವಾಡವಾಗಲೀ ಏನಿಲ್ಲ. ಇನ್ನು ಗುಡು-ಗುಡು ಶಬ್ಧ ಮಾಡುತ್ತಾ ನೀರು ಪಾತ್ರೆಯೊಳಕ್ಕೆ ಹೋಗುವುದೆಂದರೆ, ಒಳ ನುಗ್ಗಿದ ನೀರು ಗಾಳಿಯಲ್ಲಿ ಉಳಿದ ಇತರೆ ಅನಿಲ ಮತ್ತು ದಹನ ಕ್ರಿಯೆಯಲ್ಲಿ ಉಂಟಾದ ಇಂಗಾಲದ ಡೈ ಆಕ್ಸೈಡ್ ಅನಿಲಗಳನ್ನು ಹೊರಹಾಕುತ್ತದೆ. ಅಂದರೆ ಆ ಅನಿಲಗಳು ನೀರು ಒಳನುಗ್ಗುವ ಸಮಯದಲ್ಲೇ ಅವು ಹೊರಹೋಗುತ್ತವೆ. ಆದ್ದರಿಂದ ನೀರು ಶಬ್ದ ಮಾಡುತ್ತದೆ.

ದೃಷ್ಟಿ ನಿವಾರಣೆಗಾಗಿ 'ಇಳಿ ತೆಗೆಯುವುದು' ಎಂದರೆ ಎಡಗೈ ಮುಷ್ಟಿಯಲ್ಲಿ ಕೆಲವು ವಸ್ತುಗಳನ್ನು ಮುಚ್ಚಿ ಹಿಡಿದು ದೃಷ್ಟಿದೋಷ ಹೊಂದಿದ ವ್ಯಕ್ತಿಯ ತಲೆಯ ಮೇಲಿಂದ ಕೆಳಗಿನವರೆವಿಗೂ ನಿವಾಳಿಸುವುದು. ನಂತರ ಆ ವಸ್ತುಗಳನ್ನು ಉರಿಯುವ ಒಲೆಯ ಬೆಂಕಿಯೊಳಗೆ ಎಸೆಯುವುದು. ಈ ವಸ್ತುಗಳೆಂದರೆ ಉಪ್ಪು ; ಮೆಣಸಿನಕಾಯಿ; ಪೊರಕೆ ಕಡ್ಡಿ ಮತ್ತು ದೃಷ್ಟಿ ತಾಕಿದ ವ್ಯಕ್ತಿಯಿಂದಲೇ ಕಿತ್ತುಕೊಂಡ ಒಂದೆರಡು ತಲೆಗೂದಲುಗಳು. ಉಪ್ಪು ಪಟ-ಪಟನೆ ಸಿಡಿದು, ಉಳಿದ ವಸ್ತುಗಳು ಸುಡುವಾಗ ಘಾಟುವಾಸನೆ ಉಂಟುಮಾಡುತ್ತವೆ. ಆಗ ದೋಷ ಪರಿಹಾರವಾಯಿತೆಂದು ಭಾವಿಸುತ್ತಾರೆ.

ಅಡಿಗೆ ಉಪ್ಪು (ಸೋಡಿಯಂ ಕ್ಲೋರೈಡ್)ನ್ನು ಬೆಂಕಿಯಲ್ಲಿ ಹಾಕಿದಾಗ ಅದರ ಐಯಾನಿಕ್ ಬಾಂಡ್‌ಗಳು ಒಂದೇ ಕ್ಷಣದಲ್ಲಿ ಅತಿಹೆಚ್ಚಿನ ಶಾಖಕ್ಕೆ ಒಳಗಾಗಿ ಅವು ದಿಢೀರನೆ ಹೊಡೆದು (break) ಸಿಡಿಯುತ್ತವೆ. ಆಗ ಪಟ-ಪಟ ಶಬ್ದ ಬರುವುದು.

ಮಾನವನ ಹುಟ್ಟಿನ 'ಆಪರೇಷನ್'ನಿಂದ ಮೊದಲ್ಗೊಂಡು ಆತನ ಸಾವಿನ 'ಕ್ರಿಮೇಷನ್' ವರೆಗೆ ವಿಜ್ಞಾನದ ಬಳಕೆಯಿದೆ. ಮಾನವ ದಿನಚರಿಯೇ ವಿಜ್ಞಾನದಿಂದ ಪ್ರಾರಂಭ. ಬೆಳಗಾಗೆದ್ದರೆ ವಿದ್ಯುದ್ದೀಪ; ತಿನ್ನುವ ಹಿಟ್ಟನ್ನು ಬೀಸುವ ಫ್ಲೋರಿಂಗ್ ಯಂತ್ರ; ಕುಡಿಯುವ ನೀರಿನ ಸರಬರಾಜು ಇತ್ಯಾದಿ, ಮೂಲಕ ಗ್ರಾಮಾಂತರ ಪ್ರದೇಶಗಳಲ್ಲೂ ವಿಜ್ಞಾನ ಹಾಸುಹೊಕ್ಕಾಗಿ ಪ್ರವೇಶಿಸಿ ಜನಸಾಮಾನ್ಯರ ಜೀವನದ ಅವಿಭಾಜ್ಯ ಅಂಗವಾಗಿದೆ. ಆದಾಗ್ಯೂ ವಿಜ್ಞಾನದ ಮಹತ್ವವನ್ನು ಜನಸಾಮಾನ್ಯರು ಅವಶ್ಯಕ ಪ್ರಮಾಣದಲ್ಲಿ ಅರಿತಿಲ್ಲ;

ಮನೆ ಮಾಡಿಕೊಂಡಿಲ್ಲ; ಅದರ ಫಲವನ್ನು ಅನುಭವಿಸಿದರೂ ವಿಜ್ಞಾನಕ್ಕೆ ಧನ್ಯತೆ, ಮಾನ್ಯತೆ, ದೊರೆಯದೆ ಅದು 'ದೇವರ' ಫಲಾನುಗ್ರಹವೆಂಬ ಮೌಢ್ಯಕ್ಕೆ ಶರಣಾಗುವುದು ಒಂದು ವಿಪರ್ಯಾಸ.

ಉದಾಹರಣೆಯಾಗಿ, ವಿಜ್ಞಾನದ ಫಲಶೃತಿಯಾದ ನೀರೆತ್ತುವ ಪಂಪ್‌ಸೆಟ್‌ನ್ನು ಉದ್ಘಾಟಿಸುವ ಸಮಯದಲ್ಲಿ ಯಾರೂ ಆ ಪಂಪ್‌ಸೆಟ್‌ನ್ನು ಆವಿಷ್ಕರಿಸಿದ ಆ ಮಹಾನ್ ವಿಜ್ಞಾನಿಯನ್ನಾಗಲೀ, ಅದನ್ನು ತಯಾರಿಸಿದ ಕಂಪನಿಯನ್ನಾಗಲೀ ಸ್ಮರಿಸರು, ಹೊಗಳರು. ಬದಲಾಗಿ ತಮ್ಮ ಮಠದ ಸ್ವಾಮಿಯ ಆಶೀರ್ವಚನದಿಂದ ದೊರೆತ ಫಲವೆಂದು ಭಾವಿಸಿ ಅವರಿಂದ ಉದ್ಘಾಟಿಸುವ, ದೇವರ ಕೃಪೆಯಿಂದ ಪಡೆದ ಭಾಗ್ಯವೆಂದು ದೇವತಾರ್ಚನೆಯೊಂದಿಗೆ ಪ್ರಾರಂಭಿಸುವ; ಅತ್ಯಂತ ಸಂವೇದನಾಶೀಲ ಆಧುನೀಕರಣದ ವೈದ್ಯಕೀಯ ವಿಜ್ಞಾನದ ಉಪಕರಣಗಳಾದ ಎಕ್ಸ್‌ರೇ ಘಟಕ; ಸ್ಕ್ಯಾನ್ನಿಂಗ್ ಘಟಕ ಇವುಗಳ ಪ್ರಾರಂಭೋತ್ಸವದಲ್ಲೂ ಪುರೋಹಿತರ ಮಂತ್ರಾಕ್ಷತೆ, ದೇವರ ಪೂಜೆಗೆ ಅಗ್ರಸ್ಥಾನ. ವಿಜ್ಞಾನದಿಂದ ವೈಜ್ಞಾನಿಕ ಮನೋಭಾವ ಬೆಳೆಯಬೇಕು. ಅಂಥಹದರಲ್ಲಿ ಅವೈಜ್ಞಾನಿಕ ಮನೋಭಾವದಲ್ಲೇ ವಿಜ್ಞಾನದ ಫಲಶೃತಿ ಅನುಭೋಗಿಸುವುದು ಅತ್ಯಂತ ದುರದೃಷ್ಟಕರ.

ಜನಸಾಮಾನ್ಯರ ಅನೇಕ ಆಚರಣೆಗಳಲ್ಲಿ, ಜೀವನ ರೀತಿಗಳಲ್ಲಿ ವೈಜ್ಞಾನಿಕ ವಿಧಾನಗಳನ್ನು ನಾವು ಅನೇಕ ಹಂತಗಳಲ್ಲಿ ನೋಡಬಹುದು. ಉದಾಹರಣೆಗೆ, ಗ್ರಾಮಾಂತರ ಪ್ರದೇಶಗಳಲ್ಲೂ ಸಹ ಮನೆಕಟ್ಟುವಾಗ ಎರಡೂ ತೊಲೆಗಳ ಮಧ್ಯೆ ಸ್ವಲ್ಪಸ್ಥಳ ಬಿಡುವುದು; ಜಡ್ಡು ಹಿಡಿದವರನ್ನು ಬೇವಿನಮರ ಇಲ್ಲವೇ ಬನ್ನಿಮರದ ಕೆಳಗೆ ಕೆಲವು ದಿನಗಳ ಮಟ್ಟಿಗೆ ಕುಳ್ಳಿರಿಸುವುದು; ಆಳವಾದ ಬಾವಿ ಅಥವಾ ಆಗೇವು (ಕಣಜ) ಗಳಿಗೆ ಇಳಿಯುವ ಮೊದಲು ದೀಪಬಿಟ್ಟು ಪರೀಕ್ಷಿಸಿ ಕೊಳ್ಳುವುದು ಇತ್ಯಾದಿಗಳು ವಿಜ್ಞಾನ ಆಧಾರಿತ ವಿಧಾನಗಳು. ಮರದ ಕೆಳಗೆ ಒಳ್ಳೆ ಪ್ರಾಣವಾಯು (ಆಮ್ಲಜನಕ) ದೊರೆತು ಜಡ್ಡು ನಿವಾರಣೆಯಾಗಲೆಂದು, ಬಾವಿಯ ಕೆಳಗೆ ಆಮ್ಲಜನಕದ ಬದಲು ವಿಷಾನಿಲವಿದ್ದರೆ ಇಳಿಯುವ ಮನುಷ್ಯನಿಗೆ ಅಪಾಯವೆಂದು ಅರಿಯಲು ಉರಿಯುವ ದೀಪ ಬಿಡುವರು. ದೀಪ ಆರಿಹೋದರೆ ಯಾರೂ ಕೆಳಗೆ ಇಳಿಯವುದಿಲ್ಲ.

ಹಾಗೆಯೇ ಕೆಲವು ಘಟನೆಗಳಾದ ಮಗುಹುಟ್ಟಿದಾಗ ಒರಟಾಗಿ ಹೊಕ್ಕಳು ಬಳ್ಳಿಯನ್ನು ಕತ್ತರಿಸುವುದು; ಸನ್ನಿ ಅಥವಾ ತಲೆಶೂಲೆಯಾದಾಗ ದೇಹದ ನಾನಾ ಭಾಗಗಳಿಗೆ ಬರ್ಬರವಾಗಿ ಸುಡುವುದು, ಹೆರಿಗೆಯಾದಾಗ, ಮುಟ್ಟಾದಾಗ ಸ್ತ್ರೀಯರನ್ನು ಮನೆಯಿಂದ ಅಥವಾ 'ಹಟ್ಟಿ' ಯಿಂದ ಹೊರಹಾಕುವ ಕೆಲವು ಸಂಪ್ರದಾಯ ಶ್ರದ್ಧೆಗಳು ಅವೈಜ್ಞಾನಿಕ ಮತ್ತು ಅಪಾಯಕಾರಿ.

ಇನ್ನೂ ಅನೇಕ ಸಾಮಾನ್ಯ ಘಟನೆಗಳನ್ನು ನಾವು ವೈಜ್ಞಾನಿಕವಾಗಿ ವಿಶ್ಲೇಷಿಸಿ, ವಾಸ್ತವಿಕ ಕಾರಣಗಳನ್ನು ಹುಡುಕಬೇಕಿದೆ. ಆ ಜವಾಬ್ದಾರಿ ಸಾರ್ವಜನಿಕವಾದುದು. ಮೌಢ್ಯತೆಗಳಿಗೆ ಈಡಾಗಿ, ಮೋಸಹೊಂದಿ ನಮ್ಮ ಜೀವನವನ್ನು ದ್ವಂದ್ವ ಮಾಡಿಕೊಳ್ಳುವ ಬದಲಿಗ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಂಡು ಸರಳಗೊಳಿಸಿ ಕೊಳ್ಳಬಹುದು. ಮೇಲೆ ಉದಾಹರಿಸಿರುವ ಘಟನೆಗಳಲ್ಲದೆ ಇನ್ನೂ ಅನೇಕ ಘಟನೆಗಳನ್ನು ನಾವು ವಿವೇಚಿಸಿ ವೈಜ್ಞಾನಿಕ ಕಾರಣ ಕಂಡುಕೊಳ್ಳಬಹುದು.

ವಿಜ್ಞಾನ ತನ್ನ ವಸ್ತುನಿಷ್ಠ ವಿಚಾರಗಳಿಂದ ಜನಾದರಣೆ ಪಡೆದು ಜನಮನದಲ್ಲಿ ಬಹಳ ಪ್ರಭಾವ ಬೀರಬೇಕಾಗಿದೆ. ಇದಕ್ಕಾಗಿ ಪ್ರತಿಯೊಂದನ್ನೂ 'ದೈವೀಕರಿಸುವ' ಇಲ್ಲವೇ 'ವೈಭವೀಕರಿಸುವ' ಜನಸಾಮಾನ್ಯರ ದೌರ್ಬಲ್ಯವನ್ನು ಮೊದಲು ತೊಡೆದುಹಾಕ ಬೇಕಾಗಿದೆ. ಆಗ ಮೌಢ್ಯತೆ ಅಳಿಯುತ್ತದೆ. ವೈಜ್ಞಾನಿಕ ಮನೋಭಾವ ಬೆಳೆಯುತ್ತದೆ,.

★

ಶುಭವಾಗಲಿ

ಬಾಹ್ಯಾಂತರಿಕ್ಷದಲ್ಲಿ ನೆಲೆಗೊಂಡಿರುವ ಕೃತಕ ಉಪಗ್ರಹಗಳಿಂದಾಗಿ ಮಾಹಿತಿ-ಮಹಾಪೂರ ಅಡೆತಡೆಯಿಲ್ಲದೆ ಜಗತ್ತಿಗೆ ಪ್ರಸರಣಗೊಳ್ಳುತ್ತಿದೆ; ವಿಶ್ವವೆ ಕುಗ್ರಾಮವಾಗಿ ಕುಸಿದು ಕುಕ್ಕರಿಸಿದೆ.

ಅದನ್ನು ಸಮರ್ಥಿಸುವಂಥ ವಿಷಯಗಳ ಕುರಿತು ಈ ಕಿರು ಹೊತ್ತಗೆ ವೈಜ್ಞಾನಿಕ ವಿಶೇಷಗಳನ್ನು ಬಹಿರಂಗಗೊಳಿಸಿದೆ. ಪ್ರಸ್ತಾಪಿತವಾಗಿರುವ ಶೀರ್ಷಿಕೆಗಳನ್ನು ಗಮನಿಸಿದರೆ ಆ ಅಂಶ ಓದುಗನ ಗಮನಕ್ಕೂ ಬಾರದೆ ಇರದು.

ಆಕಾಶದಲ್ಲಿ ಹಾರಾಡುವ ರೈಲು, ಸುಳ್ಳು ಪತ್ತೆ ಹಚ್ಚುವ ಯಂತ್ರ, ಪೈಲೆಟ್ ರಹಿತ ಪ್ಲೇನು, ಇವೇ ಮುಂತಾದವು ಸಹೃದಯನನ್ನು ತನ್ನ ತೆಕ್ಕೆಗೆ ಬಾಚಿ ಸೆಳೆಯುತ್ತವೆ.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು